ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 31 ಜುಲೈ 27-ಆಗಸ್ಟ್ 2, 1998 ರೂ. 2.00

ಬೆಲೆಯೇರಿಕೆ ವಿರುದ್ಧ ದೇಶವ್ಯಾಪಿ ಜಾಥಾಗಳು

ಸೆಪ್ಟೆಂಬರ್ ಮಧ್ಯದಲ್ಲಿ ದಿಲ್ಲಿಯಲ್ಲಿ ಬೃಹತ್ ರ್‍ಯಾಲಿ : ಸಿಪಿಐ[ಎಂ] ಕರೆ

ಬಿಜೆಪಿ ಸರಕಾರದ ದುರಾಡಳಿತದ ದುಷ್ಫಲವಾಗಿ ಜನರನ್ನು ತತ್ತರಿಸುವಂತೆ ಮಾಡುತ್ತಿರುವ ಬೆಲೆಯೇರಿಕೆಯ ವಿರುದ್ಧ ಒಂದು ರಾಷ್ಟ್ರವ್ಯಾಪಿ ಚಳುವಳಿ ನಡೆಸಲು ಸಿಪಿಐ(ಎಂ) ಕೇಂದ್ರ ಸಮಿತಿ ಕರೆ ನೀಡಿದೆ. ಆಗಸ್ಟ್ ಮಧ್ಯ ಭಾಗದಿಂದ ದೇಶದೆಲ್ಲೆಡೆ ಜಾಥಾಗಳು ನಡೆಯಲಿದೆ. ಈ ಚಳುವಳಿಯ ಕೊನೆಯಲ್ಲಿ ಸೆಪ್ಟೆಂಬರ್ ತಿಂಗಳ ಮಧ್ಯಭಾಗದಲ್ಲಿ ದಿಲ್ಲಿಯಲ್ಲಿ ಒಂದು ಬೃಹತ್ ರ್‍ಯಾಲಿ ನಡೆಸಲು ಸಿಪಿಐ(ಎಂ) ಕೇಂದ್ರ ಸಮಿತಿ ನಿರ್ಧರಿಸಿದೆ. ನಮ್ಮ ಬದುಕಿನ ಮೇಲಿನ ಈ ತೀವ್ರ ಧಾಳಿಯ ಬಗ್ಗೆ ಜನಗಳಲ್ಲಿ ಜಾಗೃತಿ ಮೂಡಿಸುವುದು ಈ ಜಾಥಾಗಳ ಉದ್ದೇಶ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ. ಬಿಜೆಪಿ ಸರಕಾರದ ವಿನಾಶಕಾರಿ ಆರ್ಥಿಕ ನೀತಿಗಳು, ಅದರಿಂದ ಬಂದಿರುವ ವಿಪರೀತ ಬೆಲೆಯೇರಿಕೆ ಹಾಗೂ ಅದರ ವಿಚ್ಛಿದ್ರಕಾರಿ ನೀತಿಗಳು ಮತ್ತು ಕೋಮುವಾದಿ ಅಜೆಂಡಾಕ್ಕೆ ಪ್ರತಿರೋಧವನ್ನು ಬಲಗೊಳಿಸುವ ಏಕಮಾತ್ರ ದಾರಿಯೆಂದರೆ ಸಾಮೂಹಿಕ ಹೋರಾಟಗಳು ಮತ್ತು ಚಳುವಳಿಗಳು, ಸಿಪಿಐ(ಎಂ) ಇವುಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತದೆ ಎಂದು ಸುರ್ಜಿತ್ ಹೇಳಿದ್ದಾರೆ

ಐದು ತಿಂಗಳ ಹಿಂದೆ 'ಅಬ್ ಕಿ ಬಾರಿ ಅಟಲ್ ಬಿಹಾರಿ(ಈ ಬಾರಿ ಅಟಲ್ ಬಿಹಾರಿ) ಎಂಬ ಕೂಗುಗಳನ್ನು ದೇಶಾದ್ಯಂತ ಎಬ್ಬಿಸಲಾಗಿತ್ತು. ಕೆಲವು ಜನ ವಿಭಾಗಗಳು ಅದನ್ನು ನಂಬಿದವು. ಆದರೆ ವಾಜಪೇಯಿ ಸರಕಾರ ಬಂದ ಈ ನಾಲ್ಕು ತಿಂಗಳ ನಂತರ ಈ ಕನಸುಗಳೆಲ್ಲಾ ತಣ್ಣಗಾಗಿವೆ. ಒಂದು ಬಿಕ್ಕಟ್ಟಿನಿಂದ ಇನ್ನೊಂದು ಬಿಕ್ಕಟ್ಟಿಗೆ - ಇದೇ ಬಿಜೆಪಿ ಸರಕಾರದ ಶೋಚನೀಯ ಸ್ಥಿತಿ. ಅದರಿಂದ ಜನರ ಗಮನ ಬೇರೆಡೆಗೆ ಸೆಳೆಯಲು ರಾಷ್ಟ್ರಾಂಧತೆಯ ಪ್ರದರ್ಶನ, ಹಿಂದುತ್ವದ ಅಜೆಂಡಾ. ಮೇ ತಿಂಗಳಲ್ಲಿ ಪೋಖ್ರಾನಿನಲ್ಲಿ ನಡೆಸಿದ ಪರೀಕ್ಷಣೆಗಳು ದೀರ್ಘ ಕಾಲದಿಂದ ದೇಶಕ್ಕೆ ಪ್ರತಿಷ್ಠೆ ನೀಡಿದ ನೀತಿಗಳನ್ನು ಬದಲಿಸಿಬಿಟ್ಟಿವೆ. ವಿ.ಹೆಚ್.ಪಿ ಯ ದೇವಸ್ಥಾನ ಕಟ್ಟುವ ಸಿದ್ಧತೆಯ ಕಾನೂನುಬಾಹಿರ ಪ್ರಯತ್ನಗಳು, ಆರ್.ಎಸ್.ಎಸ್. ಕೂಟದ ನ್ಯಾಯಾಲಯದ ತೀರ್ಪುಗಳನ್ನು ಬುಡಮೇಲು ಮಾಡುವ ಅಜೆಂಡಾವನ್ನು ಬಯಲುಮಾಡಿವೆ. ಈ ಸರಕಾರದ ಆರ್ಥಿಕ ನೀತಿಗಳಂತೂ ತೀವ್ರ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಜನಗಳ ಮೇಲೆ ಇನ್ನಷ್ಟು ಧಾಳಿಗಳ, ಬಹುರಾಷ್ಟ್ರೀಯ ಕಂಪನಿಗಳಿಗೆ ಭಾರೀ ರಿಯಾಯ್ತಿಗಳ ಸಂಕೇತ ನೀಡಿದೆ. ಸಾಲದ್ದಕ್ಕೆ ಮೂರು ಹೊಸ ರಾಜ್ಯಗಳ ರಚನೆಯ ನಿರ್ಧಾರ ದೇಶದ ಇತರೆಡೆಗಳಲ್ಲೂ ಇಂತಹ ಬೇಡಿಕೆಗಳನ್ನೆತ್ತಲು ಕುಮ್ಮಕ್ಕು ನೀಡಿದೆ. ಇವೆಲ್ಲದರ ಜತೆಗೆ ಈ ಸಮ್ಮಿಶ್ರ ಸರಕಾರದ ನಿರಂತರ ಆಂತರಿಕ ಅಸ್ಥಿರತೆ-ನಿರಂತರವಾಗಿ ಹಲವಾರು 'ಸಂದೇಹವಾಹಕ'ದ ಓಡಾಟ.

ಈ ಹಿನ್ನೆಲೆಯಲ್ಲಿ ಜುಲೈ 16 ರಿಂದ 18 ರವರೆಗೆ ಹೊಸದಿಲ್ಲಿಯಲ್ಲಿ ಬಿನೋಯ್ ಚೌಧರಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿಯು ಈ ಮೇಲಿನ ಚಳುವಳಿಗೆ ಕರೆ ನೀಡಿದೆ.

16ನೇ ಮಹಾಧಿವೇಶನ

ಮುಖ್ಯವಾಗಿ ಸಭೆಯು ಅಕ್ಟೋಬರ್ 5 ರಿಂದ 11 ರ ವರೆಗೆ ಕಲ್ಕತ್ತಾದಲ್ಲಿ ನಡೆಯಲಿರುವ ಪಕ್ಷದ 16ನೇ ಅಧಿವೇಶನದಲ್ಲಿ ಮಂಡಿಸಲಾಗುವ ಕರಡು ರಾಜಕೀಯ ನಿರ್ಣಯದ ಕುರಿತು ಚರ್ಚಿಸಿ ಅಂಗೀಕರಿಸಿತು.

ಮುಂದಿನ 2 ತಿಂಗಳಲ್ಲಿ ಈ ಕರಡು ರಾಜಕೀಯ ನಿರ್ಣಯವನ್ನು ದೇಶದ ಪ್ರತಿಯೊಂದು ಘಟಕವು ಪ್ರತ್ಯೇಕ ಪ್ರತ್ಯೇಕವಾಗಿ - ಶಾಖೆಗಳು, ಮಧ್ಯಂತರ ಸಮಿತಿಗಳು, ಜಿಲ್ಲಾ ಸಮಿತಿಗಳು, ರಾಜ್ಯ ಸಮಿತಿಗಳು - ಸಭೆಗಳಲ್ಲಿ ಸಾಮೂಹಿಕವಾಗಿ ಚರ್ಚಿಸಿ, ಸೂಕ್ತ ತಿದ್ದುಪಡಿಗಳನ್ನು ಕೇಂದ್ರ ಸಮಿತಿಗೆ ಕಳುಹಿಸಿಕೊಡಲಾಗುತ್ತದೆ. ಅದೇ ರೀತಿ, ತಮ್ಮ ಘಟಕದಲ್ಲಿ ತಾವು ಮಂಡಿಸುವ ತಿದ್ದುಪಡಿಯು ಸರ್ವಾನುಮತದಿಂದ ಘಟಕದ ತಿದ್ದುಪಡಿಯಾಗಿ ಅಂಗೀಕೃತವಾಗದಿದ್ದಲ್ಲಿ, ತಾವೇ ಸ್ವತಃ ತಮ್ಮ ವೈಯಕ್ತಿಕ ನೆಲೆಯಲ್ಲಿ ಪಕ್ಷದ ಸದಸ್ಯರಾಗಿ ಸದಸ್ಯರು ತಿದ್ದುಪಡಿಯನ್ನು ಕೇಂದ್ರ ಸಮಿತಿಗೆ ಕಳುಹಿಸಿಕೊಡುತ್ತಾರೆ. ಅಂದರೆ, ದೇಶದ ಪ್ರತಿಯೊಬ್ಬ ಸಿಪಿಐ(ಎಂ) ಪಕ್ಷದ ಸದಸ್ಯನೂ ಮುಂದಿನ ಎರಡು ತಿಂಗಳಲ್ಲಿ ತಮ್ಮ ಪಕ್ಷದ ಪ್ರಮುಖ ಕರ್ತವ್ಯವಾಗಿ ಹಿಂದಿನ ಮೂರು, ಮೂರೂವರೆ ವರ್ಷಗಳ ಅನುಭವದ ಆಧಾರದಲ್ಲಿ ಮುಂದಿನ ವರ್ಷಗಳಲ್ಲಿ ನಮ್ಮ ಪಕ್ಷದ ಕಾರ್ಯತಂತ್ರ ಹೇಗಿರಬೇಕೆಂಬುದರ ಕುರಿತು ಪ್ರತ್ಯೇಕವಾಗಿ ಚಿಂತಿಸಿ ತಮ್ಮ ಅಭಿಪ್ರಾಯಗಳನ್ನು ತಿದ್ದುಪಡಿಗಳ ಅಥವಾ ಸೂಚನೆಗಳ ರೂಪದಲ್ಲಿ ಕೇಂದ್ರ ಸಮಿತಿಗೆ ಕಳುಹಿಸಿಕೊಡುತ್ತಾರೆ.

ಈ ಪ್ರಕ್ರಿಯೆ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಜೀವಾಳವಾಗಿದೆ. ಆದ ಕಾರಣ, ಪ್ರತಿಯೊಬ್ಬ ಪಕ್ಷದ ಸದಸ್ಯನು/ಳು ಈ ಪ್ರಕ್ರಿಯೆಯಲ್ಲಿ ಪ್ರಾಮಾಣಿಕವಾಗಿ ಮತ್ತು ಶಿಸ್ತುಬದ್ಧವಾಗಿ ಭಾಗಿಯಾಗುವಂತೆ ತನ್ನನ್ನು ತೊಡಗಿಸಿಕೊಳ್ಳುತ್ತಾರೆ.

ಅದೇ ವೇಳೆ, ಹಿಂದಿನ ಕೇಂದ್ರ ಸಮಿತಿ ಸಭೆಯಲ್ಲೂ, ಈಗ ನಡೆದ ಕೇಂದ್ರ ಸಮಿತಿ ಸಭೆಯಲ್ಲೂ ತೀರ್ಮಾನವಾದಂತೆ ದೇಶದ ಎಲ್ಲಾ ಪಕ್ಷದ ಘಟಕಗಳು ತಮ್ಮ ತಮ್ಮ ಕಾರ್ಯವಲಯಗಳಲ್ಲಿ ಹಾಗೂ ಹೊಸ ಕಾರ್ಯ ಕ್ಷೇತ್ರಗಳಲ್ಲಿ ಸಂಘಟಿತವಾಗಿ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರನ್ನೊಳಗೊಂಡು ಕೇಂದ್ರದಲ್ಲಿ ಅಧಿಕಾರಾರೂಢರಾದ ಆರ್.ಎಸ್.ಎಸ್. ನಿಯಂತ್ರಿತ ಬಿಜೆಪಿಯನ್ನು ಜನತೆಯ ಮಧ್ಯೆ ಪ್ರತ್ಯೇಕಿಸಲು ಅದರ ಧೋರಣೆಗಳನ್ನು ಒಂದೊಂದಾಗಿ ವಿಮರ್ಶಿಸುವ ಮೂಲಕ - ಬಯಲು ಗೊಳಿಸಲು ಮುಂದಾಗಬೇಕು ಎಂದು ಸಿ.ಪಿ.ಐ(ಎಂ) ಕೇಂದ್ರ ಸಮಿತಿ ಸದಸ್ಯರೂ, ರಾಜ್ಯ ಕಾರ್ಯದರ್ಶಿಗಳೂ ಆದ ಪಿ. ರಾಮಚಂದ್ರ ರಾವ್ ಹೇಳಿದ್ದಾರೆ.

ಎಲ್ಲರಿಗೆ ತಿಳಿದಂತೆ ಬಿಜೆಪಿ ಪಕ್ಷ ಮತ್ತದರ ಮಿತ್ರ ಪಕ್ಷಗಳು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ಗಂಡಾಂತರ ಕಾರಿ ಧೋರಣೆಗಳನ್ನು ತಂದಿವೆ. ಸಂಕ್ಷಿಪ್ತವಾಗಿ,

1. ಏಕಾಏಕಿಯಾಗಿ ಅಣು ಸ್ಫೋಟಗಳನ್ನು ಮಾಡುವ ಮೂಲಕ ದೇಶದ ಸಾರ್ವತ್ರಿಕವಾಗಿ ಎಲ್ಲರ ಒಪ್ಪಿಗೆ ಪಡೆದುಕೊಂಡು ಬಂದ ವಿದೇಶಿ ಧೋರಣೆಯನ್ನು ತೀವ್ರವಾಗಿ ಬದಲಾಯಿಸಿದುದು. ನೆರೆಹೊರೆ ರಾಷ್ಟ್ರಗಳ ಜತೆ ಬೆಳಸಿಕೊಂಡು ಬಂದ ಸೌಹಾರ್ದಯುತ ನೀತಿಯನ್ನು ಬದಲಿಸಿ, ನೆರೆಹೊರೆಯ ರಾಷ್ಟ್ರಗಳ ಜತೆ ವೈರತ್ವದ ಶಕ್ತಿಪ್ರದರ್ಶನದ ನೀತಿಯನ್ನು ರೂಪಿಸಲು ಹೊರಟಿದುದು. ಪರಿಣಾಮವಾಗಿ ಎಲ್ಲಾ ರಾಷ್ಟ್ರಗಳಿಂದಲೂ ನಿಂದೆಗೆ ಒಳಗಾದುದು. ಕಾಶ್ಮೀರ ಪ್ರಶ್ನೆಯನ್ನು ದ್ವಿಪಕ್ಷ ನೆಲೆಯಿಂದ ಅಂತರರಾಷ್ಟ್ರೀಯ ನೆಲೆಗೆ ಮಾರ್ಪಡಿಸಿ, ಅಮೇರಿಕನ್ ಸಾಮ್ರಾಜ್ಯಶಾಹಿಗಳ ಬಲೆಗೆ ಬಿದ್ದುದು ಇತ್ಯಾದಿ.

2. ದೇಶದ ಜನತೆಯ ಮುಂದಿರುವ ಜೀವನದ ಹಾಗೂ ಅಭಿವೃದ್ಧಿಯ ಪ್ರಶ್ನೆಗಳ ಬಗ್ಗೆ - ಬೆಲೆಯೇರಿಕೆಯನ್ನು ತಡೆಗಟ್ಟುವುದು, ಹೊಸ ಉದ್ಯೋಗಗಳನ್ನು ಸೃಷ್ಟಿಸಿ ಕೋಟ್ಯಾಂತರ ಯುವಕ-ಯುವತಿಯರಿಗೆ ಉದ್ಯೋಗವನ್ನು ಒದಗಿಸುವುದು, ಸಾಮೂಹಿಕ ಆತ್ಮಹತ್ಯೆಯನ್ನು ಮಾಡಿಕೊಳ್ಳುವಂತ ಪರಿಸ್ಥಿತಿಗೆ ದೂಡಲ್ಪಟ್ಟ ರೈತ ಜನರ ಸಮಸ್ಯೆಗಳನ್ನು ಬಗೆಹರಿಸುವುದು, ನೀರಾವರಿ, ವಿದ್ಯುಚ್ಛಕ್ತಿ ಕ್ಷೇತ್ರಗಳ ತೀವ್ರಕೊರತೆಯನ್ನು ನಿಯಂತ್ರಿಸುವುದು, ಇತ್ಯಾದಿ - ಎದುರಿಸಲು ಮುಂದಾಗುವುದರ ಬದಲು ಬಿಜೆಪಿ - ಆರ್.ಎಸ್.ಎಸ್. ಕೇಂದ್ರ ಸರ್ಕಾರವು ಅಣುಬಾಂಬು ಸ್ಫೋಟಗೊಳಿಸಿ, ಭಾರತದ ಭೂಖಂಡದಲ್ಲೇ ಈ ತನಕ ಇಲ್ಲದ 'ಶಸ್ತ್ರಾಸ್ತ್ರ ಪೈಪೋಟಿ'ಯ ಸ್ಥಿತಿಗೆ ತಂದು ನಿಲ್ಲಿಸಿದುದು ಹಾಗೂ ಎಲ್ಲಾ ರಾಷ್ಟ್ರಗಳ - ಅದರಲ್ಲೂ ಅಮೆರಿಕಾ, ಜಪಾನ್ ರಾಷ್ಟ್ರಗಳ - ಆರ್ಥಿಕ ನಿರ್ಭಂಧಕ್ಕೆ ಒಳಗಾಗುವಂತೆ ಮಾಡಿದುದು

3. ಪರಿಣಾಮವಾಗಿ ಇಂದು ಭಾರತ ಸರಕಾರವು ವಿದೇಶಿ ಸಾಲಕ್ಕೆ ಬಡ್ಡಿ ಕೊಡಲೂ ಹಿಂದು ಮುಂದು ನೋಡುವ ಪರಿಸ್ಥಿತಿಗೆ ಬಂದಿದೆ. ಯಾವಾಗಲೂ ಖರ್ಚು ಮಾಡುವ ಹಣಕ್ಕೂ ಕೊರತೆಯುಂಟಾಗಿ, ಇಡೀ ದೇಶದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನೆಲ್ಲಾ ನಿಲ್ಲಿಸಬೇಕಾದ ಪರಿಸ್ಥಿತಿಯುಂಟಾಗಿದೆ.

4. ಹೊಸ ಬಂಡವಾಳವು ದೇಶದೊಳಕ್ಕೆ ಬರುವುದು ನಿಂತುಹೋಗಿ, ಇದ್ದ ವಿದೇಶಿ ಹಣವೂ ಒಂದಲ್ಲ ಒಂದು ನೆವದಲ್ಲಿ ದೇಶದ ಹೊರಗೆ ಹೋಗುತ್ತಿದೆ. ಶೇರು ಮಾರ್ಕೆಟ್ ಕುಸಿಯುತ್ತಿದೆ. ರೂಪಾಯಿಯ ಬೆಲೆಯು ತೀವ್ರವಾಗಿ - 15 ಶೇಕಡಾ ಕಡಿಮೆಯಾಗಿದೆ. ಮುಂದಕ್ಕೆ ಇನ್ನೂ ಕುಸಿಯುವ ಲಕ್ಷಣಗಳು ಕಾಣುತ್ತಿವೆ.

5. ಕೈಗಾರಿಕೆ ಅಭಿವೃದ್ಧಿ ವೇಗ ತೀರ ಕಡಿಮೆಯಾಗುತ್ತಿದೆ. ಕೃಷಿ ಉತ್ಪನ್ನಗಳಲ್ಲಿ ತೀವ್ರ ಅಸಮತೋಲನ ಉಂಟಾಗುತ್ತಿದೆ. ಆಹಾರ ಧಾನ್ಯಗಳ ಉತ್ಪನ್ನ ಕಡಿಮೆಯಾಗುತ್ತಿದೆ.

6. ಪುನಃ ಅಯೋಧ್ಯೆಯಲ್ಲಿ ವಿವಾದಾಸ್ಪದ ಸ್ಥಳದಲ್ಲಿ ರಾಮಮಂದಿರ ಕಟ್ಟುವ ಕುರಿತು ತಯಾರಿ ನಡೆಯುತ್ತಿದೆ. ಪಾರ್ಲಿಮೆಂಟಿನ ಒಳಗೂ, ಪಾರ್ಲಿಮೆಂಟಿನ ಹೊರಗೂ ಬಹುಮಂದಿ ಈ ವಿವಾದದ ಕುರಿತು ಬಿಜೆಪಿ-ಆರ್.ಎಸ್.ಎಸ್.ನೀತಿಯನ್ನು ಖಂಡಿಸಿದರೂ ಇದು ದೇಶದ ಐಕ್ಯತೆ - ಸಮಗ್ರತೆಗೆ ಗಂಡಾಂತರವೆಂದು ಒತ್ತಿ ಹೇಳಿದರೂ 'ಕೋರ್ಟು ತೀರ್ಪು ಬರಲಿ, ಬಿಡಲಿ ನಾವು ವಿವಾದಾಸ್ಪದ ಸ್ಥಳದಲ್ಲೇ ರಾಮಮಂದಿರ ಕಟ್ಟುವುದು' ಎಂದು ಈ ಮಂದಿ ಪ್ರಚಾರ ಮಾಡುತ್ತಿದ್ದಾರೆ. ಮಾತ್ರವಲ್ಲ ದೇಶದ ಹಲವಾರು ಭಾಗಗಳಲ್ಲಿ - ಅಯೋಧ್ಯೆಯ ಸುತ್ತಮುತ್ತ ರಾಮಮಂದಿರದ ಸ್ತಂಭಗಳನ್ನು ಗೋಪುರಗಳನ್ನು ತಯಾರಿ ಮಾಡುತ್ತಿದ್ದಾರೆ. ಆರ್.ಎಸ್.ಎಸ್. ಪ್ರಮುಖ ರಾಜೇಂದ್ರ ಸಿಂಗ್ "ಬಿಜೆಪಿ ಸರ್ಕಾರದ ವಕ್ತಾರರು ಪಾರ್ಲಿಮೆಂಟಿನಲ್ಲಿ ಏನುಬೇಕಾದರೂ ಹೇಳಿಕೊಳ್ಳಲಿ, ವಾಜಪೇಯಿಯವರು 'ಇದು ರಾಷ್ಟ್ರೀಯ ಕಾರ್ಯಕ್ರಮ'ದಲ್ಲಿ ಸೇರಲಿಲ್ಲ ಎಂದು ಹೇಳಿದರೂ, ನಾವು ಮಾತ್ರ ಮಂದಿರವನ್ನು ಕಟ್ಟಿಯೇ ತೀರುವೆವು" ಎಂದು ಬಹಿರಂಗವಾಗಿ ಹೇಳಿಕೆಯನ್ನಿತ್ತಿದ್ದಾರೆ ಮಾತ್ರವಲ್ಲ, ಬಿಜೆಪಿ ಎಂ.ಪಿ.ಗೆ 'ತಮ್ಮ ಆರ್.ಎಸ್.ಎಸ್. ಹುಕುಂನ್ನು ಅನುಸರಿಸಬೇಕು' ಎಂದು ಬೆದರಿಕೆಯನ್ನು ಒಡ್ಡಿದ್ದಾರೆ.

7. ದೇಶದ ಹಲವು ಕಡೆಗಳಲ್ಲಿ ಆಯ್ದ ಪ್ರದೇಶಗಳಲ್ಲಿ ಮತೀಯ ದಂಗೆಗಳನ್ನು ನಡೆಸುತ್ತಿದ್ದಾರೆ.

8. ಪ್ರತ್ಯೇಕವಾಗಿ, ಕ್ರಿಶ್ಚಿಯನ್ನರ ವಿರುದ್ಧ ಹಲವಾರು ರೀತಿಯ ಕಾರ್ಯಕ್ರಮಗಳನ್ನು ಹಾಕಲು ಬಿಜೆಪಿ-ಆರ್.ಎಸ್.ಎಸ್. ಮುಂದಾಗಿದ್ದಾರೆ. ದಿಲ್ಲಿಯಲ್ಲಿ ಕ್ರಿಶ್ಚಿಯನ್ ಚರ್ಚುಗಳನ್ನು 'ಧರ್ಮ ಮಂದಿರ' ಗಳೆಂದು ಪರಿಗಣಿಸುವುದಿಲ್ಲ ಎಂಬ ಹುಕುಂ ಹೊರಡಿಸಿದ್ದು, ರಾಜಸ್ತಾನ, ಉತ್ತರ ಪ್ರದೇಶ ಮತ್ತಿತರ ರಾಜ್ಯಗಳಲ್ಲಿ ಹಲವು ಕ್ರಿಶ್ಚಿಯನ್ ಚರ್ಚುಗಳನ್ನು ಒಡೆದು ಹಾಕಿದುದು, ಕ್ರಿಶ್ಚಿಯನ್ನರು ಇರುವ ಆದಿವಾಸಿ ತಂಡಗಳ ನಡುವೆ -ಹಿಂದೂ ತಂಡಗಳನ್ನು ಪ್ರಚೋದಿಸಿ ಗಲಭೆಗಳು ಉಂಟಾಗುವಂತೆ ಮಾಡುವುದು, ಬೈಬಲ್‌ನ್ನು ಸುಟ್ಟು ಹಾಕುವುದು-ಈ ಕೆಲಸಗಳನ್ನು ಮಾಡುತ್ತಿದ್ದಾರೆ. ಬಹಿರಂಗವಾಗಿಯೇ ತಮ್ಮ ಉದ್ದೇಶ 'ಕ್ರಿಶ್ಚಿಯನ್ನರ ಪ್ರಭಾವ' ದಿಂದ ಜನರನ್ನು ಬಿಡುಗಡೆಗೊಳಿಸುವುದು ಎಂದು ಪ್ರಚಾರ ನಡೆಸುತ್ತಿದ್ದಾರೆ.

9. ಕೇರಳ ವಿದ್ಯಾರ್ಥಿಗಳು 'ಅಹಮದಾಬಾದಿನ ಮೆಡಿಕಲ್ ಕಾಲೇಜುಗಳಲ್ಲಿ ಸೀಟು ಪಡೆದುಕೊಂಡು ಓದುತ್ತಿದ್ದಾರೆ, ಅವರು ಗುಜರಾತಿಗಳ ಮಕ್ಕಳ ಸೀಟುಗಳಿಗೆ ಧಕ್ಕೆ ತಂದವರು' ಎಂದು ಪ್ರಚಾರ ಮಾಡಿ, ಅವರನ್ನು ಹೊಡೆದು ಹಾಕುವ ಮಟ್ಟಕ್ಕೂ ಮುಂದುವರಿಸಿದ್ದಾರೆ.

10. ಮುಂಬೈಯಲ್ಲಿ ಶಿವಸೇನೆ-ಬಿಜೆಪಿ ಸರಕಾರವು "1994-95 ರಲ್ಲಿ ನಡೆದ ವಿಶಾಲ ಪ್ರಮಾಣದ ಮತೀಯ ದಂಗೆಗಳ 'ಶ್ರೀಕೃಷ್ಣ ವರದಿ'ಯನ್ನು ಇನ್ನೂ ವಿಧಾನ ಸಭೆಯಲ್ಲಿ ಮಂಡಿಸಲು ತಯಾರಾಗುತ್ತಿಲ್ಲ.

11. ಉತ್ತರ ಪ್ರದೇಶದಲ್ಲಿ ಅರಾಜಕತೆ ತಾಂಡವವಾಡುತ್ತಿದೆ. ಕೊಲೆಗಳು, ಸುಲಿಗೆಗಳು, ಅಪಹರಣಗಳು, ಮಹಿಳೆಯರ ಮೇಲೆ ದೌರ್ಜನ್ಯಗಳು, ದಲಿತರ ಮೇಲೆ ದೌರ್ಜನ್ಯಗಳು ದಿನೇ ದಿನೇ ಹೆಚ್ಚಾಗುತ್ತಿವೆ. ಹಾಗೂ ಇತ್ತೀಚಿಗೆ ಉತ್ತರ ಪ್ರದೇಶದ ವಿಧಾನಸಭೆಯಲ್ಲಿ ತಮ್ಮ ಪಕ್ಷದ ಬೆಂಬಲ ಕಡಿಮೆ ಇದ್ದರೂ, ಸ್ಪೀಕರ್ ಸ್ಥಾನವನ್ನು ಉಪಯೋಗಿಸಿ, ಹಣಕಾಸಿನ ಬಿಲ್ಲುಗಳು ಪಾಸಾಗಿವೆ ಎಂದು ಸಾರುವ ಮಟ್ಟಕ್ಕೆ ಹೋಗಿದ್ದಾರೆ.

12. ರಾಷ್ಟ್ರೀಯ ಇತಿಹಾಸ ಮಂಡಳಿಯಲ್ಲಿ ಆರ್.ಎಸ್.ಎಸ್. ಜನಗಳನ್ನೇ ನೇಮಿಸಿ ದೇಶದ ಚರಿತ್ರೆಯನ್ನೇ ತಮ್ಮ ಮತೀಯ ದೃಷ್ಟಿಯಿಂದ ಬರೆಯುವಂತೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

13. ಒಂದೆಡೆ ರಾಜ್ಯಗಳ ಹಕ್ಕುಗಳ ಮೇಲೆ ಪ್ರಹಾರ ಮಾಡುತ್ತಾ, ಇನ್ನೊಂದೆಡೆ ಹೊಸ ರಾಜ್ಯಗಳ ರಚನೆಗೆ ಈ ಸರಕಾರ ಮುಂದಾಗಿದೆ. ಭಾರತ ಒಂದು ವಿಭಿನ್ನ ಭಾಷೆ, ಪರಂಪರೆಗಳ ಜನಗಳ ಒಕ್ಕೂಟ ಎಂಬುದನ್ನು ಒಪ್ಪದೆ ಸಣ್ಣ ರಾಜ್ಯಗಳು ಕೇಂದ್ರಕ್ಕೆ ಅಡಿಯಾಳಾಗಿರುತ್ತವೆ ಎಂಬ ಕಾರಣಕ್ಕಾಗಿಯೇ ಈ ಕೆಲಸಕ್ಕೆ ಕೈ ಹಾಕಿದೆ.

ಸಿಪಿಐ(ಎಂ) ಘಟಕಗಳು ಮುಂದಿನ ತಿಂಗಳುಗಳಲ್ಲಿ ಈ ಕುರಿತು ವ್ಯಾಪಕ ಪ್ರಚಾರವನ್ನು ಕೈಗೊಂಡು ಈ ಬಿಜೆಪಿ - ಆರ್.ಎಸ್.ಎಸ್. ಕೂಟದ ಸರಕಾರವನ್ನು ಜನರ ಮಧ್ಯೆ ಬಯಲಿಗೆಳೆಯಲು ಮುಂದಾಗಬೇಕು ಎಂದು ಪಿ. ರಾಮಚಂದ್ರ ರಾವ್ ಹೇಳಿದ್ದಾರೆ. ○

ಆಗಸ್ಟ್ 12 ರವರೆಗೆ ಜೀವದಾನ?

ಜುಲೈ 21 ರೊಳಗೆ ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ತೀರ್ಪನ್ನು ಜಾರಿಗೊಳಿಸಬೇಕೆಂಬ ಎಐಎಡಿಎಂಕೆ ಮುಖಂಡೆ ಜಯಲಲಿತಾ ರವರ ಮತ್ತೊಂದು ಬೆದರಿಕೆಯ ಹಿನ್ನೆಲೆಯಲ್ಲಿ ಈ ಸಮಸ್ಯೆ ಇತ್ಯರ್ಥಕ್ಕೆ ಇನ್ನೂ 6 ವಾರ ಕೊಡಬೇಕೆಂಬ ಕೇಂದ್ರ ಸರ್ಕಾರದ ಮನವಿಯನ್ನು ತಿರಸ್ಕರಿಸಿ ಮೂರು ವಾರಗಳೊಳಗೆ ಈ ಸಮಸ್ಯೆಯನ್ನು ಬಗೆಹರಿಸಲು ಕಾರ್ಯಯೋಜನೆಯೊಂದನ್ನು ರೂಪಿಸಬೇಕು ಎಂದು ಜುಲೈ 21 ರಂದು ಸುಪ್ರೀಂ ಕೋರ್ಟ್ ಆದೇಶ ನೀಡಿದೆ. ಗಂಭೀರ ಪರಿಣಾಮದ 'ಎಚ್ಚರಿಕೆ' ನೀಡಿದ ಜಯಲಲಿತಾ ಸದ್ಯಕ್ಕೆ ಸುಮ್ಮನಿದ್ದಾರೆ. ಈ ಹಿಂದೆ ಈ ಸಮಸ್ಯೆಯನ್ನು ಪರಸ್ಪರ ಮಾತುಕತೆಗಳ ಮೂಲಕ ಪರಿಹರಿಸಬೇಕೆಂದು ಹೇಳುತ್ತಿದ್ದಾಗ ಅದರ ಬದಲು ಭಾವೋದ್ರೇಕವನ್ನು ಎಬ್ಬಿಸಿ ರಾಜಕೀಯ ಲಾಭ ಪಡೆಯಲು ಮುಂದಾಗುತ್ತಿದ್ದ ಪಕ್ಷಗಳು ಈಗ ತಮ್ಮದೇ ತಂತ್ರಗಳು ತಮಗೆ ತಿರುಗುಬಾಣವಾಗುತ್ತಿರುವುದನ್ನು ಕಾಣುತ್ತಿದ್ದಾರೆ.

ಇತಿಹಾಸದ ಪುಟಗಳಿಂದ



ರಾಬಿನ್ ದ್ವೀಪ

ಕತ್ತಲು ಕವಿದ ವರ್ಷಗಳು

ವರ್ಣಭೇದದ ವಿರುದ್ಧ, ಕರಿಯರ ವಿಮೋಚನೆಯ ಹೋರಾಟಕ್ಕಾಗಿ 27 ವರ್ಷಗಳಷ್ಟು ದೀರ್ಘಕಾಲ ರಾಬಿನ್ ದ್ವೀಪದಲ್ಲಿ 'ಜೀವಾವಧಿ ಶಿಕ್ಷೆ' ಅನುಭವಿಸಿದ ನೆಲ್ಸನ್ ಮಂಡೇಲಾರ ಅದಮ್ಯ ಚೇತನದ ಕಥೆ ಕೇಳುವುದೆಂದರೆ ರೋಮಾಂಚನ ಉಂಟು ಮಾಡುವಂತಹುದು, ಅದರಲ್ಲೂ ಅವರದೇ ಮಾತುಗಳಲ್ಲಿ. ಸ್ವಾತಂತ್ರ್ಯದತ್ತ ದೀರ್ಘ ಪಯಣ (Long Walk to Freedom)ನೆಲ್ಸನ್ ಮಂಡೇಲಾರ ಆತ್ಮ ಕಥನ. 'ರಾಬಿನ್ ದ್ವೀಪ - ಕತ್ತಲು ಕವಿದ ವರ್ಷಗಳು' ಆ ಆತ್ಮ ಕಥನದ ಪ್ರಕರಣ. ಇಲ್ಲಿ ಆಯ್ದ ಆ ಪ್ರಕರಣದ ಭಾಗ ರಾಬಿನ್ ದ್ವೀಪದಲ್ಲಿ ಅವರ ಕರಾಳ ಬದುಕು ಆರಂಭವಾದ ಬಗ್ಗೆ ಹೇಳುತ್ತದೆ. ಕಳೆದ ಸಂಚಿಕೆಯಿಂದ ಮುಂದುವರೆದುದು

ಇನ್ನು ಕೆಲವು ದಿನಗಳಲ್ಲಿ ನಮಗೆ ಇನ್ನಷ್ಟು ಜೊತೆಗಾರರಾದರು. ನೆವಿಲೆ ಅಲೆಕ್ಸಾಂಡರ್ ಯುರೋಪೇತರ ಐಕ್ಯತೆ ಚಳುವಳಿ ಎಂಬ ಸಂಘಟನೆಯ ಪ್ರಮುಖ ಸದಸ್ಯ ಹಾಗೂ ಅದರಲ್ಲಿ ಯು.ಟಿ.ಚಾನ್ ಕ್ಲಬ್ ಎಂಬ ತೀವ್ರಗಾಮಿ ಗುಂಪು ರಚಿಸಿದ್ದ ಆತ. ಗೆರಿಲ್ಲಾ ಹೋರಾಟದ ಬಗ್ಗೆ ಅಧ್ಯಯನ ನಡೆಸಿತ್ತು ಈ ಗುಂಪು. ಅದೇ ಗುಂಪಿನ ಇನ್ನೊಬ್ಬ ಫಿಕಿಲೆ ಬಾಮ್. ಪಾನ್ ಆಫ್ರಿಕನ್ ಕಾಂಗ್ರೆಸ್ (ಪಿ.ಎ.ಸಿ.) ನ ರಾಷ್ಟ್ರೀಯ ಕಾರ್ಯಕಾರಿಣಿಯ ಪ್ರಮುಖ ಸದಸ್ಯ ಹಾಗೂ ಪಿ.ಎ.ಸಿ. ಯಲ್ಲಿ ಸ್ಥಿಮಿತ ಇರುವ ನಾಯಕರಲ್ಲಿ ಒಬ್ಬ. ಸ್ವಯಂಮಾಡಳಿತದ ಟ್ರಾನ್ಸ್ ಕೆಮ್‌ಯ ಮುಖ್ಯಮಂತ್ರಿ ಕೆ.ಡಿ ಮಟಾನ್ ಝಿನೂಯ 'ಹತ್ಯೆಯ ಪಿತೂರಿ' ಆಪಾದಿತರಾದ ಇಳಿವಯಸ್ಸಿನ ರೈತರೂ ನಮ್ಮ ಜೊತೆ ರಾಜಕೀಯ ಕೈದಿಗಳಾಗಿ ಸೇರಿದ್ದರು.

ಇವರೆಲ್ಲರು ಸೇರಿದ ನಂತರ ನಮ್ಮದು ಇಪ್ಪತ್ತು ಕೈದಿಗಳ ಗುಂಪಾಯಿತು. ಕೆಲವರು ನನಗೆ ಗೊತ್ತಿದ್ದವರು. ಇನ್ನು ಕೆಲವರ ಬಗ್ಗೆ ನಾನು ಕೇಳಿದ್ದೆ. ಇನ್ನುಳಿದವರ ಬಗ್ಗೆ ನಾನು ಕೇಳಿರಲಿಲ್ಲ. ಜೈಲಿನಲ್ಲಿ ಸಾಮಾನ್ಯವಾಗಿ ಹಳೆ ಸ್ನೇಹಿತರು, ಪರಿಚಿತರನ್ನು ಕಾಣುವುದು, ಹೊಸಬರನ್ನು ಪರಿಚಯ ಮಾಡಿಕೊಳ್ಳುವುದು ಹಬ್ಬದಂತೆ. ಆದರೆ ಆ ಮೊದಲ ಕೆಲವು ವಾತಾವರಣದಲ್ಲಿ ಅಲ್ಲಿನ ವಾತಾವರಣ ಎಷ್ಟು ದಮನಕಾರಿಯಾಗಿತ್ತೆಂದರೆ ಪರಸ್ಪರ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುವುದೂ ಸಾಧ್ಯವಾಗಿರಲಿಲ್ಲ. ಕೈದಿಗಳಿದ್ದಷ್ಟು ಕಾವಲುಗಾರರಿದ್ದರು. ಪ್ರತಿ ಜೈಲಿನ ನಿಯಮವನ್ನು ಅವರು ಬೆದರಿಕೆ ಮತ್ತು ಬಲಪ್ರಯೋಗದಿಂದ ಜಾರಿ ಮಾಡುತ್ತಿದ್ದರು.


ಮೊದಲ ವಾರ ನಾವು ಆರಂಭಿಸಿದ ಕೆಲಸ ನಮ್ಮನ್ನು ಮುಂದಿನ ಹಲವು ತಿಂಗಳುಗಳ ಕಾಲ ವ್ಯಸ್ತವಾಗಿರಿಸಿತು. ಪ್ರತಿದಿನ ಬೆಳಿಗ್ಗೆ ವಾಲಿಬಾಲ್‌ನಷ್ಟು ದೊಡ್ಡ ಕಲ್ಲುಗಳ ರಾಶಿಯನ್ನು ಜೈಲಿನ ಅಂಗಳದ ಬಾಗಿಲಲ್ಲಿ ಹಾಕಲಾಗುತ್ತಿತ್ತು. ಒಂದು ಚಕ್ರದ ಗಾಡಿಗಳನ್ನು ಬಳಸಿ ನಾವು ಅಂಗಳದ ಮಧ್ಯಭಾಗಕ್ಕೆ ಸಾಗಾಣಿಕೆ ಮಾಡಬೇಕಾಗಿತ್ತು. ನಾವು ಈ ದೊಡ್ಡ ಕಲ್ಲುಗಳನ್ನು ಒಡೆದು ಚಿಕ್ಕ ಕಲ್ಲುಗಳಾಗಿ ಮಾಡಬೇಕಾಗಿತ್ತು. ನಮಗೆ ನಾಲ್ಕು ಮತ್ತು ಹದಿನಾಲ್ಕು ಪೌಂಡುಗಳ ಸುತ್ತಿಗೆಗಳನ್ನು ಕೊಡಲಾಗಿತ್ತು. ನಮ್ಮನ್ನು ಒಂದುವರೆ ಗಜ ಅಂತರವಿರುವ ನಾಲ್ಕು ಸಾಲುಗಳಲ್ಲಿ ಕುಳ್ಳಿರಿಸಲಾಗಿತ್ತು. ನಾವು ನೆಲದ ಮೇಲೆ ಚಕ್ಕಳ-ಮಕ್ಕಳ ಹಾಕಿ ಕುಳಿತುಕೊಳ್ಳ ಬೇಕಾಗಿತ್ತು. ಪ್ರತಿಯೊಬ್ಬರಿಗೆ ಟೈರ್ ಗಳಿಂದ ಮಾಡಿದ ರಿಂಗ್ ಕೊಡಲಾಗಿತ್ತು. ಕಲ್ಲು ಒಡೆಯುವಾಗ ಕಲ್ಲಿನ ಚೂರು ಪ್ರತಿ ಹಾರದಂತೆ ತಡೆಯುವುದು ಇದರ ಉದ್ದೇಶವಾಗಿತ್ತು. ಆದರೆ ನಿಜವಾಗಿಯೂ ಟೈರುಗಳ ಉಪಯೋಗದಿಂದ ಅದು ಸಾಧ್ಯವಿರಲಿಲ್ಲ. ನಮ್ಮ ಕಣ್ಣುಗಳನ್ನು ರಕ್ಷಿಸಲು ಸರಿಗೆಗಳಿಂದ ಮಾಡಿದ ಅಷ್ಟೇನೂ ಪರಿಣಾಮಕಾರಿಯಲ್ಲದ ಮುಖವಾಡ ಧರಿಸಬೇಕಾಗಿತ್ತು.

ವಾರ್ಡರ್‌ಗಳು ನಾವು ಕೆಲಸ ಮಾಡುವಾಗ ಮಾತನಾಡದಂತೆ, ನಮ್ಮ ಮಧ್ಯೆ ಓಡಾಡುತ್ತಿದ್ದರು. ಈ ಮೊದಲ ವಾರಗಳಲ್ಲಿ ನಾವು ಈ ಕೆಲಸ ಮಾಡುವುದನ್ನು ನೋಡಲು ಬೇರೆ ಸೆಕ್ಷನ್‌ಗಳಿಂದ ವಾರ್ಡರ್‌ಗಳು ಮತ್ತು ಕೈದಿಗಳು ಸಹ ಬರುತ್ತಿದ್ದರು. ನಾವು ಬೋನಿಗೆ ಹಾಕಿದ ಅಪರೂಪದ ಪ್ರಾಣಿಗಳೋ ಎಂಬಂತೆ. ಕೆಲಸ ಕಠಿಣ ಹಾಗೂ ಬೇಸರ, ಕಿರಿಕಿರಿ ತರುವಂತಹುದಾಗಿತ್ತು. ಅದು ಅಲ್ಲಿನ ಚಳಿಯಲ್ಲಿ ನಮ್ಮನ್ನು ಬೆಚ್ಚಗಿಡುವಷ್ಟು ದಣಿಸುವಂತದ್ದಾಗಿರಲಿಲ್ಲ. ಆದರೆ ನಮ್ಮ ಸ್ನಾಯುಗಳು ನೋಯುವಂತೆ ಮಾಡುವಂಥದ್ದಾಗಿತ್ತು.

ರಾಬಿನ್ ದ್ವೀಪದಲ್ಲಿ ಜೂನ್ ಜುಲೈ ತಿಂಗಳುಗಳು ಕಳೆಯಲು ಕಠಿಣ, ಚಳಿ ಆರಂಭವಾಗಿತ್ತು. ಮಳೆ ಸಹ ಬರಲು ಆರಂಭವಾಗಿತ್ತು. ಉಷ್ಣತೆ 5 ಸೆಂಟಿಗ್ರೇಡ್‌ಗಿಂತ ಮೇಲೆ ಹೋಗುವಂತೆ ಕಾಣುತ್ತಿರಲಿಲ್ಲ. ಸೂರ್ಯನ ಬೆಳಕಿನಲ್ಲಿ ಕೂತಾಗಲೂ ನನ್ನ ತೆಳು ಖಾಕಿ ಶರ್ಟ್‌ನೊಳಗೆ ನಾನು ಕಟಕಟ ನಡುಗುತ್ತಿದ್ದೆ. ಎಲುಬನ್ನು ನಡುಗಿಸುವ ಚಳಿ ಎಂದರೇನು ಎಂದು ನನಗೆ ನೇರವಾಗಿ ಅರ್ಥವಾಗಿತ್ತು. ನಮಗೆ ಮಧ್ಯಾಹ್ನ ಊಟ ಎಂದು ಕೊಡುತ್ತಿದ್ದ ಸಾರು ಕೆಟ್ಟವಾಸನೆ ಬರುತ್ತಿತ್ತು. ಮಧ್ಯಾಹ್ನ ಅರ್ಧಗಂಟೆ ವ್ಯಾಯಾಮ ಮಾಡಬಹುದಾಗಿತ್ತು. ತೀವ್ರ ಮೇಲ್ವಿಚಾರಣೆಯಲ್ಲಿ ನಾವು ಅಂಗಳದ ಸುತ್ತ ವೇಗ ನಡಿಗೆಯಲ್ಲಿ ನಡೆಯುತ್ತಿದ್ದೆವು.

ಕಲ್ಲು ಒಡೆಯುವುದು ಆರಂಭವಾದ ಮೇಲೆ ಒಂದು ದಿನ ಒಬ್ಬ ವಾರ್ಡರ್ ಕ್ಯಾಥಿಗೆ ಒಡೆದ ಕಲ್ಲುಗಳನ್ನು ಅಂಗಳದ ಬಾಗಿಲಿಗೆ, ಒಂದು ಚಕ್ರದ ಗಾಡಿಯಲ್ಲಿ ಸಾಗಿಸಲು ಆಜ್ಞೆಮಾಡಿದ. ಕ್ಯಾಥಿ ದೇಹ ಶ್ರಮದ ಅಭ್ಯಾಸವಿಲ್ಲದ, ಒಣಕಲು ದೇಹದವ. ಒಂದು ಚಕ್ರದ ಗಾಡಿಯಲ್ಲಿ ಕಲ್ಲು ಸಾಗಿಸಲು ಒದ್ದಾಡುತ್ತಿದ್ದ. ಒಂದು ಚಕ್ರದ ಗಾಡಿ ಮುಂದೆ ಹೋಗುವಂತೆ ಮಾಡು ಎಂದು ವಾರ್ಡರುಗಳು ಆಗಲೇ ಒದರುತ್ತಿದ್ದರು. ಕ್ಯಾಥಿ ಗಾಡಿ ತಳ್ಳಲು ಪ್ರಯತ್ನಿಸುತ್ತಿದ್ದಂತೆ ಅದು ಮುಂದೆ ಹೋಗುವ ಬದಲು ಅಡ್ಡ ಬೀಳುವಂತೆ ಕಾಣುತ್ತಿತ್ತು. ಇದನ್ನು ನೋಡಿ ವಾರ್ಡರುಗಳು ತಮಾಷೆ ನೋಡುತ್ತಾ ನಿಂತಿದ್ದರು. ನನಗೆ ಒಂದು ಚಕ್ರದ ಗಾಡಿಗಳನ್ನು ತಳ್ಳುವುದು ಗೊತ್ತಿತ್ತು. ನಾನು ಎದ್ದು ಹೋಗಿ ಕ್ಯಾಥಿಗೆ ಸಹಾಯ ಮಾಡಲು ಆರಂಭಿಸಿದೆ. ವಾಪಸು ಬಂದು ಕುಳಿತು ಕೊಳ್ಳಲು ಆಜ್ಞೆ ಬರುವುದರೊಳಗೆ ಕ್ಯಾಥಿಗೆ ಆ ಬಗ್ಗೆ ಸುಳಿವು ಕೊಡಲು ಸಾಧ್ಯವಾಯಿತು. ಸ್ವಲ್ಪದರಲ್ಲೇ ಅದು ಬಲದ ಪ್ರಶ್ನೆಯಲ್ಲ, ಗಾಡಿಯನ್ನು ಸಮ ತೋಲನಗೊಳಿಸುವ ಪ್ರಶ್ನೆ ಎಂದೆ. ಕ್ಯಾಥಿಗೆ ಆ ಮೇಲೆ ಅದನ್ನು ಮಾಡಲು ಸಾಧ್ಯವಾಯಿತು. ವಾರ್ಡರ್‌ಗಳ ನಗೆ ನಿಂತಿತು.

ರಾಬಿನ್ ದ್ವೀಪದ ಜೈಲಿನಲ್ಲಿ ಕಲ್ಲು ಕುಟ್ಟುವ ಕೆಲಸ ಮಾಡುತ್ತಿರುವ ಮಂಡೆಲಾ ಮತ್ತು ಅವರ ಸಹ ಬಂಧಿಗಳು



(ಮುಂದುವರಿಯುವುದು)

ಅಂತೂ ಇಂತೂ ಪಾಸಾದ ಅಧ್ವಾನದ ಬಜೆಟ್



ಈ ಸಾಲಿನ ಅಂದರೆ 1998-99 ರ ಬಜೆಟ್ ಕೊನೆಗೂ ಲೋಕಸಭೆಯಲ್ಲಿ ಪಾಸಾಗಿದೆ. ಆದರೆ ಬಜೆಟ್ ಮತ್ತು ಹಣಕಾಸು ಮಸೂದೆ ಎರಡೂ ಲೋಕ ಸಭೆಯಲ್ಲಿ ಮಂಡನೆಯಾದ ನಂತರ ಹಲವು ತಿದ್ದುಪಡಿಗಳನ್ನು ಕಂಡವು. ಬಜೆಟ್ ಮಂಡನೆಯಾದ ದಿನದಿಂದಲೇ ಅಧ್ವಾನದ ತಿದ್ದುಪಡಿ ಗೊಂದಲಗಳು ಪ್ರಾರಂಭ ವಾದವು. ಪೆಟ್ರೋಲ್ ಬೆಲೆ ಹೆಚ್ಚಳ ರಸಗೊಬ್ಬರಗಳ (ಯೂರಿಯಾ) ಬೆಲೆ ಹೆಚ್ಚಳ ಹೀಗೆ ಒಂದೆರಡಲ್ಲ.

ಒಳನೋಟ, ದಿಕ್ಕು ದೆಸೆಗಳೇ ಇಲ್ಲದ ಬಜೆಟ್ ಸಹಜವಾಗಿಯೇ ಬೇರೆ ಬೇರೆ ಜನವಿಭಾಗಗಳ ವಿರೋಧವನ್ನು ಕಂಡಿತು. ಹಣದುಬ್ಬರವನ್ನು ತೀವ್ರವಾಗಿ ಏರಿಸುವ ಬಜೆಟ್ ಎಂದೇ ಹೊಗಳಿಸಿಕೊಂಡ ಈ ಬಜೆಟ್ ತಿದ್ದುಪಡಿ ಬದಲಾವಣೆಗಳ ಸುರಿಮಳೆಯನ್ನೇ ವ್ಯಕ್ತಪಡಿಸಿತು.

ಹಲವು ರಿಯಾಯತಿಗಳನ್ನು ಹಣಕಾಸು ಮಂತ್ರಿ ಘೋಷಿಸಬೇಕಾಗಿ ಬಂತು. ಕೆಲವು ರಿಯಾಯತಿಗಳು ಕೆಳಗಿನಂತಿವೆ.

ಮಾಹಿತಿ ತಂತ್ರಜ್ಞಾನ ವಿಭಾಗಕ್ಕಾಗಿ ಬರುವ ಸಾಫ್ಟ್‌ವೇರ್‌ಗಳಿಗೆ ಆಮದು ಸುಂಕದ ರಿಯಾಯತಿ-ಕಂಪ್ಯೂಟರ್ ಸಾಫ್ಟ್‌ವೇರ್ ಎಂಬುದರ ಪರಿಧಿಯನ್ನೇ ವಿಸ್ತರಿಸುವುದು-ರಫ್ತ ಆದಾಯ ಮಾಹಿತಿ ತಂತ್ರಜ್ಞಾನದಿಂದ ಬಂದಿದ್ದರೆ ಪೂರ್ತಿ ತೆರಿಗೆ ವಿನಾಯಿತಿ-ಕಂಪ್ಯೂಟರ್‌ಗಳ ಮೇಲೆ ಗಿಫ್ಟ್ ತೆರಿಗೆ ಇಲ್ಲ-ಮಾಹಿತಿ ತಂತ್ರಜ್ಞಾನ ಉದ್ದಿಮೆಯಲ್ಲಿ ಶೇ 60 ರಷ್ಟು ಸವಕಳಿಗೆ ಅವಕಾಶ ಇತ್ಯಾದಿ. ಇದಲ್ಲದೆ ಹಲವು ವಸ್ತುಗಳ ಮೇಲೆ ವಿಧಿಸಿದ್ದ ತೆರಿಗೆ ಸುಂಕಗಳನ್ನೂ ಹಿಂತೆಗೆದು ಕೊಳ್ಳಲಾಗಿದೆ.

ಉದಾಹರಣೆಗೆ

- ತುಪ್ಪ, ಹಾಲಿನ ಪುಡಿ, ಬೆಣ್ಣೆ ಇತ್ಯಾದಿಗಳ ಮೇಲೆ ಹೇರಿದ್ದ ಅಬ್ಕಾರಿ ಸುಂಕ ಹಿಂತೆಗೆದು ಕೊಳ್ಳಲಾಗಿದೆ.
- ಮಿಠಾಯಿ ಮತ್ತು ಖಾರಗಳ ಮೇಲಿನ ಅಬ್ಕಾರಿ ಸುಂಕವನ್ನು ಹಿಂತೆಗೆದು ಕೊಳ್ಳಲಾಗಿದೆ.-ಸಾಂಬಾರ ಪದಾರ್ಥಗಳು ಕತ್ತದ ಹಾಸಿಗೆ, ಶಾಯಿ, ಕನ್ನಡಕದ ಲೆನ್ಸ್‌ಗಳು ಎತ್ತಿನ ಗಾಡಿಗಳ ಟಯರುಗಳ ಮೇಲಿನ ಅಬ್ಕಾರಿ ಸುಂಕ ರಿಯಾಯತಿಯನ್ನು ಮುಂದುವರಿಸಲಾಗಿದೆ.
- ನೂರು ಗ್ರಾಂ ಗಿಂತ ಕಡಿಮೆ ಪ್ರಮಾಣದ ಚಹ ಪೊಟ್ಟಣಗಳ ಮೇಲೆ ಅಬ್ಕಾರಿ ಸುಂಕವಿಲ್ಲ. ಗಿಫ್ಟ್- (ಉಡುಗೊರೆ) ತೆರಿಗೆ ತೆಗೆದು ಹಾಕಲಾಗಿದೆ.-ಜವಳಿಗಳ ಮೇಲೆ ಕೆಲವು ರಿಯಾಯತಿಗಳು ಹೀಗೆ ಈ ಪಟ್ಟಿ ಮುಂದುವರೆಯುತ್ತಿದೆ. ಈ ರಿಯಾಯತಿ ಪರಿಹಾರಗಳಿಂದ ಸರ್ಕಾರಕ್ಕೆ ಸುಮಾರು 263 ಕೋಟಿ ರೂಪಾಯಿಗಳ ಆದಾಯ ಕಡಿತ ವಾಗುತ್ತದಂತೆ.

ಈ ಮೇಲಿನ ಪಟ್ಟಿಯನ್ನು ನೋಡಿದರೆ ದೇಶದ ಜನಸಾಮಾನ್ಯರಿಗೆ ಪರಿಹಾರ ನೀಡುವ ಯಾವುದೇ ಪ್ರಸ್ತಾಪಗಳು ಇಲ್ಲಿಲ್ಲ. ತೀರ ಸಣ್ಣ ಪುಟ್ಟ ರಿಯಾಯಿತಿಗಳನ್ನು ಮಾತ್ರ ನೀಡಲಾಗಿದೆ. ಶ್ರೀಮಂತರಿಗೆ ಉಳ್ಳವರಿಗೆ ಲಾಭವಾಗುವಂತಹ ಕ್ರಮಗಳೇ ಹಲವು. ಉದಾಹರಣೆಗೆ ಗಿಫ್ಟ್ ತೆರಿಗೆ ಉಳ್ಳವರಿಗೆ ಮಾತ್ರ ಲಾಭವಾಗುವಂತಹದ್ದು. ಬಡವರು ಯಾರಿಗೇನು ಉಡುಗೊರೆ ನೀಡಬಲ್ಲರು?

ಇದಲ್ಲದೆ ಯಶವಂತ ಸಿನ್ಹ ಎಂಬ ಹಣಕಾಸು ಮಂತ್ರಿ ಕೊನೆಯಲ್ಲಿ ಇಂದಿನ ಎಲ್ಲ ಆರ್ಥಿಕ ದುಷ್ಪರಿಣಾಮಗಳಿಗೆ ಹಿಂದಿನ ಹಣಕಾಸು ಮಂತ್ರಿಗಳೇ ಕಾರಣ ಹೊರತು ತಾವಲ್ಲ, ಹಿಂದಿನ ಹಣಕಾಸು ಮಂತ್ರಿಗಳೇ ಎಲ್ಲ ಅನಿಷ್ಟಗಳನ್ನು ತಂದಿಟ್ಟವರು ಎಂದಿದ್ದಾರೆ.

ಸಂಯುಕ್ತರಂಗ ಸರ್ಕಾರದ ಪಿ. ಚಿದಂಬರಂ ಅವರ ಬಜೆಟ್ ಬಂಡವಾಳಿಗರು ವರ್ಣಿಸಿದ ಕನಸಿನ ಬಜೆಟ್ ಆಗಿರಲಿಲ್ಲ ಎಂಬುದು ನಿಜ. ಆದರೆ ಆ ಬಜೆಟ್ಟಿನ ದುಷ್ಪ ರಿಣಾಮಗಳನ್ನು ತೊಡೆದು ಹಾಕುವ ಯಾವ ಕ್ರಮಗಳನ್ನು ಸಿನ್ಹಾ ತೆಗೆದು ಕೊಂಡಿದ್ದಾರೆ?

ಉದಾರೀಕರಣದ ಕ್ರಮಗಳನ್ನೇ ಅತ್ಯಂತ ಕಟ್ಟದಾಗಿ ಮುಂದುವರೆಸಿರುವ ಈ ಬಿಜೆಪಿ ಬಜೆಟ್ ಜನ ಸಾಮಾನ್ಯರ ಮೇಲೆ ನೋವುಗಳ ಹೊರೆ ಹೇರುವ ಪೀಠಿಕೆಯನ್ನಂತೂ ಹಾಕಿದೆ. ಅಲ್ಲವೇ?

ಉಬ್ಬಿದ ತೈಲಖಾತೆ ಕೊರತೆ

ಸಾರ್ವಜನಿಕ ವಲಯದ ತೈಲ ಕಂಪನಿಗಳ ಕೊರತೆ 12000 ಕೋಟಿ ರೂಪಾಯಿಗಳಿಗೂ ಹೆಚ್ಚಿದೆಯಂತೆ. ಸರ್ಕಾರ ಈ ಮೊತ್ತ ಹೀಗೆ ಹೆಚ್ಚುತ್ತ ಹೋಗಲು ಅವಕಾಶ ನೀಡಿ ಪರೋಕ್ಷವಾಗಿ ಸಾರ್ವಜನಿಕ ವಲಯದ ತೈಲ ಕಂಪನಿಗಳು ದಿವಾಳಿಯಾಗುವಂತೆ ಮಾಡುತ್ತಿದೆ.

ಪೆಟ್ರೊಲಿಯಂ ಮತ್ತು ಮೇಲಿನ ರಸಾಯನಿಕಗಳ ಸಂಸತ್ತಿನ ಸ್ಥಾಯಿ ಸಮಿತಿ ಸರ್ಕಾರ ತೈಲ ಖಾತೆಯ ಕೊರತೆ ಹೀಗೆ ಬೆಳೆಯುತ್ತ ಹೋಗಲು ಬಿಟ್ಟಿರುವುದು ದುರದೃಷ್ಟಕರ ಎಂದಿದೆ.

ತೈಲ ಕಂಪನಿಗಳಿಗೆ ಈ ಹಣವನ್ನು ಸಕಾಲದಲ್ಲಿ ಸರ್ಕಾರ ನೀಡದೇ ಇರುವು ದರಿಂದ ಈ ಕಂಪನಿಗಳ ಯೋಜನೆಗಳು ಕಾರ್ಯ ರೂಪಕ್ಕೆ ಬರುವುದರಲ್ಲಿ ವ್ಯತ್ಯಯ ಉಂಟಾಗಿದೆ.

ಜಾಗತಿಕವಾಗಿ ತೈಲಗಳ ಬೆಲೆ ಇಳಿಮುಖವಾಗಿರುವಾಗಲೂ ಸರ್ಕಾರ ಕಚ್ಚಾ ತೈಲದ ಬೆಲೆಯನ್ನು ಹೆಚ್ಚಿಸಿರುವುದು ಆಶ್ಚರ್ಯಕರ ಎಂದು ಅದು ಹೇಳಿದೆ. ಕಚ್ಚಾ ತೈಲದ ಬೆಲೆಯಲ್ಲಿನ ಇಳಿತದ ಲಾಭವನ್ನು ಗ್ರಾಹಕರಿಗೆ ವರ್ಗಾಂತರಿಸುವ ಮೂಲಕ ಸರ್ಕಾರ ಒಟ್ಟಾರೆ ಬೆಲೆಗಳನ್ನು ಕೆಳಗಿಳಿಸುವ ಪ್ರಯತ್ನ ಮಾಡಬೇಕೆಂದು ಈ ಸಮಿತಿ ಶಿಫಾರಸು ಮಾಡಿದೆ.

ಮಾರುಕಟ್ಟೆಯಲ್ಲಿ ಮಾರಿಕೊಂಡವರು

ಸರ್ಕಾರ ಮಾರುಕಟ್ಟೆಯಿಂದ ಅತಿಯಾದ ಪ್ರಮಾಣದಲ್ಲಿ ಸಾಲ ಪಡೆದಿದೆ ಎಂದು ಸಂಸತ್ತಿನ ಸ್ಥಾಯಿ ಸಮಿತಿ ಹೇಳಿದೆ. ದೇಶದ ಹಣಕಾಸಿನ ಮೇಲಿನ ಈ ಸಮಿತಿ ಸರ್ಕಾರ ಹೀಗೆ ಮಾರುಕಟ್ಟೆಯಲ್ಲಿ ಸಾಲ ಪಡೆಯುತ್ತ ಹೋದರೆ ಮುಂದೆ ಹೀಗೆ ಸಂಪನ್ಮೂಲ ಸಂಗ್ರಹಿಸುವುದು ಕಠಿಣವಾಗುತ್ತದೆ ಎಂದಿದೆ.

ಸಂಸತ್ತಿನಲ್ಲಿ ಮಂಡಿಸಲ್ಪಟ್ಟಿರುವ ಈ ಸಮಿತಿಯ ವರದಿ ಹಣಕಾಸು ಕೊರತೆ ಹೆಚ್ಚುತ್ತಲೇ ಹೋಗುತ್ತಿರುವ ಬಗ್ಗೆ ಆತಂಕ ವ್ಯಕ್ತ ಪಡಿಸಿದೆ. ಅಂತರಾಷ್ಟ್ರೀಯ ಮಟ್ಟದ ಆರ್ಥಿಕ ದಿಗ್ಬಂಧನದ ಕ್ರಮಗಳಿಂದ ಜಾಗತಿಕ ಹಣಕಾಸಿನ ಹರಿವಿನಲ್ಲಿ ತೀವ್ರ ಇಳಿತ ಉಂಟಾಗಬಹುದೆಂದು ಈ ಸಮಿತಿ ಹೇಳಿದೆ.

ಬರೀ ಹಣಕಾಸು ಕೊರತೆಯನ್ನು ಕಡಿಮೆ ಮಾಡುವತ್ತಲೇ ಉದಾರೀಕರಣವಾದಿಗಳು ಗಮನ ನೀಡುತ್ತಾರೆ. ಆದರೆ ನಿಜದಲ್ಲಿ ಮಾಡಬೇಕಾದದ್ದು ಹೆಚ್ಚಿನ ಸಂಪನ್ಮೂಲ ಸಂಗ್ರಹಣೆ. ಇದನ್ನು ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆ ಹೇರುವುದರ ಮೂಲಕವೇ ಮಾಡಬೇಕಾಗುತ್ತದೆ. ಆದರೆ ಉದಾರೀಕರಣದ ಮಂತ್ರ ಹೇಳುವ ಸರ್ಕಾರಗಳು ಇದಕ್ಕೆ ಬದಲಾಗಿ ಬಡವರಿಗೆ ನೀಡುವ ಸಹಾಯ ಧನಗಳ ಕಡಿತದ ಮೂಲಕವೇ ಈ ಹಣಕಾಸು ಕೊರತೆ ನೀಗುವ ಮಾತಾಡುತ್ತಿವೆ. ಐ.ಎಂ.ಎಫ್ ಮತ್ತು ವಿಶ್ವ ಬ್ಯಾಂಕ್ ಗಳೆಂಬ ಸಾಮ್ರಾಜ್ಯ ಶಾಹಿಗಳ ಏಜೆಂಟರುಗಳು ಇದೇ ಮಾತನ್ನಾಡುವುದು. ಐ.ಎಂ.ಎಫ್ ವಿಶ್ವ ಬ್ಯಾಂಕ್‌ಗಳು ತೋರಿಸಿದ ಹಾದಿಯನ್ನೇ ನಮ್ಮ ಸರ್ಕಾರಗಳು ತುಳಿಯುತ್ತಿವೆ. ಆ ಮೂಲಕ ದೇಶದ ದೊಡ್ಡ ಜನವಿಭಾಗಕ್ಕೆ ನೋವನ್ನು ಕೊಡುತ್ತಿವೆ.

ಬಹುರಾಷ್ಟ್ರೀಯ ಕಂಪನಿಗೆ ಉಡುಗೊರೆ

ಉದಾರೀಕರಣ ಹೇಗೆ ಬಹು ರಾಷ್ಟ್ರೀಯ ಕಂಪನಿಗಳಿಗೆ ನಿಯಮಗಳನ್ನು ಮುರಿದು ಅನುಕೂಲ ಮಾಡಿಕೊಡುತ್ತವೆ ಎಂಬುದಕ್ಕೆ ಇದೊಂದು ಉತ್ತಮ ಉದಾಹರಣೆ. ಸೆಬಿ ಎಂಬ ಭಾರತೀಯ ಭದ್ರತೆಗಳ ವಿನಿಮಯ ಮಂಡಳಿಯ ನಿಯಮಗಳ ಪ್ರಕಾರ ಕಂಪನಿಗಳ ಒಳಗಿನವರು ಆ ಕಂಪನಿಗಳ ಶೇರಿನ ವಹಿವಾಟಿನಲ್ಲಿ ತೊಡಗುವುದು ಅಪರಾಧ. ಯಾಕೆಂದರೆ ಅವರಿಗೆ ಕಂಪನಿಗಳ ಅಂತರಿಕ ಬೆಳವಣಿಗೆಗಳ ಮಾಹಿತಿ ಇರುವುದರಿಂದ ಬೇರೆಯವರಿಗೆ ಕಂಪನಿಯ ಶೇರುದಾರರಿಗೆ ನಷ್ಟವಾಗುವ ಸಾಧ್ಯತೆ ಇರುತ್ತದೆ.

ಹಿಂದೂಸ್ಥಾನ್ ಲೀವರ್ ಲಿಮಿಟೆಡ್ (ಹೆಚ್.ಎಲ್.ಎಲ್) ಮತ್ತು ಬ್ರೂಕ್ ಬಾಂಡ್ ಲಿಪ್ಟನ್ ಇಂಡಿಯಾ ಲಿಮಿಟೆಡ್ (ಬಿ ಬಿ ಎಲ್ಇ ಎಲ್) ಎಂಬ ಎರಡು ಕಂಪನಿಗಳು ಇತ್ತೀಚೆಗೆ ವಿಲೀನಗೊಂಡವು ಅದಕ್ಕೂ ಮೊದಲು ಹಿಂದೂಸ್ತಾನ್ ಅವರ ಬ್ರೂಕ್ ಬಾಂಡ್ ಇಂಡಿಯಾದ ಎಂಟು ಲಕ್ಷ ಶೇರುಗಳನ್ನು ಯೂಟಿಐ ನಿಂದ ಖರೀದಿಸಿತು. ಈ ಖರೀದಿ ಕಡಿಮೆ ಬೆಲೆಗೆ ಇರುತ್ತದೆ.

ಇಲ್ಲಿ ಹಿಂದೂಸ್ಥಾನ್ ಲಿವರ್‌ಗೆ ವಿಲೀನದ ಮಾಹಿತಿ ಇದ್ದಿದ್ದರಿಂದ ಇದು ಒಳಗಿನವರು ಶೇರು ವ್ಯವಹಾರ ಮಾಡಿದಂತೇ ಆಗುತ್ತದೆ. ಇದು ನಿಯಮ ಬಾಹಿರ ವಾದ್ದರಿಂದ ಹಿಂದೂಸ್ಥಾನ್ ಲಿವರ್ ಕಂಪನಿ ವಿಚಾರಣೆ ಮತ್ತು ಶಿಸ್ತಿನ ಕ್ರಮ ಎದುರಿಸಬೇಕೆಂದು ಸೆಬಿ ತೀರ್ಮಾನ ನೀಡಿತು.

ಈ ತೀರ್ಮಾನದ ಆ ಪ್ರಕಾರ ಬಹು ರಾಷ್ಟ್ರೀಯ ಕಂಪನಿಯ ಐದು ನಿರ್ದೇಶಕರುಗಳು ಕ್ರಮ ಎದುರಿಸ ಬೇಕಾಗಿತ್ತು.

ಆದರೆ ಕೇಂದ್ರ ಹಣಕಾಸು ಮಂತ್ರಿಯ ಈ ವಿಷಯದಲ್ಲಿನ ನ್ಯಾಯಾಧಿಕರಣ ಅದು ಈ ಕಂಪನಿಗಳು ಒಳಗಿನವರ ಶೇರು ವ್ಯವಹಾರದಲ್ಲಿ ತೊಡಗಿರಲಿಲ್ಲ, ಆದ್ದರಿಂದ ಸೆಬಿಯ ತೀರ್ಮಾನ ಸರಿಯಾದದ್ದಲ್ಲ ಎಂಬ ತನ್ನ ತೀರ್ಪನ್ನು ನೀಡಿದೆ.

ಇದಲ್ಲದೆ ಅದು ಸೆಬಿಗೆ ಈ ವಿಷಯದಲ್ಲಿ ಯಾರಿಗೂ ಪರಿಹಾರ ನೀಡುವ ಅಧಿಕಾರವೇ ಇಲ್ಲ ಎಂದೂ ಹೇಳಿದೆ. ನಿಯಮಗಳ ಪ್ರಕಾರ ಯುಟಿಐಗೆ ಕೋಟ್ಯಂತರ ರೂಪಾಯಿಗಳ ಪರಿಹಾರ ನೀಡಬೇಕಾಗಿತ್ತು. ನ್ಯಾಯಾಧಿ ಕರಣದ ಬಗ್ಗೆ ಯುಟಿಐ ಯಾವುದೇ ಅಸಮಾಧಾನ ವ್ಯಕ್ತಪಡಿಸಲಿಲ್ಲ. ಆದ್ದರಿಂದ ಪರಿಹಾರ ನೀಡುವ ಅವಶ್ಯಕತೆ ಇಲ್ಲ ಎಂದಿದೆ.

ಇಲ್ಲಿ ವಿಪರ್ಯಾಸವೆಂದರೆ ಹಿಂದೂಸ್ಥಾನ್ ಲಿವರ್ ಕಂಪನಿಯೇ ಒಳಗಿನವರ ವ್ಯವಹಾರ ಮಾಡಿದ್ದಾಗಿ ಒಪ್ಪಿ ಕೊಂಡಿತ್ತು. ಆದರೂ ಸರ್ಕಾರ ಕಂಪನಿಯ ನೆರವಿಗೆ ಬಂದು ಅದನ್ನು ರಕ್ಷಿಸಿರುವುದು ಉದಾರೀಕರಣದಡಿ ಏನೇನು ಆಗಬಹುದೆಂಬುದಕ್ಕೆ ಒಂದು ಒಳ್ಳೆಯ ಉದಾಹರಣೆ ಒದಗಿಸಿದೆ. ಬೇಲಿಯೇ ಎದ್ದು ಹೊಲ ಮೇಯ್ದರೆ ಎನ್ನುತ್ತಾರಲ್ಲ, ಹಾಗಿಲ್ಲವೆ ಈ ಪ್ರಕರಣ?

ಮತ್ತೆ ವಿದ್ಯುತ್ ಆಘಾತ

ಕರ್ನಾಟಕ ಸರ್ಕಾರ ವಿದ್ಯುತ್ ದರದಲ್ಲಿ ಶೇ11 ರಷ್ಟು ಹೆಚ್ಚಳ ಮಾಡಿ ಜನತೆಗೆ ಆಘಾತ ನೀಡಿದೆ. ಎಲ್ಲತರಹದ ಬಳಕೆದಾರರ ಮೇಲೆ (10 ಹೆಚ್.ಪಿ.ವರೆಗಿನ ನೀರಾವರಿ ಪಂಪುಸೆಟ್ ಹೊರತು ಪಡಿಸಿ) ಈ ಹೆಚ್ಚಳವನ್ನು ಹೇರಲಾಗಿದೆ. ಜೂಲೈ 15 ರಿಂದ ಈ ದರ ಹೆಚ್ಚಳ ಜಾರಿಗೆ ಬಂದಿದೆ.

ರಾಜ್ಯದಾದ್ಯಂತ ವಿದ್ಯುತ್ ಪೂರೈಕೆ ಪೂರ್ತಿ ಅಸಮರ್ಪಕವಾಗಿಯೇ ಇದೆ. ವಿದ್ಯುತ್ ಕಡಿತ ದಿನ ನಿತ್ಯದ ಮಾತಾಗಿ ಹೋಗಿದೆ. ವಿದ್ಯುತ್ ಪೂರೈಕೆ ಹೆಚ್ಚಿಸುವ ಅವಶ್ಯಕತೆಯಿರುವಾಗ ಅದನ್ನು ಮಾಡದೆ ದರವನ್ನು ಮಾತ್ರ ಹೆಚ್ಚಿಸಲು ಮುಂದಾಗುತ್ತಿರುವ ಸರ್ಕಾರದ ಕ್ರಮ ಅದರ ಅಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ರಾಜ್ಯದಾದ್ಯಂತ ಈ ಹೆಚ್ಚಳಕ್ಕೆ ಪ್ರತಿಭಟನೆ ವ್ಯಕ್ತವಾಗುತ್ತಿದೆ.

ವಿದ್ಯುತ್ ಪೂರೈಕೆ ಕಾಯಿದೆಯ ಪ್ರಕಾರ ವರ್ಷಕ್ಕೊಮ್ಮೆ ದರ ಹೆಚ್ಚಿಸಲು ಇರುವ ಅವಕಾಶವನ್ನು ಬಳಸಿಕೊಂಡು ಸರ್ಕಾರ ಈ ಹೆಚ್ಚಳ ಮಾಡಿದೆ. ಕಳೆದ ವರ್ಷದ ಜುಲೈನಲ್ಲೂ ವಿದ್ಯುತ್ ಬೆಲೆ ಹೆಚ್ಚಳ ಮಾಡಲಾಗಿತ್ತು.

ಕರ್ನಾಟಕದಲ್ಲಿ ಕಳೆದವಾರ

ಜುಲೈ 17

+ ವಿದ್ಯುತ್ ದರ ಏರಿಕೆ-ಸಿಪಿಐ(ಎಂ) ಸೇರಿದಂತೆ ನಾನಾ ಸಂಘಟನೆಗಳ ಪ್ರತಿಭಟನೆ.
+ ಕೋಟಿ ರೂ. ಬೆಲೆ ಬಾಳುವ 400 ಲಿ. ಅಕ್ರಮ ಗಂಧದ ಎಣ್ಣೆ ವಶ.
+ ಮಂಗಳೂರು ತೈಲ ಶುದ್ದೀಕರಣ ವಿಸ್ತರಣೆಗೆ ಕೇಂದ್ರದ ಒಪ್ಪಿಗೆ.
+ ಬಾಗೂರು-ನವಿಲೆ ನಾಲೆ ಅಡ್ಡಗೋಡೆ ತೆರವು ಆಗ್ರಹಿಸಿ ತುಮಕೂರು ಜಿಲ್ಲೆ ವಿವಿಧ ಕಡೆ ರಸ್ತೆ ತಡೆ.

ಜುಲೈ 18

+ ಬೆಂಗಳೂರಿನಲ್ಲಿ ಭಾರೀ ಮಳೆ - ಅನೇಕ ಮನೆಗಳು ಜಲಾವೃತ್ತ.
+ ರಂಗಾಯಣದ ಕಲಾವಿದರಿಗೆ ವೇತನಶ್ರೇಣಿ.
+ ಬೆಂಗಳೂರಿನಲ್ಲಿ ಐದು ಸಾವಿರ ಮಂದಿಗೆ ಕೇಶಮುಂಡನೆ ಮಾಡಿ ಮಂಡೇಲಾ ಹುಟ್ಟುಹಬ್ಬ.
+ ಸುಭಾಷ್ ಗುತ್ತೇದಾರ ಬಂಧನ ವಾರಂಟಿಗೆ ತಡೆಯಾಜ್ಞೆ.

ಜುಲೈ 19

+ ಬಾಗೂರು-ನವಿಲೆ ಅಡ್ಡಗೋಡೆ ಕೆಡವಿ ತುಮಕೂರು ಜಿಲ್ಲೆಗೆ ನೀರು.
+ ವೈದ್ಯನಿಂದ ಶೇರು ದಲ್ಲಾಳಿ ಕೊಲೆ.
+ ಸೀಬರ್ಡ್ ನೌಕಾನೆಲೆ ಯೋಜನೆ ಅನುಷ್ಠಾನ ಕುರಿತು ನಿಷ್ಫಲವಾದ ರಕ್ಷಣಾ ಸಚಿವರ ಸಭೆ.

ಜುಲೈ 20

+ ಕೆ.ಇ.ಬಿ. ಕಛೇರಿಗೆ ಮುತ್ತಿಗೆ, ಕಾಂಗ್ರೆಸ್ ಕಾರ್ಯಕರ್ತರ ಬಂಧನ.
+ ಬಾಗೂರು-ನವಿಲೆ ಪೋಲೀಸ್ ಜೀಪಿಗೆ ಬೆಂಕಿ, ವಾಹನಗಳಿಗೆ ಕಲ್ಲು ತೂರಾಟ, ಲಾಠಿ ಪ್ರಹಾರ.

ಜುಲೈ 21

+ ಸರ್ವ ಪಕ್ಷಗಳ ಶಾಸಕರ ವಿದೇಶಯಾತ್ರೆ ಆರಂಭ.
+ ಬಾಗೂರು-ನವಿಲೆ ಚಳುವಳಿ - ನೂರಾರು ಜನರ ಬಂಧನ
+ ಕಾವೇರಿ: ಸುಪ್ರೀಂ ಕೋರ್ಟಿನಿಂದ ರಾಜ್ಯದ ನಿಲುವಿನ ಸಮರ್ಥನೆ ಎಂದು ಮುಖ್ಯಮಂತ್ರಿಗಳು.

ಜುಲೈ 22

+ ಕಾವೇರಿ ವಿವಾದ ಪರಿಹಾರಕ್ಕೆ ರಾಜ್ಯದ ಎರಡಂಶ ಕಾರ್ಯಕ್ರಮ
+ ನ್ಯಾಯಾಂಗ ವಶಕ್ಕೆ ಸುಪಾರಿ ಕೊಲೆ ಆಪಾದಿತರು.

ಜುಲೈ 23

+ ತೊಗರಿ ಬೆಳೆಹಾನಿ, ಮಾಸಾಂತ್ಯಕ್ಕೆ 10 ಕೋಟಿ. ರೂ. ಹೆಚ್ಚುವರಿ ಪರಿಹಾರ.
+ ವಿದ್ಯುತ್ ದರ ಏರಿಕೆ ವಿರುದ್ಧ ಭಾಗಶಃ ಬಂದ್. ರಾಜ್ಯದ ಜನ ಬಂದ್ ತಿರಸ್ಕರಿಸಿದ್ದಾರೆ ಎಂದು ಜನತಾದಳ.
+ ಹದಗೆಟ್ಟ ಜಿಲ್ಲಾ ಪಂಚಾಯತ್ ವ್ಯವಸ್ಥೆ - ಮುಖ್ಯಮಂತ್ರಿ ಆಕ್ರೋಶ.

ವಿದ್ಯುತ್ ದರ ಏರಿಕೆ ವಿರುದ್ಧ ಪ್ರತಿಭಟನೆ

ಮಂಡ್ಯ: ಮನಬಂದಂತೆ ವಿದ್ಯುತ್ ದರ ಏರಿಕೆ ಮಾಡಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಸಿಪಿಐ(ಎಂ) ಮತ್ತು ಡಿ.ವೈ.ಎಫ್.ಐ ನ ಕಾರ್ಯಕರ್ತರು ಮಳವಳ್ಳಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸುವ ಮುಖಾಂತರ ಪ್ರತಿಭಟಿಸಿದರು

ಮುಖ್ಯಮಂತ್ರಿ ಜೆ.ಎಚ್ ಪಟೇಲ್ ವಿರುದ್ಧ ಘೋಷಣೆ ಕೂಗಿದ ಕಾರ್ಯಕರ್ತರು ಕೆ.ಇ.ಬಿ. ಕಛೇರಿ ಮುಂದೆ ಕೆಲಕಾಲ ಧರಣಿ ನಡೆಸಿದರು.

ಧರಣಿ ನಿರತರನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಮುಖಂಡರಾದ ಜಿ. ರಾಮಕೃಷ್ಣ ಹನುಮಂತ, ಶಿವಪ್ಪ, ಡಿ.ವೈ.ಎಫ್.ಐ ನ ಭರತ್ ರಾಜ್, ವಕೀಲ ಜಯಶೇಕರಪ್ಪ ಮುಂತಾದವರು ಅವ್ಯಾಹತವಾಗಿ ನಡೆಸುತ್ತಿರುವ ವಿದ್ಯುತ್ ಕಳ್ಳತನ ಬಂಡವಾಳಶಾಹಿ ಶಕ್ತಿಗಳು ಉಳಿಸಿಕೊಂಡಿರುವ ಬಾಕಿ ಮುಂತಾದ ವಿಚಾರಗಳ ಬಗ್ಗೆ ದಿಟ್ಟ ನಿರ್ಧಾರ ಕೈಗೊಳ್ಳಲಾಗದ ದುರ್ಬಲ ಸರ್ಕಾರ ತನ್ನ ದೌರ್ಬಲ್ಯಗಳನ್ನು ಮುಚ್ಚಿಕೊಳ್ಳಲು ಜನ ಸಾಮಾನ್ಯರು ಬಳಸುವ ವಿದ್ಯುತ್ ದರವನ್ನು ಮನ ಬಂದಂತೆ ಏರಿಸಿದೆ ಎಂದು ಕಟುವಾಗಿ ಟೀಕಿಸಿದರು.

ವೈಜ್ಞಾನಿಕತೆಯ ಗಂಧವನ್ನೇ ಅರಿಯದ ಉಪಮುಖ್ಯಮಂತ್ರಿ ನೇತೃತ್ವದ ಉಪ ಸಮಿತಿ ದರ ಏರಿಕೆಗೆ ಶಿಪಾರಸ್ಸು ಮಾಡಿ ತನ್ನ ಅವೈಜ್ಞಾನಿಕತೆಯನ್ನು ಮರೆದಿದ್ದಾರೆ. ಈ ರಾಜ್ಯ ಕಂಡರಿಯದ ಉಡಾಫೆ ಮುಖ್ಯಮಂತ್ರಿ ಪಟೇಲರು ಬೆಲೆ ಏರಿಕೆ ಸಮರ್ಥಿಸಿಕೊಳ್ಳುತ್ತಿರುವುದು ತೀರ ನಾಚಿಕೆಗೇಡಿನ ಸಂಗತಿ ಎಂದರು. ವಿದ್ಯುತ್ ದರ ಏರಿಕೆ ಕೈ ಬಿಡುವಂತೆ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಮದ್ದೂರು: ಕೆ.ಇ.ಬಿ. ಕಛೇರಿ ಮುಂದೆ ಸಿಪಿಐ(ಎಂ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ರಾಜ್ಯ ಸರ್ಕಾರದ ಬೆಲೆ ಏರಿಕೆ ಕ್ರಮವನ್ನು ಟೀಕಿಸಿದ ಪ್ರತಿಭಟನಾಕಾರರು ಮುಖ್ಯಮಂತ್ರಿ, ವಿದ್ಯುತ್ ಮಂತ್ರಿ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗುವ ಮೂಲಕ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ತಕ್ಷಣ ಏರಿಸಿರುವ ಬೆಲೆ ಇಳಿಸುವಂತೆ ಮನವಿ ಮೂಲಕ ಒತ್ತಾಯಿಸಿದರು.



ಯಶಸ್ವಿ ಟಿ.ಬಿ.ಡ್ಯಾಂ ಬಂದ್....

ಜನ ವಿರೋಧಿ ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ನೀಡಿದ್ದ ಪ್ರತಿಭಟನಾ ಕರೆಯ ಹಿನ್ನೆಲೆಯಲ್ಲಿ ಮತ್ತು ಟಿ.ಬಿ.ಡ್ಯಾಂ ಸಬ್ ಇನ್ಸ್‌ಪೆಕ್ಟರ್ ಮೇಲಿರುವ ಭ್ರಷ್ಟಾಚಾರದ ಆರೋಪ ತನಿಖೆ, ಶಾಲಾ ಕಟ್ಟಡದ ದುರಸ್ತಿ, ರೈಲ್ವೆ ಹಳಿ ದಾಟಲಿಕ್ಕಾಗಿ ಎರು ಸೇತುವೆ ಹಾಗೂ ಸ್ಥಳೀಯ ಮೂಲಭೂತ ನಾಗರಿಕ ಸೌಲಭ್ಯಗಳೂ ಸೇರಿದಂತೆ ಹಲವಾರು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಎಸ್.ಎಫ್.ಐ ಹಾಗೂ ಡಿ.ವೈ.ಎಫ್.ಐ ಟಿ.ಬಿ.ಡ್ಯಾಂ ಘಟಕಗಳು ನೀಡಿದ್ದ ಹನ್ನೆರಡು ತಾಸುಗಳ ಬಂದ್ ಸಂಪೂರ್ಣ ಯಶಸ್ವಿಯಾಯಿತು. ಪೆಟ್ರೋಲ್ ಬಂಕ್ ಗಳನ್ನೊಳಗೊಂಡಂತೆ ವ್ಯಾಪಾರ ವಹಿವಾಟುಗಳು ಹಾಗೂ ಸಾರಿಗೆ ಸಂಪರ್ಕಗಳು ಸಹ ಸಂಪೂರ್ಣ ಸ್ಥಗಿತಗೊಂಡಿದ್ದವು.

ಸ್ಥಳೀಯ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಈ ಹಿಂದೆ ಇದೇ ಸಂಘಟನೆಗಳಿಂದ ಪ್ರತಿಭಟನಾ ರ್‍ಯಾಲಿ ನಡೆಸಿದಾಗ್ಯೂ ಸಹಿತ ಯಾವುದೇ ರೀತಿಯಲ್ಲಿ ಪರಿಹಾರ ಕಾಣದೇ ಇದ್ದುದರಿಂದ ಈ ಬಾರಿ ನೀಡಿದ ಬಂದ್ ಕರೆಗೆ ಟಿ.ಬಿ.ಡ್ಯಾಂ ಜನತೆಯ ಬೆಂಬಲ ವ್ಯಾಪಕವಾಗಿತ್ತು.

ಸಾವಿರಾರು ಸಂಖ್ಯೆಯಲ್ಲಿ ಸೇರಿ ಹೊಸಪೇಟೆಯ ತಹಶೀಲ್ದಾರರ ಕಛೇರಿಯ ಮುಂಭಾಗದಲ್ಲಿ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ಏರ್ಪಡಿಸಿದ್ದ ಬಹಿರಂಗ ಸಭೆಯಲ್ಲಿ ಭಾಗವಹಿಸಿದ್ದರು. ಬಹಿರಂಗ ಸಭೆಯನ್ನು ಉದ್ದೇಶಿಸಿ ಹೋಸಪೇಟೆಯ ಸಿ.ಪಿ.ಐ(ಎಂ) ತಾಲೂಕು ಕಾರ್ಯದರ್ಶಿ ಡಿ.ವೆಂಕಟರಮಣ ಮಾತನಾಡಿದರು. ಡಿ.ವೈ.ಎಫ್.ಐ ನ ಕೆ.ಮಹಾಂತೇಶ್ ಮಾತನಾಡಿ ಗ್ರಾಮಮಟ್ಟದಿಂದ ಹಿಡಿದು ಸಂಸತ್ತಿನವರೆಗೂ ಬಹುತೇಕ ಅಧಿಕಾರಿಗಳು ಹಾಗೂ ರಾಜಕಾರಣಿಗಳು, ಕಮಿಷನ್ ಪರ್ಸೆಂಟೇಜ್ಗಳ ಲೆಕ್ಕಾಚಾರದಲ್ಲೆ ತೊಡಗಿರುವುದರಿಂದ ಜನಗಳ ಸಮಸ್ಯೆಗಳತ್ತ ಗಮನ ನೀಡಲು ಅವರಿಗೆ ಪುರುಸೊತ್ತು ಇಲ್ಲವಾಗಿದೆ. ಎಂದು ಟೀಕಿಸಿದರು.

ಬಹಿರಂಗ ಸಭೆಯನ್ನುದ್ದೇಶಿಸಿ ಅಂಗನವಾಡಿ ನೌಕರರ ಸಂಘದ ಹಾಗೂ ಇಂದಿರಾ ಮಹಿಳಾ ಸಂಘದ ಧನಲಕ್ಷ್ಮಿಯವರು ಮಾತನಾಡಿದರು.

ಮನವಿ ಪತ್ರ ಸ್ವೀಕರಿಸಿ ಮಾತನಾಡಿದ ತಹಶೀಲ್ದಾರರು ಸ್ಥಳೀಯ ಬೇಡಿಕೆಗಳ ಈಡೇರಿಕೆಗೆ ಸಂಬಂಧಿಸಿದಂತೆ ಇದೇ ತಿಂಗಳ 18 ನೇ ತಾರೀಖಿನಂದು ಸಂಬಂಧಿಸಿದ ಅಧಿಕಾರಿಗಳ ಸಭೆಯನ್ನು ಕರೆಯುವುದಾಗಿ ಆಶ್ವಾಸನೆ ನೀಡಿದರು. ಬಹಿರಂಗ ಸಭೆಯ ಆರಂಭದಲ್ಲಿ ಎ. ಕರುಣಾನಿಧಿ ಹಾಗೂ ಸಂಗಡಿಗರು ಕ್ರಾಂತಿ ಗೀತೆಗಳನ್ನು ಹಾಡಿದರು.

ಡಿ.ವೈ.ಎಫ್.ಐನ ಎಸ್. ಅಶೋಕ ಕಾರ್ಯಕ್ರಮದ ನಿರೂಪಣೆ ನಂತರ ವಂದಿಸಿದರು

ರೈತರಿಂದ ರಸ್ತೆ ತಡೆ

ಗುಲ್ಬರ್ಗ: ಜಿಲ್ಲೆಯ ಶಹಾಪೂರ ತಾಲೂಕಿನ ಕರ್ನಾಟಕ ಪ್ರಾಂತ ರೈತ ಸಂಘವು ರೈತರ ಬೇಡಿಕೆಗಳ ಶೀಘ್ರ ಪರಿಹಾರಕ್ಕೆ ಒತ್ತಾಯಿಸಿ ಜುಲೈ 6 ರಂದು ಯಶಸ್ವಿ ರಸ್ತೆ ತಡೆ ನಡೆಸಿತು. ನೂರಾರು ರೈತರು ಪಾಲ್ಗೊಂಡಿದ್ದರು.

ರೈತರನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಕಾರ್ಯದರ್ಶಿ ಚನ್ನಪ್ಪ ಆನೆಗುಂದಿ ರೈತರ ಬೆಳೆ ನಷ್ಟವಾಗಿ ಬೀಜ ಗೊಬ್ಬರ ಕ್ರಿಮಿನಾಶಕ ಇನ್ನಿತರ ಖರ್ಚಿಗಾಗಿತಂದ ಸಾಲಕ್ಕಾಗಿ ಜಮೀನು ಒತ್ತೆ ಇಡುವುದು ಮಾರಾಟ ಮಾಡುವುದು ದಿನ ನಿತ್ಯದ ಮಾತಗಿದೆ. ಮತ್ತೊಂದೆಡೆ ರೈತರು ಆತ್ಮ ಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕೇಂದ್ರ ಬಿಜೆಪಿ ಸರಕಾರ ಹಾಗೂ ರಾಜ್ಯ ಸರಕಾರಗಳು ರೈತರಿಗೆ ಪರಿಹಾರ ನೀಡುವ ಬದಲು ದಿನಬಳಕೆ ವಸ್ತುಗಳ ಬೆಲೆ ಏರಿಸಿ ರೈತರನ್ನು ವಂಚಿಸುತ್ತಿವೆ ಎಂದು ಟೀಕಿಸಿದರು. ಇದೇ ಸಂದರ್ಭದಲ್ಲಿ ಬಿಜೆಪಿಯ ಕೇಂದ್ರ ಸರ್ಕಾರದ ನರಸಿಂಹಂ ಸಮಿತಿಯ ಆಧಾರದಲ್ಲಿ ರೈತರಿಗೆ ಇನ್ನು ಮುಂದೆ ಸಾಲ ನೀಡಬಾರದೆಂಬ ಪ್ರಸ್ತಾಪವನ್ನು ಖಂಡಿಸಿದ ಚನ್ನಪ್ಪನವರು ರೈತರಿಗೆ ವಿದ್ಯುತ್ ಸಬ್ಸಿಡಿ ನಿಲ್ಲಿಸ ಹೊರಟಿರುವುದನ್ನು ಅತ್ಯುಗ್ರವಾಗಿ ಖಂಡಿಸಿದರು.

ಎಸ್.ಎಫ್.ಐ.ನ ಜೈಲಾಲ ತೋಟದ ಮನಿ ರೈತಸಂಘದ ದವಲ್ ಸಾಬ್ ನಧಾಫ್ ಮಾತನಾಡಿ ಕೂಡಲೇ ರೈತರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು.

ರಾಜಕೀಯ ಪ್ರಚಾರಾಂದೋಲನ

ಕುರುಗೋಡು: ಜುಲೈ 8 ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ ಪ್ರಸ್ತುತ ರಾಜಕೀಯ ಪ್ರಚಾರದ ಬೃಹತ್ ಸಭೆ ನಡೆಯಿತು. ಈ ಸಭೆಯಲ್ಲಿ ಅನೇಕ ಗ್ರಾಮಗಳಿಂದ ರೈತರು, ಕೃಷಿ ಕೂಲಿಕಾರರು, ಮಹಿಳೆಯರು, ದೇವದಾಸಿ ಮಹಿಳೆಯರು ಸಾವಿರಾರು ಸಂಖ್ಯೆಯಲ್ಲಿ ನೆರದಿದ್ದರು. ಸಭೆಯ ಅಧ್ಯಕ್ಷತೆಯನ್ನು ಪಕ್ಷದ ಮುಖಂಡ ರಾದ ಕೆ. ಗಾದಿಲಿಂಗಪ್ಪನವರು ವಹಿಸಿದ್ದರು. ಬೃಹತ್ ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಸಮಿತಿಯಸದಸ್ಯರಾದ ಕಾಂ.ಯು ಬಸವರಾಜ್ ರವರು ಮಾತನಾಡುತ್ತಾ ದೇಶದಲ್ಲಿ ರೈತರ ಆತ್ಮಹತ್ಯೆಯ ಪ್ರಕರಣಗಳನ್ನು ತಿಳಿಸಿ ಈ ಘಟನೆಗಳಿಗೆ ಕಾರಣಗಳನ್ನು ವಿವರಿಸಿದರು. ಈ ಘಟನೆಗಳ ಬಗ್ಗೆ ಬಿಜೆಪಿಯ ಮೌನವನ್ನು ಖಂಡಿಸಿದರಲ್ಲದೆ. ಪರಮಾಣು ಬಾಂಬ್ ಸ್ಫೋಟದ ಹಿನ್ನಲೆ ಯನ್ನು ಜನತೆಯ ಮುಂದೆ ತೆರದಿಟ್ಟರು. ನಂತರ ಮಾತನಾಡಿದ ಇನ್ನೊಬ್ಬ ಮುಖಂಡ ಪಿ.ಆರ್ ವೆಂಕಟೇಶ ಬಿಜೆಪಿಯ ಹಿಂದುತ್ವ ನೀತಿ ಎಂಥಹದು ಎಂಬಬಗ್ಗೆ ವಿವರಣೆ ನೀಡಿದರು., ಸಂಘದ ಮುಖಂಡ ವಿ.ಎಸ.ಶಿವಶಂಕರ್ ಸ್ವಾಗತಿಸಿದರು. ಕೆ.ಬಸವರಾಜ್ ವಂದಿಸಿದರು. ಸಭೆಯ ನಂತರ ಕೆಳಕಂಡ ಬೇಡಿಕೆಗಳ ಮನವಿಯನ್ನು ತಹಶೀಲ್ದಾರರಿಗೆ ನೀಡಲಾಯಿತು.

ಬೇಡಿಕೆಗಳು

ಕೃಷಿ ಕೂಲಿಕಾರರಿಗೆ ಬಂಜರು ಭೂಮಿಯನ್ನು ಪುಕ್ಕಟೆಯಾಗಿ ಸರಕಾರ ಹಂಚಬೇಕು.

ಈಗಾಗಲೇ ಇರುವ ರೈತರ ಸಾಲವನ್ನು ಧೀರ್ಘಾವಧಿಗೆ ಮಾರ್ಪಡಿಸಿ ಹೊಸಸಾಲ ನೀಡಬೇಕು.

ಅಂಗನವಾಡಿ ನೌಕರರನ್ನು ಖಾಯಂಗೊಳಿಸಬೇಕು.

ಕಳಪೆಬೀಜ, ರಸಗೊಬ್ಬರ, ಔಷದಿ ಮಾರಾಟಗಾರರನ್ನು ಕೂಡಲೇ ಕಂಡು ಹಿಡಿದು ತಕ್ಕ ಕ್ರಮ ತೆಗೆದು ಕೊಳ್ಳಬೇಕು ಬಳ್ಳಾರಿ ತಾಲೂಕನ್ನು ಬರಗಾಲ ಪೀಡಿತ ಎಂದು ಕೂಡಲೇ ಘೋಷಿಸ ಬೇಕು.

ಡಿ.ವೈ.ಎಫ್.ಐ. ಸಮಾವೇಶ

ಉಡುಪಿ: ತಾಲೂಕಿನ ತೆಂಕನಿಡಿಯೂರು ಭಾರತ ಪ್ರಜಾಸಸ್ತಾತ್ಮಕ ಯುವ ಜನ ಪೇಡರೇಷನ್ (ಡಿ.ವೈ.ಎಫ್.ಐ)ನ ಘಟಕ ಸಮಾವೇಶವು ಜುಲೈ 17 ರಂದು ತಾಲೂಕು ಕಾರ್ಯದರ್ಶಿ ಪಿ.ವಿಶ್ವನಾಥ ಅಧ್ಯಕ್ಷತೆಯಲ್ಲಿ ನಡೆಯಿತು.

ಸಮಾವೇಶ ಉದ್ದೇಶಿಸಿ ಮಾತನಾಡಿದ ತಾಲೂಕು ಅಧ್ಯಕ್ಷರಾದ ಉಮೇಶ್ ಕುಂದಾರ್ ಘಟಕವು ಹಲವಾರು ವರ್ಷಗಳಿಂದ ಸಾರ್ವಜನಿಕ ಹಿತಾಸಕ್ತಿ ಕಾಪಾಡಿಕೊಂಡು ಬಂದಿದ್ದು ಕುಡಿಯುವ ನೀರಿಗಾಗಿ ಪ್ರತಿಭಟನೆ, ಕೊಳವೆ ಬಾವಿಗಾಗಿ ಪ್ರತಿಭಟನೆ, ಚರಂಡಿ ದುರಸ್ತಿಗಾಗಿ ಶ್ರಮದಾನ ಹೀಗೆ ಕಾರ್ಯಕ್ರಮ ಕೈಗೊಂಡಿದ್ದು ಜನ ಮೆಚ್ಚುಗೆ ಗಳಿಸಿರುವುದಕ್ಕೆ ಗ್ರಾಮ ಘಟಕವನ್ನು ಪ್ರಶಂಸಿಸಿದರು.

ಮುಖ್ಯ ಅತಿಥಿಗಳಾಗಿ ರಾಮದಾಸ್ ನೇಕಾರರ ಸಂಘದ ಗುರುರಾಜಶೆಟ್ಟಿಗಾರ್ ರಮೇಶ್ ಮೆಂಡನ್ ಬೀಡಿಕೆಲಸಗಾರರ ಸಂಘದ ದೋಗುಸುವರ್ಣ ಮಾತನಾಡಿ ಕೋಮುವಾದಿ ಶಕ್ತಿಗಳ ಬೆಳವಣಿಗೆಗೆ ಆತಂಕ ವ್ಯಕ್ತಪಡಿಸಿ ಡಿ.ವೈ.ಎಫ್.ಐ ಸಂಘಟನೆಯು ದೇಶದ ಐಕ್ಯತೆಯ ಭದ್ರತೆಗಾಗಿ ಹೋರಾಡುವಂತೆ ಕರೆನೀಡಿದರು.

ಸಮಾವೇಶವು ಸ್ಥಳೀಯ ಸಮಸ್ಯೆಗಳ ವಿರುದ್ಧ ಹೋರಾಟ ಹಾಗೂ ಪರಿಹಾರ ಕಾರ್ಯಕ್ರಮ ರೂಪಿಸುವ ನಿರ್ಣಯ ಕೈಗೊಂಡಿತು. ಉಮೇಶ್ ವಂದನೆ ಸಲ್ಲಿಸಿದರು

ನೂತನ ಸಮಿತಿ

ಅಧ್ಯಕ್ಷರು-ಉಮೇಶ್ ಕುಂದರ್
ಉಪಾಧ್ಯಕ್ಷರು -ರಾಮಚಂದ್ರ
ಕಾರ್ಯದರ್ಶಿ-ಕಿರಣ್
ಕೋಶಾಧಿಕಾರಿ- ಮಂಗಳಗೌರಿ
ಪದಾಧಿಕಾರಿಗಳಾಗಿ ಆಯ್ಕೆಗೊಂಡರು

ಸಮುದಾಯ ಆರೋಗ್ಯ ಕೇಂದ್ರಕ್ಕೆ ಡಿ.ವೈ.ಎಫ್.ಐ ಒತ್ತಾಯ

ಮಂಗಳೂರು: ಕುಪ್ಪೆಪದವು ಪ್ರಾಥಮಿಕ ಆರೋಗ್ಯ ಕೇಂದ್ರವು ಕಿಲೆಂಜಾರ್, ಕೊಳವೂರು, ಮುತ್ತೂರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾಮಾನ್ಯ ಜನರಿಗೆ ಅನಿವಾರ್ಯವಾಗಿದ್ದು ಇಲ್ಲಿಗೆ ಬರುವ ಎಲ್ಲಾ ರೋಗಿಗಳಿಗೆ ಸೌಲಭ್ಯ ಸಿಗುತ್ತಿಲ್ಲವಾಗಿದೆ. ಆದ್ದರಿಂದ ಕೂಡಲೇ ಈ ಆಸ್ಪತ್ರೆಯನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಪರಿವರ್ತಿಸುವಂತೆ ಜುಲೈ 19 ರಂದು ನಡೆದ ಡಿ.ವೈ.ಎಫ್.ಐ ಕುಪ್ಪೆಪದವು ಘಟಕ 2ನೇ ಸಮ್ಮೇಳನ ಸರ್ಕಾರವನ್ನು ಒತ್ತಾಯಿಸಿದೆಯಲ್ಲದೆ ಸ್ಥಳೀಯ ಸಮಸ್ಯೆಗಳ ನಿವಾರಣೆಗಾಗಿ ಹಲವು ನಿರ್ಣಯ ಕೈಗೊಂಡಿದೆ.

ಸಮ್ಮೇಳನದ ಅಂಗವಾಗಿ ಕಾರ್ಮಿಕ ಮುಂದಾಳು ವಾಸುದೇವ ಆಚಾರಿಯವರು ಧ್ವಜಾರೋಹಣ ಮಾಡಿದರು. ಡಿ.ವೈ.ಎಫ್.ಐ ಜಿಲ್ಲಾಧ್ಯಕ್ಷ ಕೃಷ್ಣಪ್ಪಕೊಂಜಾಡಿ ಸಮ್ಮೇಳನ ಉದ್ಘಾಟಿಸಿದರು.

ಎನ್.ಎ. ಹಸನಬ್ಬ ಅಧ್ಯಕ್ಷತೆಯಲ್ಲಿ ನಡೆದ ಸಮ್ಮೇಳನಕ್ಕೆ ಅತಿಥಿಗಳಾಗಿ ವಸಂತ ಆಚಾರಿ, ಯಾದವಶೆಟ್ಟಿ ಮಾತನಾಡಿದರು. ಬೀಡಿ ಕಾರ್ಮಿಕ ಸಂಘದ ಕೆ. ಸದಾಶಿವದಾಸ್ ಶುಭಕೋರಿದರು.

ನೂತನ ಸಮಿತಿ:

ಅಧ್ಯಕ್ಷರು- ಮೊಹಮ್ಮದ್ ರಫೀಕ್ ಕಾರ್ಯದರ್ಶಿ-ಕೆ.ಬಾಲಕೃಷ್ಣ ಆಯ್ಕೆಗೊಂಡರಲ್ಲದೆ. ಇಪ್ಪತ್ತು ಮಂದಿಯ ಕಾರ್ಯಕಾರಿ ಸಮಿತಿ ರಚನೆ ಗೊಂಡಿದೆ.

ಎಸ್.ಎಫ್.ಐ.ಯಿಂದ ಭೂತ ದಹನ

ರಾಯಚೂರು ಭಾರತ ವಿದ್ಯಾರ್ಥಿ ಫೆಡರೇಷನ್ನಿನ ರಾಜ್ಯ ಸಮಿತಿಯ ಕರೆಯ ಮೇರೆಗೆ ರಾಯಚೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿಗಳು ಅಂಬೇಡ್ಕರ್ ವೃತ್ತದಲ್ಲಿ ಕೇಂದ್ರ ಸರ್ಕಾರದ ಉನ್ನತ ಶಿಕ್ಷಣ ಫೀ ಹೆಚ್ಚಳ ಪ್ರಸ್ತಾವನೆ ವಿರೋಧಿಸಿ ಕೇಂದ್ರ ಮಾನವ ಸಂಪನ್ಮೂಲ ಸಚಿವ ಮುರುಳಿ ಮನೋಹರ ಜೋಶಿಯವರು ಪ್ರತಿಕೃತಿ ದಹನಮಾಡಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಜಿಲ್ಲಾ ಕಾರ್ಯದರ್ಶಿ ಯಲ್ಲಪ್ಪ ಮಾತನಾಡಿ ಶಿಕ್ಷಣ ಶುಲ್ಕ ಹೆಚ್ಚಳದಿಂದ ಗುರುಕುಲ ಪದ್ಧತಿಯತ್ತ ಬಿಜೆಪಿ ಹೊರಟಿದೆ ಎಂದು ಟೀಕಿಸಿ ಕೂಡಲೇ ಪ್ರಸ್ತಾವನೆ ಕೈಬಿಡುವಂತೆ ಒತ್ತಾಯಿಸಿದರು.

ಶರಣ, ಬಸವ, ಈರಣ್ಣ, ಕೆ.ಜಿ. ವಿರೇಶ್, ವಿರಭದ್ರ, ಶಾಮಸುಂದರ, ಜಿ.ಬಿ. ಗೋಪಾಲ ನಾಯಕ್, ಶರಣಪ್ಪ ಗೂಳಪ್ಪ, ಶ್ರೀಕಾಂತ ಮುಂತಾದವರ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಿತು.

ಜಿಲ್ಲಾಧಿಕಾರಿಗಳ ಮುಖಾಂತರ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು.

ಆಗಸ್ಟ್ 6 ರಂದು ದೇಶಾದ್ಯಂತ ಸಂಪೂರ್ಣ ನಿಶ್ಯಸ್ತ್ರೀಕರಣ ದಿನವನ್ನು ಅಣ್ವಸ್ತ್ರಗಳಿಗೆ ಪ್ರತಿಭಟನೆಯ ದಿನವನ್ನು ಆಚರಿಸುವ ಸಂದರ್ಭದಲ್ಲಿ ಒಂದು ನೆನಪು

ಅಣುಬಾಂಬಿನ ವಿನಾಶಲೀಲೆಯ ನೆನಪಿದೆಯೇ?



ಆಗಸ್ಟ್ 7, 1945 ಹಿರೋಶಿಮಾ ಸ್ಫೋಟದ ತಾಪದಿಂದ ತೀವ್ರ ಸುಟ್ಟಗಾಯಗಳಿಂದ ನಿಶ್ಚಲನಾಗಿಬಿಟ್ಟ ಈ ವ್ಯಕ್ತಿ ಮೆಲ್ಲನೆ ಕೊನೆಯುಸಿರೆಳೆಯುತ್ತಿದ್ದಾನೆ.



ಆಗಸ್ಟ್ 10, 1945 ನಾಗಾಸಾಕಿಯ ನೇವಿ ಆಸ್ಪತ್ರೆಯಲ್ಲಿ ಚರ್ಮ ನೇತಾಡುತ್ತಿರುವ ಒಂದು ಬಾಲಕಿ

ಇದ್ದಂತಿಲ್ಲ. ಬಾಂಬ್ ಸ್ಫೋಟದ ನಂತರದ ವಿಕಿರಣಗಳ ಬಗ್ಗೆ ಭಾರತ ಮತ್ತು ಪಾಕಿಸ್ತಾನದಲ್ಲಿ ಮಾತ್ರವಲ್ಲ, ಬೇರೆ ಪರಮಾಣು ಶಸ್ತ್ರಸಜ್ಜಿತ ದೇಶಗಳಲ್ಲೂ ಜನರಿಗೆ ನಿಜವಾಗಿಯೂ ಗೊತ್ತಿದ್ದಂತಿಲ್ಲ ಎಂದು ಭಾರತ-ಪಾಕಿಸ್ತಾನಗಳಿಗೆ ಇತ್ತೀಚೆಗೆ ಭೇಟಿ ನೀಡಿದ ಯಾಸುಹಿಕೋ ತಕೇಟಾ ಹೇಳಿದ್ದನ್ನು ನೀವು 'ಐಕ್ಯರಂಗ'ದಲ್ಲಿ ಓದಿರುವಿರಿ. 'ಆಗಸದಲ್ಲಿ ಬೆಂಕಿಯುಗುಳುವುದನ್ನು ಕಂಡಾಗ ಬೆಂಚಿನಡಿ ಅಡಗಿಕೊಂಡೆ. ನನ್ನ ಸೋದರಿಯ ತಲೆಗೂದಲು ಸೀದು ಹೋಯಿತು. ದೇಹವಿಡೀ ಸುಟ್ಟ ಗಾಯಗಳಾದವು. ಅಮ್ಮಾ ಅಮ್ಮಾ ಎಂದು ಅಂಗಲಾಚುತ್ತಿದ್ದಳು. ಆದರೆ ಸಹಾಯಕ್ಕೆ ಬರುವವರು ಯಾರೂ ಇರಲಿಲ್ಲ" ಎಂದು ನೆನಪಿಸಿಕೊಂಡರು ತಕೇಟಾ. ಇಂತಹ ಇನ್ನೂ ಕೆಲವು ನೆನಪುಗಳನ್ನು ಆಗಸ್ಟ್ 6, 1995 ಹಿರೋಶಿಮಾದ ಮೇಲೆ ಹಾಗೂ ಆಗಸ್ಟ್ 9, 1995 ರಂದು ನಾಗಸಾಕಿಯ ಮೇಲೆ ಹಾಕಿದ ಬಾಂಬುಗಳ ವಿನಾಶಲೀಲೆಯನ್ನು ಇಲ್ಲಿ ನೆನಪಿಸಿದ್ದಾರೆ ಬೆಂಗಳೂರಿನ ಒಬ್ಬ ವಿಜ್ಞಾನಿ 'ಅರ್ಜುನ್' ಅವರು.

"ರಸ್ತೆಯಲ್ಲಿ ಹಾದುಹೋಗುತ್ತಿದ್ದ ಜನರ ಮೈಮೇಲೆಲ್ಲಾ ರಕ್ತ, ನೇತಾಡುತ್ತಿರುವ ಹರಿದ ಬಟ್ಟೆಗಳು, ಚರ್ಮ ಸುಲಿದು ಬಂದು ಅವರ ಬೆರಳ ತುದಿಗಳಲ್ಲಿ ಜೋತಾಡುತ್ತಿದೆ. ಕೈಗಳನ್ನು ಇಳಿ ಬಿಟ್ಟು ಮೌನವಾಗಿ ನಡೆದು ಹೋಗುತ್ತಿದ್ದಾರೆ" - ಇದು ಬಾಂಬು ವಿನಾಶದಿಂದ ಹೇಗೋ ಬದುಕುಳಿದ ಒಬ್ಬರ ನೆನಪು.

"ತಾಯಿಯನ್ನು ಕಾಣದ ಮಗುವಿನ ಆಕ್ರಂದನ; ತಮ್ಮ ಮಕ್ಕಳಿಗಾಗಿ ಹುಡುಕಾಡುತ್ತಾ ಅಳುವ ತಾಯಂದಿರು; ಬಿಸಿ ತಾಳಲಾರದೆ ನೀರಿನ ತೊಟ್ಟಿಗಳಲ್ಲಿ ತಮ್ಮ ದೇಹಗಳನ್ನು ತಣ್ಣಗಾಗಿಸಲು ಪ್ರಯತ್ನಿಸುವ ಜನಗಳು; ಜೀವ ಉಳಿಸಿಕೊಳ್ಳಲು ಓಡುತ್ತಿದ್ದ ಪ್ರತಿಯೊಬ್ಬರೂ ರಕ್ತದಿಂದ ತೋಯ್ದು ಹೋಗಿದ್ದರು" ಇದು ಇನ್ನೊಬ್ಬರ ನೆನಪಿನ ಚಿತ್ರ.

'ಗಂಭೀರವಾಗಿ ಗಾಯಗೊಂಡ ನನ್ನ ಹೆಂಡತಿಯನ್ನು ನದಿ ತಟಕ್ಕೆ ಒಯ್ಯುತ್ತಿದ್ದಾಗ ಕಂಡ ದೃಶ್ಯ ನನ್ನನ್ನು ಹೌಹಾರುವಂತೆ ಮಾಡಿತು - ಒಬ್ಬ ಸಂಪೂರ್ಣ ನಗ್ನ ಮನುಷ್ಯ ಮಳೆಯಲ್ಲಿ ನಿಶ್ಯಬ್ದವಾಗಿ ನಿಂತಿದ್ದಾನೆ- ಅವನ ಅಂಗೈಯಲ್ಲಿ ಅವನದೇ ಕಣ್ಣು ಗುಡ್ಡೆ!" ಮತ್ತೊಬ್ಬ ನೆನಪಿಸಿಕೊಳ್ಳುತ್ತಾನೆ. "ಆ ಕಣ್ಣು ನನ್ನನ್ನೇ ದಿಟ್ಟಿಸಿ ನೋಡುವಂತಾಗಿ ನನ್ನ ರಕ್ತ ತಣ್ಣಗಾಯಿತು"- ಬಹುಶಃ ಇದೇ ದೃಶ್ಯವನ್ನು ನೋಡಿದ ಇನ್ನೊಬ್ಬರ ನೆನಪು.

ಬಾಂಬು ತಂದಿರುವ ಆತಂಕ

ಇದೊಂದು ಸನ್ನಿವೇಶವನ್ನು ನೋಡಿ. ಒಂದು ಮಿಲಿಟರಿ ಉಪಕರಣ ಭಾರತದತ್ತ ಒಂದು ಅಪರಿಚಿತ ವಸ್ತು ಚಲಿಸುತ್ತಿದೆ ಎಂದು ಗುರುತಿಸುತ್ತದೆ. ಅದು ಪರಮಾಣು ಸಿಡಿತಲೆಯೋ ಅಥವಾ ಬೇರೇನಾದರೂ ನಿರುಪದ್ರವಿ ವಸ್ತುವೋ ಈ ಉಪಕರಣದಿಂದ ತಿಳಿಯದು. ಆದರೆ ಪಾಕಿಸ್ತಾನದ ಬಳಿ ಪರಮಾಣು ಬಾಂಬು ಇದೆ ಎಂದು ತಿಳಿದಿರುವಾಗ ಈ ವಸ್ತುವನ್ನು ಗುರುತಿಸಿದಾತ ಸುಮ್ಮನಿರಲು ಸಾಧ್ಯವಿಲ್ಲ. ಏಕೆಂದರೆ ಯಾವುದೇ ಪಾಕಿಸ್ತಾನೀ ಕ್ಷಿಪಣಿ ಮೂರೇ ನಿಮಿಷಗಳೊಳಗೆ ಭಾರತದ ಯಾವುದೇ ನಗರವನ್ನು ಹೊಡೆಯಬಹುದು. ಹಾಗಿದ್ದರೆ ಏನು ಮಾಡಬೇಕು? ದಿಲ್ಲಿಯ ಮುಖ್ಯಾಲಯಕ್ಕೆ ದೂರವಾಣಿ ಸಂದೇಶ ಕಳಿಸಿ ಆದೇಶ ಪಡೆಯುವಷ್ಟು ಸಮಯವಿಲ್ಲ. ಆತ ಒಂದು ಬಟನ್ ಒತ್ತುತ್ತಾನೆ. ಭಾರತದ ಒಂದು ಕ್ಷಿಪಣಿ ಪರಮಾಣು ಸಿಡಿತಲೆಯನ್ನು ಹಾರಿಸಿ ಕೊನೇ ನಿಮಿಷಗಳಲ್ಲಿ ಪಾಕಿಸ್ತಾನೀ ನಗರವೊಂದಕ್ಕೆ ಹೊಡೆಯುತ್ತದೆ. ಈ ನಗರ ಲಾಹೋರ್ ಆಗಿದ್ದರೆ, ಅದರೊಡನೆ ನಮ್ಮ ಅಮೃತಸರವೂ ಧ್ವಂಸವಾಗುತ್ತದೆ. ಆ ನಗರ ಇಸ್ಲಾಮಾಬಾದ್ ಆಗಿದ್ದರೆ ನಮ್ಮ ಜಮ್ಮು ನಗರವೂ ಧ್ವಂಸವಾಗುತ್ತದೆ.

ಇಂತಹ ತಪ್ಪು ಪಾಕಿಸ್ತಾನೀ ಕಡೆಯಿಂದಲೂ ಆಗಬಹುದು. ಆಗಲೂ ವಿನಾಶಕಾರೀ ಪರಿಣಾಮ ಇದೇ.

ಇದು ಕೇವಲ ಕಲ್ಪನೆಯಲ್ಲ. ೧೯೭೭ ರಿಂದ ೧೯೮೪ ರ ನಡುವೆ ಅಮೆರಿಕನ್ ಮುನ್ನೆಚ್ಚರಿಕೆ ಸಾಧನಗಳು ೨೦೭೮೪ ತಪ್ಪು ಎಚ್ಚರಿಕೆಗಳನ್ನು ನೀಡಿವೆ. ಬಾತುಕೋಳಿ ಹಾರಿದಾಗ, ಪೂರ್ಣ ಚಂದ್ರದ ಬಿಂಬ ಇತ್ಯಾದಿಗಳನ್ನೆಲ್ಲಾ ಮಿಲಿಟರಿ ಉಪಕರಣಗಳು 'ಕ್ಷಿಪಣಿ ಹೊಡೆತ' ಎಂದು ದಾಖಲಿಸಿಕೊಂಡಿವೆ. ಮಾನವ ಹಸ್ತಕ್ಷೇಪದಿಂದಷ್ಟೇ ವಿನಾಶಕಾರಿ ಪರಿಸ್ಥಿತಿ ಬರಲಿಲ್ಲ. ಆದರೆ ೧೦೦೦ ಕಿ.ಮಿ. ನಷ್ಟು ಗಡಿ ಇರುವ, ಯಾವುದೇ ನಗರವನ್ನು ಪರಸ್ಪರ ಐದು ನಿಮಿಷಗಳಲ್ಲಿ ತಲುಪಬಲ್ಲ ಭಾರತ-ಪಾಕಿಸ್ತಾನಗಳ ಸಂದರ್ಭಗಳಲ್ಲಿ ಈ ಅಪಾಯ ಇನ್ನೂ ಹೆಚ್ಚು. ಎರಡೂ ಕಡೆ ಪರಮಾಣು ಶಸ್ತ್ರಾಸ್ತ್ರಗಳಿಲ್ಲದಿದ್ದರೆ ಈ ಆತಂಕವಿರುತ್ತಿರಲಿಲ್ಲ.

ಅದೃಷ್ಟವಶಾತ್ ಇಂತಹ ಒಂದು ಧಾಳಿಯ ಬೆದರಿಕೆಯ ಅನುಭವ ಕಾಣದವರು ಬಹುಶಃ ಜಪಾನಿನ ನಾಗರಿಕರ ಭಯವಿಹ್ವಲತೆಯನ್ನು ಈಗ ಅರ್ಥ ಮಾಡಿಕೊಳ್ಳಲಾರರು.

"ಟೋಕಿಯೋ ಮುಂದಿನ ಗುರಿ ಎಂದು ಜನ ಹೇಳುತ್ತಿದ್ದಾರೆ...... ಹತಾಶೆಯ ಕೊನೆ ಮುಟ್ಟಿದ್ದ ಜನ ಈಗ ಸ್ವಲ್ಪ ನಿರಾಳವಾಗಿ ಅತ್ತಿತ್ತ ಓಡಾಡುತ್ತಿದ್ದಾರೆ. ಈ ಕ್ಷಣ ಕಳೆಯಿತು. ಏನೂ ಸಂಭವಿಸಲಿಲ್ಲ. ಮತ್ತೊಂದು ಕ್ಷಣ ಕಳೆಯಿತು. ಏನೂ ಸಂಭವಿಸಲಿಲ್ಲ. ಇದರಿಂದಾಗಿ ಎಲ್ಲೆಲ್ಲೂ ಸಂತೋಷದ ಸಂಭ್ರಮ. ಆಗಲೇ ಗಾಳಿ ತುಂಬಿದ ಆಟದ ಬಲೂನಿಗೆ ಮತ್ತೆ -ಮತ್ತೆ ಗಾಳಿ ಹಾಕುತ್ತಾ ಈಗ ಟಪ್ ಎನ್ನುತ್ತದೋ, ಈಗ ಟಪ್ ಎನ್ನುತ್ತದೋ ಎಂಬಂತಿತ್ತು ಜನಗಳ ಮನಸ್ಥಿತಿ' ಎಂದು ಆಗಿನ ಯುವ ಲೇಖಕ ಯುಕಿಯೋ ಮಿಶಿಮಾ ವರ್ಣಿಸಿದ್ದರು.

ಮೇ 1945 ರಲ್ಲಿ ಹಿಟ್ಲರ್ ಜರ್ಮನಿ ಶರಣಾಗತವಾಗಿತ್ತು. ಮುಸಲೋನಿಯ ಇಟಲಿ ಅದರ ಮೊದಲೇ ಶರಣಾಗಿತ್ತು. ಜಪಾನ್ ಮಾತ್ರ ಇನ್ನೂ ಯುದ್ಧದಲ್ಲಿ ತೊಡಗಿತ್ತು. ಆದರೆ ಅದರ ಸೋಲೂ ಸನ್ನಿಹಿತವಾಗಿತ್ತು. ಅಣುಬಾಂಬು ಬಳಕೆ ಬೇಡ ಎಂಬ ವಿಜ್ಞಾನಿಗಳ ಬಲವಾದ ಆಗ್ರಹವನ್ನು ಪರಿಶೀಲಿಸಲು ಅಮೆರಿಕನ್ ಸರಕಾರ ನೇಮಿಸಿದ್ದ ಫ್ರಾಂಕ್ ಸಮಿತಿ ಜೂನ್ 1945 ರಲ್ಲಿ ಅಣು ಬಾಂಬಿನಿಂದ ಸಾಮರಿಕ ಉದ್ದೇಶವೇನೂ ಈಡೇರುವುದಿಲ್ಲವಾದ್ದರಿಂದ ಅದನ್ನು ಜಪಾನಿನ ವಿರುದ್ಧ ಬಳಸಬಾರದು ಎಂದು ಶಿಫಾರಸು ಮಾಡಿತ್ತು. ಬಾಂಬನ್ನು ಬಳಸಬಾರದು ಆದರೆ ಜಪಾನೀಯರನ್ನು ಕರೆದು ಅವರ ಸಾಮರ್ಥ್ಯದ ಪ್ರದರ್ಶನ ನಡೆಸಬೇಕು ಎಂದು ವಿಜ್ಞಾನಿಗಳು ಆಗ್ರಹಿಸುತ್ತಿದ್ದರು. ಆದರೆ ಅಮೆರಿಕನ್ ಆಡಳಿತದ ರಾಜಕೀಯ-ಮಿಲಿಟರಿ ಅಧಿಕಾರಿಗಳು ವಿಜ್ಞಾನಿಗಳ ಈ ಆಗ್ರಹವನ್ನು ಬದಿಗೆ ತಳ್ಳಿ ಹಾಕಿದರು.

ಆಗಸ್ಟ್ 6, 1945 ರಂದು ಮೊದಲ ಅಣು ಬಾಂಬು ಸ್ಫೋಟದ ಆಘಾತಕರ ಸುದ್ದಿ ಬಂತು. ಜಪಾನೀ ನಗರ ಹಿರೋಶಿಮಾ ಮೇಲೆ ಬಾಂಬು ಹಾಕಲಾಯಿತು. ಮೂರು ದಿನ ನಂತರ ಇನ್ನೊಂದು ಜಪಾನೀ ನಗರ ನಾಗಸಾಕಿಯ ಮೇಲೆ ಬಾಂಬು ಹಾಕಲಾಯಿತು. ಹಿರೋಶಿಮಾದ ಮೇಲೆ ಹಾಕಿದ್ದು 13 ಕಿಲೋಟನ್‌ನ 'ಲಿಟ್ಲ್ ಬಾಯ್'(ಚಿಕ್ಕಹುಡುಗ) ನಾಮಾಂಕಿತ ಬಾಂಬ್. ನಾಗಸಾಕಿಯ ಮೇಲೆ ಹಾಕಿದ್ದು 20 ಕಿಲೋಟನ್ ಸಾಮರ್ಥ್ಯದ 'ಫ್ಯಾಟ್‌ಮ್ಯಾನ್'(ದಪ್ಪನೆ ಮನುಷ್ಯ) ಎಂಬ ಹೆಸರಿನ ಬಾಂಬ್, ಎಂತಹ ಮುಗ್ಧ



ಅಪಹಾಸ್ಯ ಅಲ್ಲವೇ?

ಹಿರೋಶಿಮಾದ ಮೇಲೆ ಬಿದ್ದ ಬಾಂಬ್ ಮೊದಲ ದಿನವೇ 70000-1,00,000 ಜನರನ್ನು ಸಾಯಿಸಿತು. ನಾಗಸಾಕಿಯಲ್ಲಿ ಮೊದಲ ದಿನವೇ ಬಲಿಯಾದವರ ಸಂಖ್ಯೆ 40 ಸಾವಿರವಿರಬಹುದು ಎಂದು ಅಂದಾಜು ಮಾಡಲಾಗಿದೆ. ಆರು ವರ್ಷಗಳ ಕಾಲ ನಡೆದ ಎರಡನೇ ಮಹಾಯುದ್ಧದಲ್ಲಿ ಸತ್ತ ಮಿಲಿಟರಿ ಜನರ ಸಂಖ್ಯೆ ಸುಮಾರು 2 ಕೋಟಿ. ಅಂದರೆ ಪ್ರತಿದಿನ 8000 ಜನರು ಬಲಿಯಾದರು. ಆದರೆ ಈ ಎರಡು ಅಣುಬಾಂಬುಗಳು ಎರಡೇ ದಿನಗಳಲ್ಲಿ ಇದರ 12 ಪಟ್ಟು ಜನಗಳ ಬಲಿ ತೆಗೆದುಕೊಂಡವು. ಇವರಲ್ಲಿ ಬಹುಪಾಲು ಮುಗ್ಧ ನಾಗರಿಕರು.


ಹಿರೋಶಿಮಾದಲ್ಲಿ ಹಲವು ಗಂಟೆಗಳ ಕಾಲ ಬೆಂಕಿಹತ್ತಿಕೊಂಡು ಉರಿಯುತ್ತಿತ್ತಂತೆ. ಬಾಂಬು ಹಾಕಿದ ಒಂದು ಮೈಲಿ ವಿಸ್ತೀರ್ಣದೊಳಗಿನ ಜನಗಳಿಗೆ 5ನೇ ಮಟ್ಟದ ಸುಟ್ಟ ಗಾಯಗಳಾದವು, 2-5 ಮೈಲು ವಿಸ್ತೀಣದಲ್ಲಿದ್ದವರಿಗೆ ಒಂದರಿಂದ ನಾಲ್ಕನೇ ಮಟ್ಟದ ಸುಟ್ಟಗಾಯಗಳಾದವು. 'ಲಿಟ್ಲ್ ಬಾಯ್' ಬೆಂಕಿ ಚೆಂಡಿನ ಅರ್ಧ ಮೈಲೊಳಗೆ ಇದ್ದವರು ಕ್ಷಣಾರ್ಧದಲ್ಲೇ ಹೊಗೆಯಾಡುವ ಕಪ್ಪು ಕಲ್ಲಿದ್ದಲಾದರು. ಅವರ ಒಳಗಿನ ಅಂಗಗಳು ಕುದಿದು ನಾಶವಾದವು. "ಸುಟ್ಟ ಮನುಷ್ಯ ಎಷ್ಟು ಚಿಕ್ಕದಾಗಿ ಬಿಡುತ್ತಾನಲ್ಲವೇ ಡಾಕ್ಟರೇ" ಎಂದು ಒಬ್ಬ ರೋಗಿ ಪ್ರಶ್ನಿಸಿದನಂತೆ. ಈಗ ಹಿರೋಶಿಮಾ ಬೀದಿ ಬದಿಗಳಲ್ಲಿ ಅಂಟಿಕೊಂಡಿರುವ ಸಾವಿರಾರು ಕರಿ ತುಂಡುಗಳನ್ನು ಕಾಣಬಹುದು ಎಂದು ಆಗಿನ ಒಂದು ವರದಿ ಹೇಳಿತು.

ಇದ್ದಕ್ಕಿದ್ದಂತೆ ನಡೆದ ಸ್ಫೋಟ ಉಂಟು ಮಾಡಿದ ಅಲೆಯ ಅಪ್ಪಳಿಕೆ ನಾವು ಬಂಗಾಳ ಕೊಲ್ಲಿಯಲ್ಲಿ ಕಾಣುವ ಅತ್ಯಂತ ಭಯಂಕರ ಸುಂಟರ ಗಾಳಿಗಿಂತಲೂ 50-60 ಪಟ್ಟು ಬಲವಾಗಿತ್ತು. ಸೆಕೆಂಡ್‌ಗೆ 2 ಮೈಲಿನಂತೆ ಹರಡಿದ ಈ ಅಲೆಗಳು ಎಬ್ಬಿಸಿದ ಧೂಳಿನಿಂದ ಇಡೀ ನಗರವನ್ನೇ ಕತ್ತಲು ಆವರಿಸಿತು.

ಹಿರೋಶಿಮಾದ 76 ಸಾವಿರ ಕಟ್ಟಡಗಳಲ್ಲಿ 70 ಸಾವಿರಕ್ಕೆ ಧಕ್ಕೆ ಬಂದಿತು. 48 ಸಾವಿರ ಸಂಪೂರ್ಣ ನೆಲಸಮವಾದವು. ನಗರದ 54% ಜನ ಬಲಿಯಾದರು. ನಂತರದ 5 ವರ್ಷಗಳಲ್ಲಿ ಈ ಬಾಂಬಿನ ದುಷ್ಪರಿಣಾಮಗಳಿಂದ ಇನ್ನೂ 60 ಸಾವಿರ ಜನ ಸತ್ತರು. ನಾಗಸಾಕಿಯ ಬೆಂಕಿಯುಂಡೆಯು ಅಷ್ಟೇ ಭಯಾನಕವಾಗಿದ್ದರೂ ಅಲ್ಲಿಯ ಗುಡ್ಡಗಾಡು ಭೂ ಪ್ರದೇಶದಿಂದಾಗಿ ಅದರ ತೀವ್ರತೆ ಕಮ್ಮಿಯಿತ್ತು. ಆದರೂ ಮುಂದಿನ 5 ವರ್ಷಗಳಲ್ಲಿ ಅಲ್ಲಿ ಮತ್ತೆ 70 ಸಾವಿರ ಜನ ಬಲಿಯಾದರು.

ಯುದ್ಧ ಇನ್ನೇನು ಮುಗಿಯಿತು ಎಂದು ನಿಟ್ಟುಸಿರು ಬಿಡುತ್ತಿದ್ದಂತೆ ಎರಗಿದ ಈ ಬಾಂಬುಗಳು ಇಡೀ ಎರಡು ನಗರಗಳನ್ನು ಸಾವಿನ ತಾಣವಾಗಿ ಮಾಡಿಬಿಟ್ಟವು. ನೋವಿನಿಂದ ಬೊಬ್ಬಿಡುತ್ತಿದ್ದ ಜನ ಆಸ್ಪತ್ರೆಯತ್ತ ಧಾವಿಸಿದರು. ಅಲ್ಲಿ ಯಾರೂ ಇರಲಿಲ್ಲ. ಏಕೆಂದರೆ ಡಾಕ್ಟರುಗಳು, ನರ್ಸ್‌ಗಳು ಒಂದೋ ಬಾಂಬಿನ ತಾಪದಿಂದ ಆವಿಯಾಗಿ ಹೋಗಿದ್ದರು ಅಥವಾ ಸುಟ್ಟು ಕರಕಲಾಗಿದ್ದರು. ಹಲವರು ನದಿಯತ್ತ ಧಾವಿಸಿ ಅದರಲ್ಲಿ ಧುಮುಕಿದರು - ತಾಪ ತಾಳಲಾರದೆ. ಅಲ್ಲೇ ಮುಳುಗಿ ಸತ್ತರು. ಈ ಭೀಕರ ದೃಶ್ಯಗಳ ಛಾಯಾ ಚಿತ್ರ ತೆಗೆಯಲೂ ಜನಗಳಿರಲಿಲ್ಲ. ಮರುದಿನ ತೆಗೆದ ಚಿತ್ರಗಳು ಹೇಗೋ ಬದುಕುಳಿದವರ ಗೋಳಿನ ಕಥೆಗಳಿಂದಲೇ ಈ ವಿನಾಶಲೀಲೆಯ ಚಿತ್ರ ಜಗತ್ತಿನ ಮುಂದೆ ಬಂದದ್ದು.

ನಮ್ಮ ದೇಶಬಾಂಧವರೂ, ಅಥವಾ ನಮ್ಮ ನೆರೆ ದೇಶ ಪಾಕಿಸ್ತಾನದ ಜನಗಳು ಅಥವಾ ವಿಶ್ವದ ಬೇರಾವುದೇ ಜನ ಮತ್ತೆ ಇಂತಹ ವಿನಾಶಲೀಲೆಗೆ ಬಲಿಯಾಗಬೇಕು ಎಂದು ನಾವು ಬಯಸಬೇಕೇ? ಖಂಡಿತಾ ಇಲ್ಲ. ಜಗತ್ತು ಇಂದು ಇಡೀ ವಿಶ್ವವನ್ನು ಒಂದಲ್ಲ 50 ಬಾರಿ ಪೂರ್ಣ ಭಸ್ಮ ಮಾಡಬಲ್ಲಷ್ಟು ಪರಮಾಣು ಶಸ್ತ್ರಾಸ್ತ್ರಗಳಿಂದ ತುಂಬಿದೆ. ಅಂದರೆ ಪ್ರತಿಯೊಬ್ಬ ನಾಗರಿಕನ ಬೆನ್ನಿನ ಮೇಲೂ 100 ಟನ್ ಡೈನಾಮೈಟ್‌ನಷ್ಟು ಪರಮಾಣು ಅಸ್ತ್ರ ಇದೆ. ಇಂತಹ ಸನ್ನಿವೇಶದಲ್ಲಿ ಸಂಪೂರ್ಣ ನಿಶ್ಯಸ್ತ್ರೀಕರಣದ ಆಂದೋಲನದಲ್ಲಿ ಧುಮುಕುವುದು ಎಲ್ಲಾ ನಾಗರೀಕರ ಕರ್ತವ್ಯವಲ್ಲವೇ?



ಆಗಸ್ಟ್ 5, 1945 ಹಿರೋಶಿಮಾ ಕೈಗಾರಿಕಾ ಪ್ರೋಸಹನಾ ಮಂಡಳಿಯ ಕಟ್ಟಡ



ಆಗಸ್ಟ್ 6, 1945 ಹಿರೋಶಿಮಾ ಕೈಗಾರಿಕಾ ಪ್ರೋಸಹನಾ ಮಂಡಳಿಯ ಕಟ್ಟಡದ ಅವಶೇಷ. ಇದನ್ನೀಗ ಹಿರೋಶಿಮಾ ಬಾಂಬ್ ಸ್ಫೋಟದ ಸ್ಮಾರಕವಾಗಿ ಮಾಡಲಾಗಿದೆ.

ಇದು ನಿಮಗೆ ಗೊತ್ತೆ?

- ಅಮೆರಿಕಾ ಬಳಸಿದ ಮೊದಲ ಎರಡು ಬಾಂಬುಗಳ ತಯಾರಿಕೆಯ ಮ್ಯಾನ್‌ಹಟನ್ ಯೋಜನೆ ಆರಂಭವಾದದ್ದು ಅಮೆರಿಕಾಕ್ಕೆ ವಲಸೆಬಂದ ವಿಜ್ಞಾನಿಗಳ ಒತ್ತಡದಿಂದ- ಹಿಟ್ಲರ್ ಅಣುಶಕ್ತಿ ಸಂಶೋಧನೆಯ ದುರುಪಯೋಗವನ್ನು ಯುದ್ಧದಲ್ಲಿ ಮಾಡಬಹುದೆಂಬ ಭಯದಿಂದ. ಆದರೆ ಈ ಭಯ ನಿಜವಾದದ್ದು ಕಂಡಾಗ ಅದೇ ವಿಜ್ಞಾನಿಗಳು ಅಮೆರಿಕಾದ ಅಧ್ಯಕ್ಷರಿಗೆ ಪತ್ರ ಬರೆದು ಬಾಂಬುಗಳನ್ನು ಬಳಸಬಾರದು ಎಂದು ಆಗ್ರಹಿಸಿದರು. ಅಮೆರಿಕನ್ ಆಡಳಿತವು ಅದನ್ನು ತಿರಸ್ಕರಿಸಿತು.
- ಬಾಂಬಿನ ಬಳಕೆ ಅನಗತ್ಯ ಎಂದು ವಿಜ್ಞಾನಿಗಳ ಒತ್ತಡದಿಂದಾಗಿ ರಚಿಸಿದ ಫ್ರಾಂಕ್ ಸಮಿತಿಯು ಜೂನ್ ೫, ೧೯೪೫ ರಂದು ಶಿಫಾರಸು ಮಾಡಿತ್ತು. ಅದನ್ನೂ ಅಮೆರಿಕನ್ ಆಡಳಿತ ಬದಿಗೊತ್ತಿತು.
- ೩.೪ ಲಕ್ಷ ಮಂದಿಯನ್ನು ಬಲಿತೆಗೆದುಕೊಂಡ ಹಿರೋಶಿಮಾ, ನಾಗಾಸಾಕಿಯ ಬಾಂಬುಗಳ ಪ್ರಯೋಗ ಸಂಪೂರ್ಣ ಅನಗತ್ಯವಾಗಿತ್ತು. ಏಕೆಂದರೆ ಜಪಾನ್ ಆಗಲೇ ಸೋಲಿನ ಅಂಚಿನಲ್ಲಿತ್ತು. ಈ ಬಾಂಬ್ ಯುದ್ಧಾನಂತರ ನಮ್ಮ ಮಾತನ್ನು ಎಲ್ಲರೂ ಕೇಳುವಂತೆ ಮಾಡುವ ಸ್ಥಾನವನ್ನು ನಮಗೆ ನೀಡಬಲ್ಲದು' ಎಂದು ಸಲಹೆ ಮಾಡಲಾಯಿತು ಎಂದು ಅಮೆರಿಕನ್ ಅಧ್ಯಕ್ಷ ಟ್ರೂಮನ್ ಒಪ್ಪಿಕೊಂಡಿದ್ದಾರೆ. ಅಂದರೆ ವಿಶ್ವದಲ್ಲಿ ಅಮೆರಿಕಾದ ಪ್ರಾಬಲ್ಯ ಮೆರೆಸಲಿಕ್ಕಾಗಿಯಷ್ಟೇ ಈ ನರಮೇಧ?
- ನಂತರವೂ ಅಣ್ವಸ್ತ್ರಗಳ ಮೇಲೆ ನಿಷೇಧ ಹಾಕಬೇಕೆಂಬ ಸೋವಿಯತ್ ಪ್ರಸ್ತಾವ ವಿಶ್ವಸಂಸ್ಥೆಯಲ್ಲಿ ಬಂದಾಗ ಅದನ್ನು ತಿರಸ್ಕರಿಸಿದಷ್ಟೇ ಅಲ್ಲ, ಮೊದಲ ಅಣು ಬಾಂಬ್ ದುರಂತದ ಹನ್ನೊಂದೇ ತಿಂಗಳೊಳಗೆ ಅಂದರೆ ಜುಲೈ ೧, ೧೯೪೬ ರಂದು ಬಿಕಿನಿ ದ್ವೀಪದಲ್ಲಿ ಪರಮಾಣು ಪರೀಕ್ಷಣೆ ನಡೆಸಿತು. ಸೋವಿಯತ್ ಒಕ್ಕೂಟದ ನಗರಗಳು, ಕಾರ್ಖಾನೆಗಳನ್ನು ಗುರಿಮಾಡಿದ ಯೋಜನೆಗಳನ್ನು ತಯಾರಿಸಲಾಗಿದೆಯೆಂದು ಸುದ್ದಿ ಬಂತು. ಆಗಸ್ಟ್ ೨೯, ೧೯೪೯ ರಂದು ಸೋವಿಯತ್ ಒಕ್ಕೂಟವೂ ತನ್ನ ಮೊದಲ ಅಣುಪರೀಕ್ಷಣೆ ನಡೆಸಿತು.
- ಪರಮಾಣು ಶಕ್ತಿಗಳೆನಿಸುವ ಐದು ದೇಶಗಳಲ್ಲಿ ಮೂರು - ಅಂದರೆ ಅಮೆರಿಕಾ, ಬ್ರಿಟನ್ ಮತ್ತು ಫ್ರಾನ್ಸ್ ಇನ್ನೂ ಕೂಡಾ ಅಣ್ವಸ್ತ್ರಗಳಿಲ್ಲದ ದೇಶಗಳ ಮೇಲೆ ಅಣ್ವಸ್ತ್ರಗಳನ್ನು ಬಳಸುವುದಿಲ್ಲ ಎಂಬ ಮಾತುಕೊಡಲು ನಿರಾಕರಿಸುತ್ತಿವೆ. ಉಳಿದೆರಡು ಪರಮಾಣು ಶಕ್ತಿ ದೇಶಗಳಾದ ಸೋವಿಯತ್ ಒಕ್ಕೂಟ ಮತ್ತು ಸಮಾಜವಾದಿ ಚೀಣಾ ಮಾತ್ರ ತಾವೇ ಮೊದಲು ಅಣ್ವಸ್ತ್ರ ಬಳಸುವುದಿಲ್ಲ, ಅಣ್ವಸ್ತ್ರವಿಲ್ಲದ ದೇಶಗಳ ಮೇಲೆ ಅವನ್ನು ಬಳಸುವುದಿಲ್ಲ ಎಂದು ಮಾತುಕೊಟ್ಟಿವೆ.
- ಅಮೆರಿಕಾದ ಬಾಂಬುಗಳನ್ನು ತಯಾರಿಸಿದ ಮ್ಯಾನ್‌ಹಟನ್ ಯೋಜನೆ ಮಿಲಿಟರಿಯ ಉಸ್ತುವಾರಿಯಲ್ಲಿ ವಿಜ್ಞಾನಿಗಳು ಕೆಲಸ ಮಾಡಿದ ಒಂದು ದೊಡ್ಡ ಯೋಜನೆ. ಆದರೆ ಮೊದಲ ಅಣು ಬಾಂಬ್ ಸ್ಫೋಟದ ನಂತರ ಈ ಯೋಜನೆಯಲ್ಲಿ ಕೆಲಸ ಮಾಡಿದ ವಿಜ್ಞಾನಿಗಳೇ ಜಾಗತಿಕ ನಿಶ್ಯಸ್ತ್ರೀಕರಣ ಆಂದೋಲನದ ಹರಿಕಾರರಾದರು.
- ವಿಜ್ಞಾನದ ಹರಹನ್ನು ವಿಸ್ತರಿಸಲು ಬಾಹ್ಯಾಕಾಶವನ್ನು ಶೋಧಿಸಿದನೇ! ಅಥವಾ ವಿನಾಶದ ಅಸ್ತ್ರಗಳನ್ನು ಒದಗಿಸಿದನೇ? ಇದು ಭಾರತದ ಬಾಂಬಿನ ಪಿತೃ ಎನಿಸಿರುವ ಡಾ. ಎ.ಪಿ.ಜೆ.ಅಬ್ದುಲ್ ಕಲಾಮ್‌ರವರ ತಮಿಳು ಕವನದ ಸಾಲುಗಳು!

ಬಾಂಬಿನ ಇತಿಹಾಸ

ಈ ಶತಮಾನದ ಆರಂಭದಲ್ಲಿ ಅಣು, ಪರಮಾಣುಗಳು, ಅವುಗಳಲ್ಲಿ ಇರುವ ನ್ಯೂಟ್ರಾನ್, ಪ್ರೋಟಾನ್, ಇಲೆಕ್ಟ್ರಾನ್ ಇತ್ಯಾದಿಗಳ ಶೋಧದೊಂದಿಗೆ, ಇವುಗಳನ್ನು ಒಡೆಯುವಾಗ ಅಂದರೆ ವಿದಳನ (Fission)ದಲ್ಲಿ ದೊಡ್ಡ ಪ್ರಮಾಣದ ಶಕ್ತಿಯ ಬಿಡುಗಡೆಯಾಗುತ್ತದೆ ಎಂಬುದು ಹಲವು ವಿಜ್ಞಾನಿಗಳ ಗಮನಕ್ಕೆ ಬಂತು. ಅದೇ ರೀತಿ ಪರಮಾಣುಗಳನ್ನು ಪರಸ್ಪರ ಒಟ್ಟುಗೂಡಿಸು ವಾಗಲೂ (ಸಂಲಯನ - Fusion) ಅಪಾರ ಪ್ರಮಾಣದ ಶಕ್ತಿಯು ಬಿಡುಗಡೆಯಾಗುತ್ತದೆ. ಈ ವಿದಳನ ಅಥವಾ ಸಂಲಯನ ಕ್ರಿಯೆಯನ್ನು ಹತೋಟಿಯಲ್ಲಿಟ್ಟು ನಡೆಸಿದರೆ ಶಾಂತಿಯುತ ಬಳಕೆಗೆ ಪರಮಾಣು ಶಕ್ತಿ ದೊರೆಯುತ್ತದೆ. ಹತೋಟಿ ಮೀರಿದ ಪ್ರಕ್ರಿಯೆಗೆ ಅವಕಾಶ ಕೊಟ್ಟರೆ ಅದೇ ಬಾಂಬ್ ಆಗುತ್ತದೆ.

ಯುರೇನಿಯಮ್‌ನ ದೊಡ್ಡ ಪರಮಾಣುಗಳ ಮೇಲೆ ಹೊರಗಿನಿಂದ ನ್ಯೂಟ್ರಾನ್‌ಗಳನ್ನು ರಭಸದಿಂದ ಹೊಡೆಯುವಂತೆ ಮಾಡಿದಾಗ ಯುರೇನಿಯಂ ಪರಮಾಣು ಒಡೆದು ಎರಡು ನ್ಯೂಟ್ರಾನ್‌ಗಳು ಬೇರಾಗುತ್ತವೆ. ಇವು ಮತ್ತೆ ಒಡೆದು ನಾಲ್ಕಾಗುತ್ತವೆ, ನಾಲ್ಕು ಎಂಟಾಗುತ್ತವೆ. ಹೀಗೇ ರಭಸದ ಸರಣಿ ಕ್ರಿಯೆ ಯುರೇನಿಯಂ ಇಂಧನ ಖಾಲಿಯಾಗುವವರೆಗೆ ವೇಗವಾಗಿ ನಡೆಯುತ್ತದೆ. ಪ್ರತಿಯೊಂದು ವಿದಳನದಲ್ಲಿಯೂ ಅಪಾರ ಶಕ್ತಿ, ವಿನಾಶಕಾರೀ ವಿಕಿರಣ, ಉಷ್ಣ, ಬಿಡುಗಡೆ ಯಾಗುತ್ತದೆ - ಇದೇ ಪರಮಾಣು ಬಾಂಬು ಸ್ಫೋಟ.

ಈ ವಿದಳನದ ಪ್ರತಿಹಂತದಲ್ಲಿ ಎರಡಕ್ಕಿಂತ ಹೆಚ್ಚು ನ್ಯೂಟ್ರಾನುಗಳು ಉಂಟಾಗುತ್ತವೆ. ಆದರೆ ಸರಣಿ ಕ್ರಿಯೆ ನಡೆಯಬೇಕಾದರೆ ಒಂದು ಕನಿಷ್ಟ ಮಟ್ಟದ ಯುರೇನಿಯಂ ಇಂಧನ ಇರಬೇಕಾಗುತ್ತದೆ. ಬಾಂಬಿನಲ್ಲಿ ಇದಕ್ಕಿಂತ ಕಮ್ಮಿ ಮಟ್ಟದ ಇಂಧನಗಳ ಎರಡು ಪರಮಾಣುಗಳನ್ನು ಪ್ರತ್ಯೇಕವಾಗಿ ಇಡಲಾಗುತ್ತದೆ. ಇವನ್ನು ಜೋಡಿಸಿದಾಗ ಅವು ಈ ಕನಿಷ್ಟ ಮಟ್ಟವನ್ನು ತಲುಪುತ್ತವೆ - ಆಗ ನ್ಯೂಟ್ರಾನ್‌ಗಳನ್ನು ರಭಸದಿಂದ ಹೊಡೆದಾಗ ಸರಣಿಕ್ರಿಯೆ ಎಂದರೆ ಬಾಂಬ್ ಸ್ಫೋಟ ನಡೆಯುತ್ತದೆ.

ಸಂಲಯನ ಬಾಂಬು ಅಥವಾ ಹೈಡ್ರೋಜನ್ ಅಥವಾ ಜಲಜನಕ ಬಾಂಬಿನಲ್ಲಿನ ಪ್ರಕ್ರಿಯೆ ಇದಕ್ಕಿಂತ ಭಿನ್ನವಾದದ್ದು. ಜಲಜನಕದ ಕೆಲವು ಐಸೋಟೋಪುಗಳು (ಡ್ಯುಟೇರಿಯಂ, ಟ್ರೈಟನ್) ಯುರೇನಿಯಂಗೆ ಹೋಲಿಸಿದರೆ ಬಹಳ ಹಗುರವಾಗಿರುತ್ತವೆ. ಡ್ಯುಟೇರಿಯಂ ಹಾಗೂ ಟ್ರೈಟನ್‌ನ್ನು ಬೆಸೆದಾಗ ಅಪಾರ ಶಕ್ತಿ ಬಿಡುಗಡೆಯಾಗುತ್ತದೆ. ಇದೇ ಜಲಜನಕ ಬಾಂಬು. ಆದರೆ ಒಂದು ಸಮಸ್ಯೆಯೆಂದರೆ ಇವನ್ನು ಬೆಸೆಯಲು ಅಥವಾ ಸಂಲಯನಗೊಳಿಸಲು 1 ಕೋಟಿ ಡಿಗ್ರಿಯ ಉಷ್ಣತೆ ಬೇಕು. ಇದು ಭೂಮಿಯ ಮೇಲೆ ಸಾಧ್ಯವಿಲ್ಲ. ಇದಕ್ಕೆ ಒಂದು ವಿಧಾನವನ್ನು 1952ರಲ್ಲಿ ಕಂಡು ಹಿಡಿಯಲಾಯಿತು. ಯುರೇನಿಯಂನಿಂದ ಮಾಡಿದ ಒಂದು ಪಾತ್ರೆಯಲ್ಲಿ ಜಲಜನಕದ ಐಸೋಟೋಪು ಡ್ಯುಟೇರಿಯಂನಿಟ್ಟು ಈ ಮೇಲೆ ಹೇಳಿದಂತಹ ವಿದಳನ ಪ್ರಕ್ರಿಯೆ ಆರಂಭಿಸ ಲಾಯಿತು. ಈ ಪ್ರಕ್ರಿಯೆಯಲ್ಲಿ ಉಂಟಾದ ಅಪಾರ ಉಷ್ಣ ಡ್ಯುಟೇರಿಯಂನ ಸಂಲಯನ ಕ್ರಿಯೆ ಆರಂಭಿಸಿ ಸ್ಫೋಟ ನಡೆಯುವಂತೆ ಮಾಡಿತು. ಈ ರೀತಿಯ ಸಂಲಯನ ಕ್ರಿಯೆಯಲ್ಲಿ ಉಂಟಾದ ನ್ಯೂಟ್ರಾನುಗಳನ್ನು ಮತ್ತೆ ವಿದಳನ ಕ್ರಿಯೆಗೆ ಬಳಸಲಾಗುತ್ತದೆ. ಹೈಡ್ರೋಜನ್ ಬಾಂಬಿನಲ್ಲಿ ಬಿಡುಗಡೆಯಾಗುವ ಶಕ್ತಿ ಪರಮಾಣು ಬಾಂಬಿಗಿಂತ ಕನಿಷ್ಟ 10 ಪಟ್ಟು ಹೆಚ್ಚಿರುತ್ತದೆ.

ಈ ಬಾಂಬುಗಳ ವಿನಾಶ ಸಾಮರ್ಥ್ಯವನ್ನು ಕಿಲೋಟನ್, ಮೆಗಾಟನ್‌ಗಳಲ್ಲಿ ಅಳೆಯಲಾಗು ತ್ತದೆ. 1000 ಟನ್ ಟಿ.ಎನ್.ಟಿ. ಅಥವಾ ಡೈನಾಮೆಟನ್ನು ಸ್ಫೋಟಿಸಿದಾಗ ಬಿಡುಗಡೆ ಯಾಗುವ ಶಕ್ತಿಗೆ ಒಂದು ಕಿಲೋಟನ್ ಎನ್ನುತ್ತಾರೆ. 1000 ಕಿಲೋಟನ್ ಎಂದರೆ ಒಂದು ಮೆಗಾಟನ್. ಪರಮಾಣು ಬಾಂಬುಗಳು 20-100 ಕಿಲೋಟನ್ ಸಾಮರ್ಥ್ಯ ಹೊಂದಿ ರುತ್ತವೆ. 1952ರಲ್ಲಿ ಅಮೇರಿಕಾ ಪರೀಕ್ಷಾ ಸ್ಫೋಟ ನಡೆಸಿದ ಜಲಜನಕ ಬಾಂಬ್‌ನ ಸಾಮರ್ಥ್ಯ

ಅಣುಶಕ್ತಿ ಪರೀಕ್ಷೆ ಹಿನ್ನೆಲೆಯಲ್ಲಿ ಜಸ್ವಂತ್ ಸಿಂಗ್ - ಟಾಲ್‌ಬಾಟ್ ಮಾತುಕತೆ

ಶರಣಾಗತಿಯ ರಂಗಸಜ್ಜಿಕೆ



ಯಾವುದೇ ದಬಾವಣೆಗೆ ತಲೆಬಾಗಿ ಸಿಟಿಬಿಟಿಗೆ ಸಹಿ ಹಾಕುವುದಿಲ್ಲ ಎಂದು ಪ್ರಧಾನಮಂತ್ರಿಗಳು ಮತ್ತೆ ಮತ್ತೆ ಹೇಳುತ್ತಿದ್ದರೂ ಅಮೇರಿಕನ್ ಉಪ ಕಾರ್ಯದರ್ಶಿಯೊಡನೆ ರಹಸ್ಯ ಮಾತುಕತೆಯೇಕೆ? ಶರತ್ತಿನ ಮೇಲೆ ಸಹಿ ಹಾಕಬಹುದೆನ್ನುವ ಸುದ್ದಿಗಳೇಕೆ! ಭಾರತವನ್ನು ಹಂತ ಹಂತವಾಗಿ ಅಮೆರಿಕಾದ ಕೃಪಾಕಟಾಕ್ಷಕ್ಕೆ ತಳ್ಳಿದ ಬಿಜೆಪಿ ಸರಕಾರ ಇಲ್ಲೂ ಶರಣಾಗತಿಗೆ ಸಿದ್ಧವಾಗುತ್ತಿದೆ ಎಂದು ಎಚ್ಚರಿಸಿದ್ದಾರೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ...... ಪ್ರಕಾಶ್‌ಕಾರಟ್‌ರವರು.

ಪೊಖರಾನಿನಲ್ಲಿ ಅಣುಶಕ್ತಿ ಪರೀಕ್ಷೆ ನಡೆಸಿದ ಸಂದರ್ಭದಲ್ಲಿ ಭಾರೀ ಆಕ್ರಮಣಕಾರಿ ನಿಲುವು ತಾಳಿದ್ದ ವಾಜಪೇಯಿ ಸರಕಾರ ಇದೀಗ ಅಮೇರಿಕದ ಬೇಡಿಕೆಗಳಿಗೆ ಮಣಿದು ಅದರೊಂದಿಗೆ ತತ್ವರಹಿತ ರಾಜಿಯತ್ತ ಸಾಗುತ್ತಿದೆ. ಜಸ್ವಂತ್ ಸಿಂಗ್-ಸ್ಟ್ರೋಬ್ ಟಾಲ್‌ಬಾಟ್ ನಡುವೆ ನಡೆಯುತ್ತಿರುವ ಮಾತುಕತೆಗಳಲ್ಲಿ ಹಸ್ಯ ರೀತಿಯಲ್ಲಿ ಈ 'ಪರಮಾಣು ವ್ಯವಹಾರ' ರೂಪುಗೊಳ್ಳುತ್ತಿದೆ.

ಜೂನಿನಲ್ಲಿ ವಾಷಿಂಗ್‌ಟನ್ನಲ್ಲಿ ಇಬ್ಬರ ನಡುವೆ ಮಾತುಕತೆ ನಡೆದಿತ್ತು. ಜುಲೈ 9 ರಂದು ಫ್ರಾಂಕ್‌ಫರ್ಟ್ ನಲ್ಲಿ ಅವರಿಬ್ಬರು ರಹಸ್ಯರೀತಿಯಲ್ಲಿ ಮಾತುಕತೆ ನಡೆಸಿದರು. ಮೂರನೇ ಸುತ್ತಿನ ಮಾತುಕತೆ ಇದೀಗ ಭಾರತದಲ್ಲಿ.

ಈ ಮಾತುಕತೆಗಳ ಸ್ವರೂಪದ ಬಗ್ಗೆ ಬಿಜೆಪಿ ನೇತೃತ್ವದ ಸರಕಾರ ಮತ್ತು ಅದರ ಅಧಿಕೃತ ವಕ್ತಾರರು ಬಾಯಿಬಿಡುತ್ತಿಲ್ಲ. ಭಾರತ ಯಾವುದೇ ಒತ್ತಡಕ್ಕೆ ಮಣಿಯುವುದಿಲ್ಲ ಹಾಗೂ ಸಿ.ಟಿ.ಬಿ.ಟಿ. (ಸಮಗ್ರ ಅಣ್ವಸ್ತ್ರ ಪರೀಕ್ಷೆ ನಿಷೇಧ ಒಪ್ಪಂದ)ಗೆ ಸಹಿ ಹಾಕುವುದಿಲ್ಲ ಎಂದು ಪ್ರಧಾನಿ ಮತ್ತು ಇತರ ಅಧಿಕೃತ ವಕ್ತಾರರು ಸಾರ್ವಜನಿಕವಾಗಿ ಪದೇ ಪದೇ ಘಂಟಾಘೋಷವಾಗಿ ಹೇಳಿರುವುದಕ್ಕೆ ಈ ರಹಸ್ಯ ನಿಲುವು ತೀರಾ ವ್ಯತಿರಿಕ್ತವಾದುದಾಗಿದೆ.

ಸಿ.ಟಿ.ಬಿ.ಟಿ.ಗೆ ಸಹಿ ಹಾಕಲು ವಾಜಪೇಯಿ ಸರಕಾರ ಸಿದ್ಧವಿದೆ ಎನ್ನುವುದಕ್ಕೆ ಈಗ ಸಾಕಷ್ಟು ಸಾಕ್ಷ್ಯಾಧಾರಗಳು ಇವೆ. ಬಿ.ಜೆ.ಪಿಯದೇ ಆದ ವಿಭಿನ್ನ ರೀತಿಯಲ್ಲಿ ಈ ಮಾರ್ಗದತ್ತ ಸರಕಾರ ಸಾಗುತ್ತಿದೆ. ಸಿ.ಟಿ.ಬಿ.ಟಿ.ಗೆ ಈಗಿನ ಸ್ವರೂಪದಲ್ಲೇ ಸಹಿಹಾಕುವುದಿಲ್ಲ ಎಂದು ಸರಕಾರ ಹೇಳುತ್ತಿದೆ. ಕೇವಲ ದಾಖಲೆಗಾಗಿ ಈ ಹೇಳಿಕೆ. ಆದರೆ ಭಾರತಕ್ಕೆ ಪ್ರಯೋಜನವಾಗುವುದಾದರೆ ಸಹಿ ಹಾಕಲಾಗುವುದು ಎಂಬ ಸಂಕೇತಗಳನ್ನು ಅದು ಹೊರ ಜಗತ್ತಿಗೆ ನೀಡುತ್ತಿದೆ. ಇದಕ್ಕಾಗಿ ವ್ಯವಹಾರವನ್ನು ಕುದುರಿಸಬಹುದು ಎಂದು ಆಂತಕವಾಗಿ ಹೇಳುತ್ತಿದೆ.

ಇಡೀ ದೇಶದ ರಾಜಕೀಯ ರಂಗದ ಬೆಂಬಲ ಪಡೆದುಕೊಂಡ ಸಂಯುಕ್ತ ರಂಗ ಸರಕಾರ ಸಿಟಿಬಿಟಿಗೆ ಸಹಿ ಹಾಕುವುದಿಲ್ಲ ಎಂಬ ದೃಢ ನಿಲುವನ್ನು 1996 ರಲ್ಲಿ ತಳೆದಿದ್ದನ್ನು ಇಲ್ಲಿ ಸ್ಮರಿಸಬಹುದು. 1970ರಲ್ಲಿ ಅಸ್ತಿತ್ವಕ್ಕೆ ಬಂದ, ತಾರತಮ್ಯದಿಂದ ಕೂಡಿದ ಅಣ್ವಸ್ತ್ರ ಪ್ರಸರಣ ತಡೆ ಒಪ್ಪಂದದ (ಎನ್.ಪಿ.ಟಿ) ವಿಸ್ತೃತ ರೂಪವೇ ಸಿ.ಟಿ.ಬಿ.ಟಿ.ಎಂದು ಭಾರತ ವಾದಿಸಿತ್ತು. ಅಣ್ವಸ್ತ್ರ ಹೊಂದಿದ ದೇಶಗಳು ಅವುಗಳನ್ನು ನಾಶ ಪಡಿಸಲು ಕಾಲಮಿತಿಯನ್ನು ನಿಗದಿಪಡಿಸಲಾಗಿಲ್ಲ. ಎಂಬುದೂ ಸಿಟಿಬಿಟಿ ವಿರುದ್ಧದ ಎರಡನೇ ಪ್ರಮುಖ ವಾದವಾಗಿದೆ.

ಅಣ್ವಸ್ತ್ರ ನಿರ್ಮೂಲನೆ ಕಾಲಮಿತಿ ನಿಗದಿಪಡಿಸುವುದಿಲ್ಲವೆಂದ್ದರೆ ಕೆಲವು ರಾಷ್ಟ್ರಗಳು ಅಣ್ವಸ್ತ್ರಗಳನ್ನು ಇಟ್ಟುಕೊಳ್ಳಲು ಅವಕಾಶ ನೀಡಿ ಇತರರಿಗೆ ಆ ಹಕ್ಕನ್ನು ನಿರಾಕರಿಸಿ ಅವುಗಳು ಅಣ್ವಸ್ತ್ರಗಳುಳ್ಳ ಜಗತ್ತಿನಲ್ಲಿ ವಾಸಿಸುವಂತೆ ಮಾಡುವ ಅಸಮಾನ ಅಣ್ವಸ್ತ್ರ ವ್ಯವಸ್ಥೆ ಎಂದೇ ಅರ್ಥ.

ಇನ್ನು ಅಂತಿಮವಾಗಿ ಅಣ್ವಸ್ತ್ರ ಹೊಂದಿರುವ ದೇಶಗಳು ಇನ್ನಷ್ಟು ಪರಮಾಣು ಅಣ್ವಸ್ತ್ರಗಳನ್ನು ಕೂಡಿ ಹಾಕಲು ಹಾಗೂ ಅವುಗಳನ್ನು ಅತ್ಯಾಧುನಿಕಗೊಳಿಸಲು ಸಿ.ಟಿ.ಬಿ.ಟಿ ನಿಯಮಗಳು ಅವಕಾರ ಕಲ್ಪಿಸುತ್ತವೆ.

ಎನ್.ಪಿ.ಟಿ. ಮತ್ತು ಸಿ.ಟಿ.ಬಿ.ಟಿ.ಗೆ ಸಹಿ ಹಾಕಲು ನಿರಾಕರಿಸಿರುವುದು ಭಾರತದ ರಾಷ್ಟ್ರೀಯ ಹಾಗೂ ಭದ್ರತಾ ಹಿತಾಸಕ್ತಿಗಳಿಗೆ ಅನುಗುಣವಾಗಿಯೇ ಇದೆ. ನಾವು ನಮ್ಮ ಸ್ವತಂತ್ರ ಪರಮಾಣು ಸಾಮರ್ಥ್ಯವನ್ನು ಉಳಿಸಿಕೊಂಡಿದ್ದೇವೆ. ಹಾಗೂ ನಮ್ಮ ಸಾರ್ವಭೌಮ ಸ್ಥಾನಮಾನಕ್ಕನುಸಾರವಾಗಿ ಪರಮಾಣುಶಕ್ತಿ ಬಳಕೆಯ ಅವಕಾಶವನ್ನು ಮುಕ್ತವಾಗಿರಿಸಿಕೊಂಡಿದ್ದೇವೆ.

ಸೇನೆಗೆ ಅಣ್ವಸ್ತ್ರಗಳನ್ನು (ಅಣ್ವಸ್ತ್ರೀಕರಣ) ಸೇರ್ಪಡೆ ಮಾಡದಿರುವ ನಿರ್ಧಾರ ಹಾಗೂ ತಾಳ್ಮೆಯನ್ನು ವಹಿಸುವ ನಿಲುಮೆಯಿಂದಾಗಿ ಭಾರತಕ್ಕೆ ಅಸಮಾನ ಹಾಗೂ ತಾರತಮ್ಯದಿಂದ ಕೂಡಿದ ಅಣ್ವಸ್ತ್ರ ವ್ಯವಸ್ಥೆಯನ್ನು ಎದುರಿಸಲು ಮತ್ತು ಜಾಗತಿಕ ಅಣ್ವಸ್ತ್ರ ನಿಶ್ಶಸ್ತ್ರೀಕರಣದ ಮಹತ್ವದ ಹೋರಾಟವನ್ನು ಮುಂದುವರಿಸಲು ಸಾಧ್ಯವಾಗಿದೆ.

ಅಮೇರಿಕದ ಪದತಲಕ್ಕೆ ಭಾರತವನ್ನು ಶರಣು ತರಲು ಬಿಜೆಪಿ ಸರಕಾರ ರಂಗವನ್ನು ಸಜ್ಜುಗೊಳಿಸುತ್ತಿದೆ. ಪ್ರಧಾನಿಯವರ ಪ್ರಮುಖ ಕಾರ್ಯದರ್ಶಿ ಬ್ರಜೇಶ್ ಮಿಶ್ರಾರೇ ಸ್ವತಃ ಸುದ್ದಿಗೋಷ್ಠಿಯೊಂದರಲ್ಲಿ ಮಾಡಿರುವ ಟಿಪ್ಪಣಿ ಶರಣಾಗತಿಯ ಪ್ರಮಾಣದ ಸೂಚಕವಾಗಿದೆ.

ಚೌಕಾಸಿಯ ಒಂದು ಷರತ್ತಾಗಿ ದೇಶದ ವಿಮೆ ವಲಯವನ್ನು ವಿದೇಶಿ ಬಂಡವಾಳಕ್ಕೆ ಮುಕ್ತಗೊಳಿಸಲು ಸರಕಾರ ಸಿದ್ಧವಿದೆ ಎಂದು ಮಿಶ್ರಾ ಹೇಳಿದ್ದರು! ವಿಮಾ ಕ್ಷೇತ್ರಕ್ಕೆ ವಿದೇಶಿ ಕಂಪನಿಗಳ ಪ್ರವೇಶಕ್ಕೆ ಅವಕಾಶ ಕೊಡಬಾರದು ಎಂದು ಬಿಜೆಪಿ ಇದುವರೆಗೆ ತಳೆದ ನಿಲುವಿಗೆ ಇದು ಪೂರ್ಣ ವಿರುದ್ಧವಾಗಿದೆ.

ಸಿಟಿಬಿಟಿಗೆ ಸಹಿ ಹಾಕುವುದಿಲ್ಲ ಎಂಬ ವಾಜಪೇಯಿ ಸರಕಾರದ ದಾಖಲೆಗಾಗಿನ ಹೇಳಿಕೆ ಕೂಡ ಶಂಕಾಸ್ಪದ ವಾಗಿದೆ. ಅದಕ್ಕೆ ಕಾರಣಗಳಿವೆ.

ಉದಾಹರಣೆಗೆ, ಜೂಲೈ 10 ರಂದು ರಾಜ್ಯಸಭೆಯಲ್ಲಿ ಮಾತನಾಡಿದ ಪ್ರಧಾನಿ ಎಬಿ ವಾಜಪೇಯಿ ಭಾರತ ಸಿ.ಟಿ.ಬಿ.ಟಿ.ಗೆ ನಿಶ್ಶರ್ತವಾಗಿ ಸಹಿ ಹಾಕುವುದಿಲ್ಲ ಎಂದು ಹೇಳಿದರು.

ಜಿನೇವಾದಲ್ಲಿನ ಪಿ5 ಸಭೆ, ಲಂಡನ್‌ನಲ್ಲಿನ ಜಿ.8 ಸಭೆ ಮತ್ತು ವಿಶ್ವಸಂಸ್ಥೆ ಭದ್ರತಾ ಮಂಡಳಿಯ 1172 ನೇ ಗೊತ್ತುವಳಿ ಇವೆಲ್ಲವೂ ಭಾರತ ಮತ್ತು ಪಾಕಿಸ್ತಾನ ತಕ್ಷಣವೇ ಹಾಗೂ ನಿಶ್ಶರ್ತವಾಗಿ ಸಿ.ಟಿ.ಬಿ.ಟಿಗೆ ಸಹಿ ಹಾಕಬೇಕು ಎಂದು ಒತ್ತಾಯಿಸುತ್ತವೆ. ಪೊಖರಾನ್ ಪರೀಕ್ಷೆಯ ಬೆನ್ನಲ್ಲೇ ಅಮೆರಿಕ ಅಧ್ಯಕ್ಷ ಬಿಲ್ ಕ್ಲಿಂಟನ್ ಕೂಡ ಮಂಡಿಸಿದ್ದು ಇದೇ 'ಬೇಡಿಕೆ'ಯನ್ನು

ಹಾದಿತಪ್ಪಿಸುವ ಕ್ರಮ:

ಸಿಟಿಬಿಟಿಯ ಕೆಲವು ನಿಯಮಗಳನ್ನು ಒಪ್ಪಬಹುದು ಹಾಗೂ ಒಪ್ಪಂದಕ್ಕೆ ಕೆಲವು ಷರತ್ತುಗಳೊಂದಿಗೆ ಸಹಿ ಹಾಕಬಹುದು ಎಂಬ ಅಭಿಪ್ರಾಯವನ್ನು ಮೂಡಿಸಲು ವಾಜಪೇಯಿ ಮತ್ತು ಬ್ರಜೇಶ್ ಮಿಶ್ರಾ ಯತ್ನಿಸಿರುವುದು ಪೂರ್ಣವಾಗಿ ಆಧಾರರಹಿತ ಹಾಗೂ ಹಾದಿತಪ್ಪಿಸುವಂಥದ್ದಾಗಿದೆ.

ಸಿ.ಟಿ.ಬಿ.ಟಿ ಯಾವುದೇ ತಿದ್ದುಪಡಿಗೆ ಮುಕ್ತವಲ್ಲ. ಹಾಗೂ ಒಡಂಬಡಿಕೆಯನ್ನು ಭಾರತ ಅದು ಇದ್ದ ಸ್ಥಿತಿಯಲ್ಲೇ ಒಪ್ಪಬೇಕಾಗುತ್ತದೆ. ತನಗೆ ಅಣ್ವಸ್ತ್ರ ಹೊಂದಿದ ರಾಷ್ಟ್ರದ ಸ್ಥಾನಮಾನ ನೀಡಬೇಕೆಂಬ ಭಾರತದ ಕೋರಿಕೆಯನ್ನು (ಪಾಕಿಸ್ತಾನದ ನಿಲುವು ಕೂಡ) ಅಮೇರಿಕ ಮತ್ತದರ ಮಿತ್ರದೇಶಗಳು ಸಾರಾಸಗಟಾಗಿ ತಳ್ಳಿ ಹಾಕಿರುವುದರಿಂದ ಸಿಟಿಬಿಟಿಗೆ ಸಹಿ ಹಾಕುವುದು ಅಮೇರಿಕಕ್ಕೆ ಶರಣಾದಂತೆ ಹಾಗೂ ಈಗಿರುವ ತಾರತಮ್ಯದ ಅಣ್ವಸ್ತ್ರ ವ್ಯವಸ್ಥೆಯನ್ನು ಒಪ್ಪಿಕೊಂಡಂತೆಯೇ ಸರಿ.

ಸಿಟಿಬಿಟಿಗೆ ಸಹಿ ಹಾಕುವುದರಲ್ಲಿ ಇನ್ನೊಂದು ಅಂಶವೂ ಅಡಕವಾಗಿದೆ. ಸಹಿ ಹಾಕಿದ್ದೇ ಆದಲ್ಲಿ ಭಾರತ ಇನ್ನೂ ಮುಂದೆ ಹೋಗಿ ಪ್ರಸ್ತಾವಿತ ವಿದಳನ ಸಾಮಗ್ರಿ ಕಡಿತ ಒಡಂಬಡಿಕೆಗೆ (FMCT) ಸಹಿ ಹಾಕಬೇಕಾಗುತ್ತದೆ. ಮುಂಬರುವ ವರ್ಷಗಳಲ್ಲಿ ಈ ಒಡಂಬಡಿಕೆ ಪ್ರಕ್ರಿಯೆ ಆರಂಭವಾಗಲಿದೆ. ಈ ಪ್ರಸ್ತಾವಿತ ಒಪ್ಪಂದ ಪ್ರತಿ ದೇಶ ಅಣುವಿದಳನ ಸಾಮಗ್ರಿಗಳ ಉತ್ಪಾದನೆಯನ್ನು ನಿಲ್ಲಿಸುವಂತೆ ಹಾಗೂ ತಮ್ಮ ಅಣುಸ್ಥಾವರಗಳನ್ನು ಪೂರ್ಣ ಪ್ರಮಾಣದ ಸುರಕ್ಷಿತ ಕ್ರಮಗಳಿಗೆ ಮುಕ್ತವಾಗಿರಿಸುವಂತೆ ಒತ್ತಾಯಿಸುತ್ತದೆ. ಎನ್.ಪಿ.ಟಿ.ಯಲ್ಲಿ ಕೂಡ ಇದೇ ರೀತಿಯ ಸುರಕ್ಷಿತ ಕ್ರಮಗಳನ್ನು ವಿಧಿಸಲಾಗಿದೆ. ಈ ಕ್ರಮದಿಂದ ಭಾರತದ ಸಾರ್ವಭೌಮ ನಿರ್ಧಾರ ಕೈಗೊಳ್ಳುವ ಹಕ್ಕುಗಳೊಂದಿಗೆ ರಾಜಿ ಮಾಡಿಕೊಂಡಂತಾಗುತ್ತದೆ. ಹಾಗೂ ಸ್ವತಂತ್ರ ಅಣು ಸಾಮರ್ಥ್ಯವನ್ನು ಕಾಯ್ದುಕೊಳ್ಳುವ ಅವಕಾಶದೊಂದಿಗೂ ರಾಜಿ ಮಾಡಿ ಕೊಂಡಂತಾಗುತ್ತದೆ.

ಬಿಜೆಪಿ ಯೋಜನೆಗೆ ಕನ್ನಡಿ:

ಪರಮಾಣು ನೀತಿಯಂಥ ಇಂಥ ಒಂದು ಪ್ರಮುಖ ವಿಷಯವನ್ನು ನಿರ್ವಹಿಸಲು ವಾಜಪೇಯಿ ಸರಕಾರ ಅನುಸರಿಸಿದ ಕ್ರಮವೇ ಬಿಜೆಪಿಯ ಯೋಜನಾ ಲಹರಿಗೆ ಹಿಡಿದ ಕನ್ನಡಿಯಾಗಿದೆ. ಇದೇ ಮೊದಲ ಬಾರಿಗೆ ಪ್ರಮುಖ ನೀತಿ ವಿಷಯಗಳ ಬಗ್ಗೆ ಹೇಳಿಕೆಗಳು ಮತ್ತು ಉಪಕ್ರಮಗಳು ಹೊರ ಬಂದಿದ್ದು ಪ್ರಧಾನಿ ಕಾರ್ಯಾಲಯದ ಪ್ರಮುಖ ಕಾರ್ಯದರ್ಶಿಯವರಿಂದ. ವಿದೇಶಿ ವ್ಯವಹಾರಗಳ ಸಚಿವಾಲಯವನ್ನೇ ಬದಿಗೊತ್ತಿ ಅವರು ವಿದೇಶಿ ನೀತಿಯ ವಿಷಯಗಳನ್ನು ನೇರವಾಗಿ ನಿರ್ವಹಿಸುತ್ತಿದ್ದಾರೆ.

ಸರಕಾರದ ಪರವಾಗಿ ಮೊದಲು ಹೇಳಿಕೆ ನೀಡಿದ್ದೇ ಬ್ರಜೇಶ್ ಮಿಶ್ರಾ. ಆನಂತರ ಸರಕಾರದ ನಿಲುವನ್ನು ವಿವರಿಸಲು ಅವರನ್ನು ಪ್ಯಾರಿಸ್ ಮತ್ತು ಲಂಡನ್‌ಗೆ ಕಳಿಸಲಾಯಿತು. ಇದೀಗ ಅಲಿಪ್ತ ಶೃಂಗಸಭೆಗೆ ಪೂರ್ವಭಾವಿಯಾಗಿ ಅಲ್ಲಿನ ಸರಕಾರದೊಂದಿಗೆ ಮಾತುಕತೆ ನಡೆಸಲು ಮಿಶ್ರಾರನ್ನು ದಕ್ಷಿಣ ಆಫ್ರೀಕಾಕ್ಕೆ ಕಳಿಸಲಾಗಿದೆ. ಉನ್ನತ ಮಟ್ಟದ ಈ ಕ್ರಮಗಳಲ್ಲಿ ಒಳಗೊಂಡಿರುವ ಇನ್ನೊಬ್ಬ ವ್ಯಕ್ತಿ ಯೋಜನಾ ಆಯೋಗದ ಉಪಾಧ್ಯಕ್ಷ ಜಸ್ವಂತ್ ಸಿಂಗ್. ವಿದೇಶಾಂಗ ವ್ಯವಹಾರಗಳಾಗಲೀ ಭದ್ರತಾ ವ್ಯವಹಾರಗಳಲ್ಲಾಗಲೀ ಅಧಿಕೃತವಾಗಿ ಇವರಿಗೆ ಯಾವುದೇ ಪಾತ್ರವಿಲ್ಲ ಎನ್ನುವುದನ್ನು ಗಮನಿಸಬೇಕು.

ದುಸ್ಸಾಹಸವಾದದಿಂದ ಸಂತುಷ್ಟೀಕರಣದತ್ತ....:

ಬಿಜೆಪಿ ನೇತೃತ್ವದ ಸರಕಾರ ಭಾರತವನ್ನು ಹಂತ ಹಂತವಾಗಿ ಅಮೇರಿಕದ ಕೃಪಾಕಟಾಕ್ಷಕ್ಕೆ ತಳ್ಳಿದೆ. ಅಮೇರಿಕವನ್ನು ತೃಪ್ತಿ ಪಡಿಸುವ ಉದ್ದೇಶದಿಂದ ಚೀನಾದ ವೈರತ್ವವನ್ನು ಕಟ್ಟಿಕೊಳ್ಳುವ ಮೂಲಕ ಭಾರತ ಈ ಪ್ರದೇಶದಲ್ಲಿಯೂ ಅಂತರ್‌ರಾಷ್ಟ್ರೀಯವಾಗಿಯೂ ಪ್ರತಿಕೂಲ ಸ್ಥಿತಿಗೆ ಸಿಲುಕುವಂತೆ ಸರಕಾರ ಮಾಡಿತು. ಪರಮಾಣು ಪರೀಕ್ಷೆ ನಡೆಸುವ ಮೂಲಕ ಪಾಕಿಸ್ತಾನದ ಜತೆಯೇ ಭಾರತವನ್ನು ಗುರುತಿಸುವಂತೆ ಮಾಡುವಲ್ಲಿ ಅದು ಯಶಸ್ವಿಯಾಯಿತು. ಕಾಶ್ಮೀರ ವಿಷಯಕ್ಕೂ ಅಣ್ವಸ್ತ್ರ ಹೊಂದಿದ ರಾಷ್ಟ್ರದ ಸ್ಥಾನ ಮಾನಕ್ಕೂ ತಳಕು ಹಾಕುವ ಹೇಳಿಕೆ ಕೊಡುವ ಮೂಲಕ ಕಾಶ್ಮೀರ ವಿಷಯವನ್ನು ಅಂತರ್‌ರಾಷ್ಟ್ರೀಯಗೊಳಿಸಲು ಅದು ಹಾದಿ ಮಾಡಿಕೊಟ್ಟಿತು.

ಸಿಟಿಬಿಟಿಗೆ ಅಂಕಿತ ಹಾಕಲು ಸಿದ್ಧತೆಯ ಸೂಚನೆ ನೀಡುವ ಮೂಲಕ ಅದು ಭಾರತದ ಸಾರ್ವಭೌಮ ಹಕ್ಕುಗಳನ್ನು ಆತಂಕದ ಮಡುವಿಗೆ ತಳ್ಳಿತು. ಇದು ಅಂತಿಮವಾಗಿ ಅಮೇರಿಕವನ್ನು ಸಂತೃಪ್ತಿ ಪಡಿಸುವ ಉದ್ದೇಶದಿಂದ ಆರ್ಥಿಕ ರಂಗದಲ್ಲಿ ಇನ್ನಿಲ್ಲದ ರಿಯಾಯಿತಿಗಳನ್ನು ನೀಡುವ ಹಂತಕ್ಕೆ ಅವಕಾಶ ಮಾಡಿಕೊಡಲಿದೆ.

ಅಣುಶಕ್ತಿ ಪರೀಕ್ಷೆ ಹಾಗೂ ಸೇನೆಯ ಅಣ್ವಸ್ತ್ರೀಕರಣದ ನೀತಿಯನ್ನು ಪ್ರಕಟಿಸುವ ಮೂಲಕ ವಾಜಪೇಯಿ ಸರಕಾರ ಭಾರತದ ಮುಖ್ಯ ಹಿತಕ್ಕೆ ಆಘಾತವುಂಟು ಮಾಡಿದೆ.

ಭಾರತ ಮತ್ತು ಪಾಕಿಸ್ತಾನದ ಅಣುಶಕ್ತಿ ಪರೀಕ್ಷೆಯಿಂದ ಮತ್ತು ಅಣ್ವಸ್ತ್ರೀಕರಣದ ಪೈಪೋಟಿಯ ಹೇಳಿಕೆಗಳಿಂದ ಅಂತರರಾಷ್ಟ್ರೀಯ ರಂಗದಲ್ಲಿ ತನ್ನ ಸ್ವತಂತ್ರ ಸ್ಥಾನಮಾನವನ್ನು ಬಲಪಡಿಸಿಕೊಳ್ಳುವ ಬದಲು ಭಾರತವು ಅಮೇರಿಕ ಮತ್ತು ಅಂತರರಾಷ್ಟ್ರೀಯ ಒತ್ತಡಕ್ಕೆ ಬಲಿಯಾಗುವ ಸಂಭವ ಹೆಚ್ಚಾಗಿದೆ. 'ಬಿಜೆಪಿ ನೇತೃತ್ವದ ಸರಕಾರದ ಪರಮಾಣು ನೀತಿಯು ದುಸ್ಸಾಹಸವಾದದಿಂದ ರಾಜಿ ಮತ್ತು ಸಂತುಷ್ಟೀಕರಣ ದತ್ತ ಸಾಗುತ್ತದೆ' ಎಂದು ಪತ್ರಕರ್ತ ಎನ್.ರಾಮ್ ನೀಡಿದ್ದ ಎಚ್ಚರಿಕೆ ನಿಜವಾಗಿದೆ.

ಹರ್ಯಾಣ ದಾದಿಯರ ದಿಟ್ಟ ಹೋರಾಟ

ಸಂಸತ್ ಭವನದ ಮುಂದೆ ಜುಲೈ 9 ರಂದು ಧರಣಿ ನಡೆಸಿದ ದೆಹಲಿ ಮತ್ತು ಹರ್ಯಾಣದ ನೂರಾರು ಮಹಿಳೆಯರನ್ನು ಪೊಲೀಸರು ಬಂಧಿಸಿದರು. ಜನವಾದಿ ಮಹಿಳಾ ಸಂಘಟನೆಯ (AIDWA) ಬಾವುಟದಡಿಯಲ್ಲಿ ಮಹಿಳೆಯರು ಪೊಲೀಸರ ಚಕ್ರವ್ಯೂಹವನ್ನು ಭೇದಿಸಿ ಸಂಸತ್ ಭವನವನ್ನು ಸಮೀಪಿಸಿದಾಗ ಪೊಲೀಸರು ಆಶ್ಚರ್ಯಚಕಿತರಾದರು; ಕಕ್ಕಾಬಿಕ್ಕಿಯಾದರು.

ಹರ್ಯಾಣದ ಮುಷ್ಕರ ನಿರತ ನರ್ಸ್‌ಗಳ ಜತೆ ತಕ್ಷಣವೇ ಮಾತುಕತೆಯನ್ನು ಆರಂಭಿಸಬೇಕು ಹಾಗೂ ಎಸ್ಮಾವನ್ನು (ಅಗತ್ಯ ಸೇವಾ ನಿರ್ವಹಣೆ ಕಾನೂನು) ಈ ಕೂಡಲೇ ವಾಪಸು ಪಡೆಯಬೇಕು ಎಂಬುದು ಧರಣಿ ನಿರತರ ಮೊದಲ ಪ್ರಮುಖ ಬೇಡಿಕೆಯಾಗಿತ್ತು. ಮಹಿಳೆಯರಿಗೆ ಶಾಸಕಾಂಗಗಳಲ್ಲಿ ಶೇ 33 ಮಿಸಲಾತಿ ಕಲ್ಪಿಸುವ ಕಾನೂನನ್ನು ರೂಪಿಸಲು ಅಗತ್ಯ ಕ್ರಮಗಳನ್ನು ತಕ್ಷಣ ಕೈಗೊಳ್ಳ ಬೇಕೆಂಬುದು ಇನ್ನೊಂದು ಬೇಡಿಕೆ

AIDWA ನಿಯೋಗವೊಂದು ಹರ್ಯಾಣ ಮುಖ್ಯಮಂತ್ರಿ ಬನ್ಸಿಲಾಲರನ್ನು ಭೇಟಿ ಮಾಡಿದಾಗ ದಾದಿಯರು (ನರ್ಸ್) ಪ್ರಯೋಜನವಿಲ್ಲದ ಮಹಿಳೆಯರು ಎಂದು ಹೇಳಿದ್ದರು. ಅದೇ ಸರಕಾರದ ಮಹಿಳಾ ಮಂತ್ರಿ ಕಮಲಾವರ್ಮಾ ಕೂಡ ದಾದಿಯರ ಚಾರಿತ್ರ್ಯವನ್ನು ಸಂಶಯಿಸುವ ರೀತಿಯಲ್ಲಿ ಮಾತನಾಡಿದ್ದರು. ಈ ಧೋರಣೆಯನ್ನು ಕಟುವಾಗಿ ಖಂಡಿಸಿದ ಚಳುವಳಿನಿರತ ದಾದಿಯರು ಕೇಂದ್ರ ಗೃಹಮಂತ್ರಿ ಎಲ್.ಕೆ. ಅಡ್ವಾಣಿ ಮತ್ತು ಪ್ರಸಾರ ಸಚಿವೆ ಸುಷ್ಮಾ ಸ್ವರಾಜ್‌ರನ್ನು ಭೇಟಿ ಮಾಡಿದ್ದರು. ದಾದಿಯರ ಪರವಾಗಿ ತಾವು ಮಧ್ಯೆ ಪ್ರವೇಶಿಸುವುದಾಗಿ ಆಗ ಅವರಿಬ್ಬರೂ ಆಶ್ವಾಸನೆಯನ್ನು ಕೊಟ್ಟಿದ್ದರು.

ಆದರೆ ಈ ಭರವಸೆಯನ್ನು ಈಡೇರಿಸದಿದ್ದರಿಂದ ವ್ಯಗ್ರರಾದ ಮಹಿಳೆಯರು ದೆಹಲಿಗೆ ಧಾವಿಸಿ ಸಂಸತ್ ಭವನದ ಮುಂದೆ ಧರಣಿ ಹೂಡಿದರು. ಬಂಧಿತ ಮಹಿಳೆಯರನ್ನು ಪೊಲೀಸರು ಸಂಜೆ ಬಿಟ್ಟರು. ಆದರೆ AIDWAದ ಏಳು ಪದಾಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಿದ್ದಾರೆ.

ಸಿಐಟಿಯು ಖಂಡನೆ:

ಸಂಸತ್ ಭವನದ ಮುಂದೆ ಪ್ರದರ್ಶನ ನಡೆಸಿದ ಹರ್ಯಾಣದ ದಾದಿಯರು ಮತ್ತು ನೌಕರರ ಮೇಲೆ ದೆಹಲಿ ಪೊಲೀಸರು ಲಾಠಿಪ್ರಹಾರ ಮಾಡಿದ್ದನ್ನು ಸಿಐಟಿಯು ಮತ್ತು ಅಖಿಲ ಭಾರತ ಸರಕಾರಿ ನೌಕರರ ಸಂಘ (AISGEF) ತೀವ್ರವಾಗಿ ಖಂಡಿಸಿವೆ. ಪ್ರದರ್ಶನಕಾರರ ಮೇಲೆ ನೀರಿನ ಫಿರಂಗಿ ಬಳಸಿದ ಪೊಲೀಸರು ಅಶ್ರುವಾಯು ಶೆಲ್‌ಗಳನ್ನು ಸಿಡಿಸಿದರು. ಹಾಗೂ ಲಾಠಿ ಪ್ರಹಾರ ಮಾಡಿದರು. ಇದರಿಂದ ಅನೇಕ ನರ್ಸ್‌ಗಳು ಗಾಯಗೊಂಡರು. ಹಲವರನ್ನು ಬಂಧಿಸಲಾಗಿತ್ತು.

ವೇತನ ತಾರತಮ್ಯ ನಿವಾರಣೆ, ವಿದ್ಯಾರ್ಥಿ ನರ್ಸ್‌ಗಳ ಭತ್ಯೆ ಏರಿಕೆ, ಆಸ್ಪತ್ರೆಗಳಲ್ಲಿನ ಹುದ್ದೆಗಳ ಭರ್ತಿ ಮೊದಲಾದ ಬೇಡಿಕೆಗಳನ್ನು ಮುಂದಿಟ್ಟು ಹರ್ಯಾಣದ ದಾದಿಯರು ಜೂನ್ ಒಂದರಿಂದ ಮುಷ್ಕರ ನಡೆಸುತ್ತಿದ್ದಾರೆ. ನರ್ಸ್‌ಗಳ ಸಂಘದೊಂದಿಗೆ ಮಾತುಕತೆ ನಡೆಸಲು ನಿರಾಕರಿಸಿರುವ ಹರ್ಯಾಣ ಸರಕಾರ ಮುಷ್ಕರ ನಿರತ ದಾದಿಯರನ್ನು ಹಾಸ್ಟೆಲ್‌ಗಳಿಂದ ಹೊರಹಾಕಿದೆ. ಹಾಗೂ ದಮನಕಾರಿ ಕ್ರಮಗಳಿಗೆ ಮುಂದಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರದ ಮಧ್ಯಪ್ರವೇಶವನ್ನು ಬಯಸಿ ದಾದಿಯರು ದೆಹಲಿಯ ಜಂತರ್ ಮಂತರ್‌ನಲ್ಲಿ ಜುಲೈ 20 ರಿಂದ ಧರಣಿ ನಡೆಸಿದ್ದಾರೆ.

ಜುಲೈ 10 ರಂದು ದಾದಿಯರಿಗೆ ಸೌಹಾರ್ದತೆ ಸೂಚಿಸಲು ಸಾವಿರಾರು ಸರಕಾರಿ ನೌಕರರು ಜಂತರ್ ಮಂತರ್ ಬಳಿ ನೆರೆದಿದ್ದರು. ಅವರು ಸಂಸತ್ ಭವನದತ್ತ ಸಾಗಿದಾಗ ಪೊಲೀಸರು ದೌರ್ಜನ್ಯ ನಡೆಸಿದರು.

ದಿಟ್ಟ ಹೋರಾಟ ನಡೆಸುತ್ತಿರುವ ದಾದಿಯರಿಗೆ ಬೆಂಬಲವನ್ನು ಕ್ರೋಢೀಕರಿಸುವಂತೆ ಸಿಐಟಿಯು ಟ್ರೇಡ್ ಯೂನಿಯನ್‌ಗಳಿಗೆ ಕರೆಕೊಟ್ಟಿದೆ.

ನ್ಯಾಯಕ್ಕಾಗಿ ಹೋರಾಟ ನಡೆಸುತ್ತಿರುವ ಹರ್ಯಾಣದ ದಾದಿಯರ ಮೇಲೆ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ದಮನ ಯಂತ್ರವನ್ನು ಹರಿಯ ಬಿಟ್ಟಿರುವುದನ್ನು ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ತೀಕ್ಷ್ಣವಾಗಿ ಖಂಡಿಸಿದೆ.

ದೇಶದೊಳಗೆ

ವಿಶ್ವ

ಗ್ವಾಲಿಯರ್‌ನಲ್ಲಿ ಪೊಲೀಸರಿಂದ ಕಾನೂನು ಭಕ್ಷಣೆ

ಕಾನೂನನ್ನು ರಕ್ಷಿಸಬೇಕಾದ ಪೊಲೀಸರೇ ರಾಜಕೀಯ ಪಕ್ಷವೊಂದರ ಕಚೇರಿಯ ಮೇಲೆ ದಾಳಿಮಾಡಿ ಕಾನೂನು ಭಂಜಕರಂತೆ ವರ್ತಿಸಿದ ಪ್ರಕರಣವೊಂದು ಮಧ್ಯಪ್ರದೇಶದ ಗ್ವಾಲಿಯರ್‌ನಿಂದ ವರದಿಯಾಗಿದೆ.

ಸಿಪಿಐ (ಎಂ) ಗ್ವಾಲಿಯರ್ ಜಿಲ್ಲಾ ಸಮಿತಿ ಕಚೇರಿಗೆ ಯಾವುದೇ ಪ್ರಚೋದನೆಯಿಲ್ಲದೆ ನುಗ್ಗಿದ ಪೊಲೀಸರು ಲಾಠಿ ಪ್ರಹಾರ ಮಾಡಿ ಅನೇಕ ನಾಯಕರನ್ನು ಬಂಧಿಸಿದರು. ಜುಲೈ 3 ರಂದು ಸಿಪಿಐ(ಎಂ) ಸ್ಥಳೀಯ ಸಮಿತಿ ಪಟ್ಟಣದ ನಾಗರಿಕರು ಎದುರಿಸುತ್ತಿರುವ ನಾಗರಿಕ ಸೌಲಭ್ಯಗಳ ಕೊರತೆಯನ್ನು ಪ್ರತಿಭಟಿಸಿ ಗ್ವಾಲಿಯರ್ ನಗರಪಾಲಿಕೆ ಮುಂದೆ ಬೃಹತ್ ಪ್ರದರ್ಶನ ನಡೆಸಿದ ಕೆಲವೇ ಗಂಟೆಗಳಲ್ಲಿ ಪೊಲೀಸರು ದೌರ್ಜನ್ಯವೆಸಗಿದರು.

ಪಕ್ಷದ ಸ್ಥಳೀಯ ಘಟಕ ವ್ಯವಸ್ಥೆಗೊಳಿಸಿದ್ದ ಸತ್ಯಾಗ್ರಹದಲ್ಲಿ ಗ್ವಾಲಿಯರ್‌ನ ನೂರಾರು ನಾಗರಿಕರೂ ಪಾಲ್ಗೊಂಡಿದ್ದರು. ಆದರೆ ಪ್ರದರ್ಶನ ನಡೆಯುತ್ತಿದ್ದ ವೇಳೆ ಪೊಲೀಸರಾರೂ ಅಲ್ಲಿರಲಿಲ್ಲ. ಸಂಕಷ್ಟ ತೋಡಿಕೊಳ್ಳಲು ಬಂದ ಜನರೊಂದಿಗೆ ಮಾತಾಡಲು ಯಾರೇ ಅಧಿಕಾರಿ ಬಾರದಿದ್ದರಿಂದ ವ್ಯಗ್ರಗೊಂಡ ಹಲವು ಮಹಿಳೆಯರು ಸಹಿತ ಅನೇಕ ಜನರು ಪಾಲಿಕೆಯ ಆವರಣಕ್ಕೆ ನುಗ್ಗಿದರು.

ಅದಾದ ಕೆಲವು ಗಂಟೆಗಳ ನಂತರ ಪಾಲಿಕೆ ಕಚೇರಿಯಿಂದ ಎರಡು ಕಿ.ಮೀ ದೂರದಲ್ಲಿರುವ ಸಿಪಿಐ(ಎಂ) ಜಿಲ್ಲಾ ಕಚೇರಿಯಲ್ಲಿ 'ಖಾಕಿ ಧೂರ್ತರು' ಪ್ರತ್ಯಕ್ಷ! ಹಠಾತ್ತನೆ ಎರಗಿ ಲಾಠಿ ಪ್ರಹಾರಮಾಡಿ ಮುಖಂಡರನ್ನು ಬಂಧಿಸಿದರು.

ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ವಿದ್ಯಾರಾಂ ರಜಾಕ್, ನಗರ ಕಾರ್ಯದರ್ಶಿ ಕಾಳಿ ಪ್ರಸಾದ್ ರಾಥೋಡ್, ಪ್ರೇಂಸಿಂಗ್ ಪರ್ಮಾರ್ ಮತ್ತು ರಾಕೇಶ್ ಸಿಕಾರ್‌ವರ ಬಂಧಿತರಲ್ಲಿ ಪ್ರಮುಖರು.

ಪೊಲೀಸರು ನಡೆಸಿರುವ ದೌರ್ಜನ್ಯವನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಶೈಲೇಂದ್ರ ಶೈಲಿ ರಾಜಧಾನಿ ಭೂಪಾಲ್‌ನಲ್ಲಿ ಕಟುವಾಗಿ ಖಂಡಿಸಿದ್ದಾರೆ. ಅಪ್ರಚೋದಿತ ಲಾಠಿ ಪ್ರಹಾರ ಮತ್ತು ಬಂಧನ ಅಪ್ರಜಾಸತ್ತಾತ್ಮಕವಾಗಿದೆ. ಅಧಿಕಾರಶಾಹಿಗಳ ವಿಕಪಕ್ಷೀಯ ವರ್ತನೆ ಎಲ್ಲೆ ಮೀರಿರುವುದನ್ನು ಇದು ತೋರಿಸುತ್ತದೆ ಎಂದು ಶೈಲಿ ಹೇಳಿದ್ದಾರೆ.

ಇದು ಬಿಜೆಪಿ ಮಾದರಿ ಮಹಿಳಾ ಮೀಸಲಾತಿ!

ಬಿಜೆಪಿ ಮಹಿಳಾ ಮೀಸಲಾತಿ ಬಗ್ಗೆ ಬಹಳಷ್ಟು ಮಾತಾಡಿದರೂ ಆ ಬಗ್ಗೆ ಅದು ಪ್ರಾಮಾಣಿಕವಾಗಿ ವರ್ತಿಸುತ್ತಿದೆಯೆ ಎಂಬ ಬಗ್ಗೆ ಜುಲೈ 13 ರಂದು ಸಂಸತ್ತಿನಲ್ಲಿನ ಘಟನೆಗಳು ಬಹಳಷ್ಟು ಜನರಲ್ಲಿ ಸಂದೇಹ ಮೂಡಿಸಿವೆ. ಅದರ ಆಳ್ವಿಕೆಯ ಗುಜರಾತ್‌ನಲ್ಲಿನ ಘಟನೆ ಕಂಡರೆ ಅದರ ಅಪ್ರಾಮಾಣಿಕತೆಯ ಬಗ್ಗೆ ಎಳ್ಳಷ್ಟೂ ಸಂದೇಹ ಉಳಿಯುವುದಿಲ್ಲ.

ಗುಜರಾತಿನ ಕೇಶುಭಾಯಿ ನೇತೃತ್ವದ ಬಿಜೆಪಿ ಸರಕಾರ ರಾಜ್ಯದಲ್ಲಿನ ಚುನಾಯಿತ ಸಹಕಾರಿ ಸಂಸ್ಥೆಗಳಲ್ಲಿ ಮಹಿಳೆಯರಿಗೆ 33 ಶೇ. ಮೀಸಲಾತಿ ನೀಡುವ ವಿಶೇಷಾಜ್ಞೆಯನ್ನು ಊರ್ಜಿತಗೊಳಿಸಿಲ್ಲ. ಮಾತ್ರವಲ್ಲ, ಅದಕ್ಕೆ ಮೊದಲೇ ಈ ವಿಶೇಷಾಜ್ಞೆಯ ಪ್ರಕಾರ ಆರಿಸಿಕೊಂಡ ಮಹಿಳಾ ಪ್ರತಿನಿಧಿಗಳನ್ನು ತೆಗೆದುಹಾಕುವ ಕ್ರಮ ಕೈಗೊಂಡಿತು.

ದಿಲೀಪ್‌ಪಾರೀಕ್ ನೇತೃತ್ವದ ಆರ್.ಜೆ.ಪಿ. ಸರಕಾರದ ಅವಧಿಯಲ್ಲಿ ಕಳೆದ ಡಿಸೆಂಬರ್‌ನಲ್ಲಿ ಈ ಸುಗ್ರೀವಾಜ್ಞೆಯನ್ನು ಹೊರಡಿಸಲಾಗಿತ್ತು. ಈ ಆಜ್ಞೆಯ ಪ್ರಕಾರ ರಾಜ್ಯದ ಎಲ್ಲಾ ಸಹಕಾರಿ ಸಂಸ್ಥೆಗಳ ಆಡಳಿತ ಮಂಡಳಿಗಳಲ್ಲಿ 33ಶೇ. ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡುವುದನ್ನು ಕಡ್ಡಾಯಮಾಡಲಾಯಿತು. ಚುನಾವಣೆ ನಡೆಯುವವರೆಗೆ 33 ಶೇ. ಮಹಿಳಾ ನಿರ್ದೇಶಕರುಗಳನ್ನು ತಗೊಳ್ಳಬೇಕು ಎಂದು ವಿಧಿಸಲಾಗಿತ್ತು. ಗುಜರಾತಿನಲ್ಲಿ ಒಟ್ಟು 52000 ಚುನಾಯಿತ ಸಹಕಾರಿಗಳಿದ್ದು ಸಹಕಾರಿ ಆಂದೋಲನ ಶಕ್ತಿಶಾಲಿಯಾಗಿದೆ.

ಈ ಸುಗ್ರೀವಾಜ್ಞೆ ಹೊರಡಿಸಿದ ಒಂದೇ ವಾರದೊಳಗೆ ಪಾರೀಖ್ ಮಂತ್ರಿಮಂಡಳ ರಾಜ್ಯವಿಧಾನಸಭೆಯನ್ನು ವಿಸರ್ಜಿಸುವ ಶಿಫಾರಸು ಮಾಡಿತು. ಬಿಜೆಪಿ ಚುನಾವಣೆ ಗೆದ್ದು ಮಾರ್ಚ್ ತಿಂಗಳಲ್ಲಿ ಅಧಿಕಾರ ವಹಿಸಿಕೊಂಡಿತು. ಮಾರ್ಚ್ ಅಂತ್ಯದಲ್ಲಿ ಸಭೆ ಸೇರಿದ ಗುಜರಾತ್ ವಿಧಾನ ಸಭೆ ಹಲವು ಸುಗ್ರೀವಾಜ್ಞೆಗಳ ಸ್ಥಾನದಲ್ಲಿ ಮಂಡಿಸಿದ ಮಸೂದೆಗಳನ್ನು ಅಂಗೀಕರಿಸಿತು. ಆದರೆ ಈ ಮೀಸಲಾತಿ ಸುಗ್ರೀವಾಜ್ಞೆಯ ಸ್ಥಾನದಲ್ಲಿ ಮಸೂದೆ ಮಂಡಿಸುವ ಗೋಜಿಗೂ ಬಿಜೆಪಿ ಸರಕಾರ ಹೋಗಲಿಲ್ಲ. ಅದರ ಬದಲು ಮೇ 1 ರಂದು ಗುಜರಾತ್ ರಚನೆಯ ದಿನಾಚರಣೆಯಂದು ಈ ಸುಗ್ರೀವಾಜ್ಞೆಯ ಜಾರಿಯನ್ನು ತಡೆಹಿಡಿಯುವ ಆಡಳಿತ ಆದೇಶ ಹೊರಡಿಸಲಾಯಿತು - ಈ ಸುಗ್ರೀವಾಜ್ಞೆ ಪ್ರಕಾರ ತಗೊಂಡ ಮಹಿಳೆಯರನ್ನೆಲ್ಲಾ ತೆಗೆದುಹಾಕಲು ಆದೇಶ ನೀಡಿತು. ಈ ಮಹಿಳೆಯರಲ್ಲಿ ಕೆಲವರು ಈಗ ಹೈಕೋರ್ಟ್‌ನಲ್ಲಿ ದಾವೆ ಸಲ್ಲಿಸಿದ್ದಾರೆ.

ಈ ವಿಶೇಷಾಜ್ಞೆಯ ಸಾಧಕ-ಬಾಧಕಗಳನ್ನು ಪರಿಶೀಲಿಸಿ ಸೂಕ್ತ ತಿದ್ದುಪಡಿ ಸೂಚಿಸಬೇಕೆಂದು ಒಂದು ತ್ರಿಸದಸ್ಯ ಸಮಿತಿ ನೇಮಿತವಾಗಿದ್ದರೂ ಅದಕ್ಕೊಂದು ಸಮಯ ಮಿತಿ ಹಾಕಿಲ್ಲ. ಈ ಸಮಿತಿ ಇನ್ನೂ ಆರಂಭಿಕ ಅಧ್ಯಯನವನ್ನೇ ಕೈಗೆತ್ತಿಕೊಂಡಿಲ್ಲ. ಜೂನ್ 20 ರಂದು ಈ ಸುಗ್ರೀವಾಜ್ಞೆಯ ಅವಧಿ ಮುಗಿಯುವ ವೇಳೆಗೆ ಅದನ್ನು ಮತ್ತೊಮ್ಮೆ ಹೊರಡಿಸಲು ಬಿಜೆಪಿ ಸರಕಾರ ಯಾವುದೇ ಆಸಕ್ತಿ ತೋರಿಸಲಿಲ್ಲ ಮಾತ್ರ ವಲ್ಲ, ಪ್ರಸಕ್ತ ವಿಧಾನ ಸಭಾ ಅಧಿವೇಶನದಲ್ಲಿ ಈ ಬಗ್ಗೆ ಮಸೂದೆ ಮಂಡಿಸಲು ಕೂಡಾ ಯಾವುದೇ ಸಿದ್ಧತೆ ಮಾಡಿಲ್ಲ. ಸಹಕಾರಿ ಸಂಸ್ಥೆಗಳಲ್ಲಿ ಮಹಿಳೆಯರು ಭಾಗವಹಿಸುವ ಬಗ್ಗೆ ರಾಜ್ಯ ಸರಕಾರ ಯಾವ ಆಸಕ್ತಿಯನ್ನೂ ತೋರಿಸುತ್ತಿಲ್ಲ.

ಅಪೂರ್ವ ಯಶಸ್ಸಿನ ಕೈಗಾರಿಕೆ ಮುಷ್ಕರ

ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಜನವಿರೋಧಿ ಆರ್ಥಿಕ ನೀತಿಗಳನ್ನು ಪ್ರತಿಭಟಿಸಿ ಪಶ್ಚಿಮಬಂಗಾಳದಲ್ಲಿ ಈಚೆಗೆ ಯಶಸ್ವಿ ಕೈಗಾರಿಕೆ ಮುಷ್ಕರ ನಡೆಯಿತು. ಹತ್ತು ಟ್ರೇಡ್ ಯೂನಿಯನ್‌ಗಳು ಮತ್ತು ನೌಕರರ ಒಕ್ಕೂಟಗಳು ನೀಡಿದ್ದ ಒಂದು ದಿನದ ಮುಷ್ಕರದ ಕರೆಗೆ ರಾಜ್ಯದ ಜನರು ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ಸಿಐಟಿಯು, ಇಂಟಕ್, ಐಟಕ್, ಯುಟಿಯುಸಿ, ಟಿಯುಸಿಸಿ (ಎಲ್.ಎಸ್), ಎಐಸಿಸಿಟಿಯು, 12 ಜುಲೈ ಸಮಿತಿ, ಮರ್ಕಂಟೈಲ್ ಫೆಡರೇಶನ್, ಮತ್ತು ಬ್ಯಾಂಕ್ ನೌಕರರ ಒಕ್ಕೂಟ ಮೊದಲಾದವು ಮುಷ್ಕರಕ್ಕೆ ಕರೆ ಕೊಟ್ಟಿದ್ದವು.

ಕೇಂದ್ರ ಸರಕಾರದ ವಿನಾಶಕಾರಿ ಆರ್ಥಿಕ ಮತ್ತು ಕೈಗಾರಿಕೆ ನೀತಿಗಳಿಗೆ ಪ್ರತಿಭಟನೆಯನ್ನು ದಾಖಲಿಸುವ ಮಹತ್ವದ ಗುರಿಯೊಂದಿಗೆ ಈ ಹೋರಾಟವನ್ನು ಹಮ್ಮಿಕೊಳ್ಳಲಾಗಿತ್ತು.

ಜುಲೈ 3 ರಂದು ರಾಜ್ಯದ ಉದ್ದಗಲಕ್ಕೂ ದೊಡ್ಡ ಹಾಗೂ ಸಣ್ಣ ಕೈಗಾರಿಕೆ ಘಟಕಗಳು ಮುಚ್ಚಿದ್ದವು. ಅಂಗಡಿ ಮುಂಗಟ್ಟುಗಳು ಕೆಲಸ ನಿರ್ವಹಿಸಲಿಲ್ಲ. ಹಿಂದಿನ ಹಲವು ಅನುಭವಗಳಿಗೆ ವ್ಯತಿರಿಕ್ತವಾಗಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳೆರಡರಲ್ಲೂ ಸಣ್ಣಪುಟ್ಟ ಚಾ-ತಿಂಡಿ ಅಂಗಡಿಗಳೂ ಮುಚ್ಚಿದ್ದವು.

ಫ್ಯಾಕ್ಟರಿಗಳ ಮುಂದೆ ನಡೆದ ಸಭೆಗಳನ್ನುದ್ದೇಶಿಸಿ ಕಾರ್ಮಿಕ ಸಂಘಟನೆಗಳ ಮುಖಂಡರು ಮಾತನಾಡಿದರು.

ಬಿಜೆಪಿಯ ಆರ್ಥಿಕ ಕೈಗಾರಿಕಾ ನೀತಿಯ ಅಪಾಯಕಾರಿ ಅಂಶಗಳು -ಧೋರಣೆಗಳನ್ನು ವಿವರಿಸಿದರು. ಒಂದು ದಿನದ ಈ ಮುಷ್ಕರ ಬಿಜೆಪಿ ನಾಯಕತ್ವದ ಸರಕಾರದ ವಿರುದ್ಧದ ರಾಷ್ಟ್ರವ್ಯಾಪಿ ಆಂದೋಲನದ ಒಂದು ಭಾಗವಾಗಿದೆಯಷ್ಟೇ ಎಂದು ಅವರು ನೆನಪಿಸಿದರು.

ಸಾರಿಗೆ ನೌಕರರ ಒಕ್ಕೂಟಗಳು ಮುಷ್ಕರದಲ್ಲಿ ಪಾಲ್ಗೊಂಡಿದ್ದರಿಂದ ರಸ್ತೆಗಳು ಮತ್ತು ರಾಜ್ಯ ಹೆದ್ದಾರಿಗಳು ಬಿಕೋ ಎನ್ನುತ್ತಿದ್ದವು. ಮುಷ್ಕರಕ್ಕೆ ಬೆಂಬಲವಾಗಿ ಸಾರಿಗೆ ನೌಕರರು ನಗರ ಪ್ರದೇಶಗಳಲ್ಲಿ ಮೆರವಣಿಗೆಗಳನ್ನು ನಡೆಸಿದರು.

ಶಿಕ್ಷಣರಂಗದ ಮೇಲೂ ಮುಷ್ಕರದ ಪ್ರಭಾವ ಬಿದ್ದಿತ್ತು. ಶಾಲೆ, ಕಾಲೇಜು, ವಿವಿಗಳಲ್ಲಿ ಹಾಜರಾತಿ ತೀರಾ ಕಡಿಮೆಯಿತ್ತು. ಸಾರ್ವಜನಿಕ ಕ್ಷೇತ್ರದ ಉದ್ಯಮ ಘಟಕಗಳೆಲ್ಲವೂ ಅಂದು ಮುಚ್ಚಿದ್ದವು. ಬ್ಯಾಂಕುಗಳೂ ಕಾರ್ಯನಿರ್ವಹಿಸಲಿಲ್ಲ. ರಾಯಲ್ ಎಕ್ಸ್‌ಚೇಂಜಿನ ವ್ಯವಹಾರಗಳೂ ಮಂದಗತಿಯದ್ದಾಗಿತ್ತು.

ರೈಲ್ವೆ ಬಜೆಟ್ಟನ್ನು ವಿರೋಧಿಸಿ ಕೇವಲ ಎರಡು ವಾರಗಳ ಹಿಂದೆ ಪೂರ್ಣ ರೈಲು ತಡೆ ಚಳುವಳಿಯನ್ನು ನಡೆಸಿದ್ದರಿಂದ ಈ ಬಾರಿ ರೈಲ್ವೆಗೆ ವಿನಾಯಿತಿ ತೋರಿಸಲಾಗಿತ್ತು. ಆದರೂ ಕೆಲವು ರೈಲುಗಳ ಸಂಚಾರ ಸ್ಥಗಿತಗೊಳಿಸಿದ್ದವು. ಮೆಟ್ರೊ ರೈಲ್ವೆ ಸೇವೆ ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು. ದೂರ ಸಂಪರ್ಕ ಸೇವೆಯ ತುರ್ತು ಅಗತ್ಯಗಳನ್ನು ಮಾತ್ರ ಕೆಲವೇ ಸಿಬ್ಬಂದಿಗಳ ನೆರವಿನಿಂದ ನಿರ್ವಹಿಸ ಲಾಯಿತು. ಯಾವುದೇ ವಿಮಾನ ಇಳಿಯಲೂ ಇಲ್ಲ ಹಾರಲೂ ಇಲ್ಲ; ಹಾಗಾಗಿ ಕಲ್ಕತ್ತ ವಿಮಾನ ನಿಲ್ದಾಣ ದಿನವಿಡೀ ಮೌನವಾಗಿತ್ತು.

ರಾಜ್ಯದ ದುಡಿಯುವ ಜನರಲ್ಲಿ ಉತ್ಸಾಹ ತುಂಬಿದ ಈ ಮಹತ್ವದ ಮುಷ್ಕರ ಜನವಿರೋಧಿ ನೀತಿಗಳ ವಿರುದ್ಧ ಮುಂಬರುವ ದಿನಗಳಲ್ಲಿ ಮೇಲೆದ್ದು ಬರಲಿರುವ ಹೋರಾಟದ ಅಲೆಯ ಮೊದಲ ಕಿಡಿಯಾಗಿದೆ.

ಪಶ್ಚಿಮಬಂಗಾಳ: ನಗರಸಭಾ ಚುನಾವಣೆಗಳಲ್ಲೂ ಎಡರಂಗ ಜಯಭೇರಿ

ಪಶ್ಚಿಮ ಬಂಗಾಳದಲ್ಲಿ ಪಂಚಾಯತ್ ಚುನಾವಣೆಗಳಲ್ಲಿ, ವಿಧಾನಸಭಾ ಉಪ ಚುನಾವಣೆಗಳಲ್ಲಿ ಬಿಜೆಪಿ-ತೃಣಮೂಲ ಕಾಂಗ್ರೆಸ್ಸಿನ ಅಬ್ಬರವನ್ನೆಲ್ಲಾ ಅಡಗಿಸಿದ ಮೇಲೆ ಈಗ ನಗರಸಭಾ ಚುನಾವಣೆಗಳಲ್ಲೂ ಎಡರಂಗ ಜಯಭೇರಿ ಹೊಡೆದಿದೆ.

12 ನಗರಸಭಾ ಚುನಾವಣೆಗಳಲ್ಲಿ ಎಡರಂಗ ಎಂಟರಲ್ಲಿ ಸ್ಪಷ್ಟ ಬಹುಮತಗಳಿಸಿದೆ. ಬಿಜೆಪಿ-ತೃಣಮೂಲ ಕಾಂಗ್ರೆಸ್ ಕೂಟ ಕೇವಲ ಒಂದರಲ್ಲಿ ಹಾಗೂ ಕಾಂಗ್ರೆಸ್(ಐ) ಒಂದರಲ್ಲಿ ಬಹುಮತ ಗಳಿಸಿವೆ. ಎರಡು ಮುನಿಸಿಪಾಲಿಟಿಗಳಲ್ಲಿ ಯಾರಿಗೂ ಸ್ಪಷ್ಟ ಬಹುಮತ ದೊರೆತಿಲ್ಲ.

ಕಳೆದ ಬಾರಿ ಕಾಂಗ್ರೆಸ್(ಐ) ಮೂರರಲ್ಲಿ, ಬಿಜೆಪಿ ಒಂದರಲ್ಲಿ ಬಹುಮತ ಗಳಿಸಿತ್ತು. ಆದರೆ ಈ ಬಾರಿ ತನ್ನದೇ ನಿಜ ವಾದ ಕಾಂಗ್ರೆಸ್ ಎನ್ನುವ ಮಮತಾ ಬ್ಯಾನರ್ಜಿಯವರ ಪಕ್ಷದೊಂದಿಗೆ ಸ್ಪರ್ಧಿಸಿದರೂ ಅವರಿಗೆ ದೊರೆತದ್ದು ಒಂದೇ ಮುನಿಸಿ ಪಾಲಿಟಿ.

ಸಾಮಾನ್ಯವಾಗಿ ಕಾಂಗ್ರೆಸ್ಸೇ ಗೆಲ್ಲುತ್ತಿದ್ದ ಮೇದಿನೀಪೂರ್ ನಗರಸಭೆಯಲ್ಲಿ ಈ ಬಾರಿ ಅದನ್ನೂ ಕಳಕೊಂಡಿದೆ. ಯಾರಿಗೂ ಸ್ಪಷ್ಟ ಬಹುಮತ ದೊರೆತಿಲ್ಲ ವಾದರೂ ಎಡರಂಗ ತನ್ನ ಬಲ ಹೆಚ್ಚಿಸಿ ಕೊಂಡಿದೆ. ಭೀರ್‌ಭೂಮ್ ಜಿಲ್ಲೆಯ ದುಬ್ರಾಡ್ ಪುರ ನಗರಸಭೆಯನ್ನು ಎಡರಂಗ ಕಾಂಗ್ರೆಸ್‌ನಿಂದ ಕಿತ್ತುಕೊಂಡಿದ್ದರೆ, ಅಲೀಪುರ್‌ದ್ವಾರ್ ನಗರಸಭೆಯನ್ನು ಎಡರಂಗ ಕಳಕೊಂಡಿದೆ. ಅಲ್ಲಿ ಯಾರಿಗೂ ಸ್ಪಷ್ಟ ಬಹುಮತ ದೊರೆತಿಲ್ಲ.

ಫೆಬ್ರವರಿ ಲೋಕಸಭೆ ಚುನಾವಣೆಗಳಲ್ಲಿ ಬಿಜೆಪಿ ಗೆದ್ದ ಡಂಡಂ ಕ್ಷೇತ್ರದಲ್ಲಿನ ಪನಿಹಾಟಿ ವಿಧಾನಸಭಾ ಕ್ಷೇತ್ರದಲ್ಲಿನ ಫಲಿತಾಂಶ ಆಶ್ಚರ್ಯ ಉಂಟು ಮಾಡಿದೆ. ಲೋಕಸಭಾ ಚುನಾವಣೆಗಳಲ್ಲಿ ಈ ವಿಭಾಗದಿಂದ ಬಿಜೆಪಿ 39000 ಮತ ಪಡೆದಿತ್ತು. ಆದರೆ ಈ ಬಾರಿ ಅದಕ್ಕೆ ಎರಡು ನಗರಸಭಾ ಸ್ಥಾನಗಳನ್ನು ಮಾತ್ರ ಗೆಲ್ಲಲು ಸಾಧ್ಯವಾಗಿದೆ. ಎಡರಂಗ 20 ಸ್ಥಾನಗಳನ್ನೂ, ತೃಣಮೂಲ ಕಾಂಗ್ರೆಸ್ 3 ಸ್ಥಾನಗಳನ್ನು ಗೆದ್ದಿದೆ.

ಅಂದರೆ ಮುನಿಸಿ ಪಾಲಿಟಿ ಚುನಾವಣೆಗಳಲ್ಲಿ ಮತದಾರರು ಬಿಜೆಪಿಯನ್ನು ನಿರ್ಣಾಯಕವಾಗಿ ತಿರಸ್ಕರಿಸಿದ್ದಾರೆ.

ಮಹಿಳಾ ಮೀಸಲಾತಿ ಮಸೂದೆಯ ಮಂಡನೆಯನ್ನು ಒತ್ತಾಯಿಸುತ್ತಿರುವ ಮಹಿಳೆಯರ ಮೇಲೆ ಮುಂಬೈಯಲ್ಲಿ ಪೊಲೀಸರ ಧಾಳಿ.



ಲೋಕಸಂಚಾರ

ಶರತ್ ಚಂದ್ರ

ಜಪಾನೀ ಆಳುವ ಪಕ್ಷಕ್ಕೆ ಮೇಲ್ಮನೆ ಚುನಾವಣೆಯಲ್ಲಿ ಭಾರೀ ಸೋಲು–ಪ್ರಧಾನಿ ರಾಜೀನಾಮೆ

ಜಪಾನಿನ ಆಳುವ ಪಕ್ಷ ಲಿಬರಲ್ ಡೆಮೊಕ್ರಾಟಿಕ್ ಪಾರ್ಟಿ (LDP) ಗೆ ಮೇಲ್ಮನೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಭಾರೀ ಸೋಲಾಗಿದೆ. ಸೋಲು ಎಷ್ಟು ಅವಮಾನಕಾರಿಯಾಗಿತ್ತೆಂದರೆ ಪ್ರಧಾನಿ ಹಶಿಮೊಟೊ ರಾಜೀನಾಮೆ ಕೊಟ್ಟಿದ್ದಾರೆ. ಹೊಸ ಪ್ರಧಾನಿ ಮತ್ತು ಆಳುವ ಪಕ್ಷದ ಅಧ್ಯಕ್ಷರನ್ನು ಚುನಾಯಿಸಬೇಕಾದ ಪರಿಸ್ಥಿತಿ ಆಳುವ ಪಕ್ಷ ಹಾಗೂ ದೇಶವನ್ನು ತೀವ್ರ ರಾಜಕೀಯ ಬಿಕ್ಕಟ್ಟಿಗೆ ತಳ್ಳಿದೆ. ಮೇಲ್ಮನೆಯ ಅರ್ಧದಷ್ಟು ಸೀಟುಗಳಿಗೆ (ಅಂದರೆ 126 ಸೀಟುಗಳು) ನಡೆದ ಚುನಾವಣೆಯಲ್ಲಿ (LDP)ಗೆ ಕೇವಲ 44 ಸೀಟು ಸಿಕ್ಕಿದೆ. ಇದಲ್ಲದೆ ಎರಡನೇ ಮಹಾಯುದ್ಧದ ನಂತರ ಹೆಚ್ಚಿನ ಅವಧಿಯಲ್ಲಿ ಆಳಿದ CDP ಗೆ ಬದಲಿ ಪಕ್ಷಗಳ ಸಂಯುಕ್ತ ರಂಗ ಬೆಳೆದು ಬರುತ್ತಿರುವಂತೆ ಕಾಣುವುದು CDPಯಲ್ಲಿ ಗೊಂದಲಉಂಟುಮಾಡಿದೆ. ಡೆಮೊಕ್ರಾಟಿಕ್ ಪಾರ್ಟಿಎಂಬ ಮಧ್ಯಗಾಮಿ ಪಕ್ಷ ತನ್ನ ಬಲವನ್ನು 38 ರಿಂದ 47 ಕ್ಕೇರಿಸಿದೆ. ಜಪಾನಿ ಕಮ್ಯುನಿಸ್ಟ್ ಪಕ್ಷದ ಬಲ 14 ರಿಂದ 23 ಕ್ಕೇರಿದೆ. ಒಂದೆರಡು ವರ್ಷಗಳಷ್ಟು ದೂರವಿರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಡೆಮೊಕ್ರಾಟಿಕ್ ಪಕ್ಷ ಮತ್ತು ಕಮ್ಯುನಿಸ್ಟ್ ಪಕ್ಷ ಹೊಂದಾಣಿಕೆ ಮಾಡುವ ಸೂಚನೆಗಳಿವೆ.

ಹಶಿಮೊಟೊರವರ ರಾಜೀನಾಮೆಯಿಂದ LDP ಯ ಗುಂಪುಗಳು ಹೊಸ ನಾಯಕನನ್ನು ಆರಿಸಲು ಸಕ್ರಿಯವಾಗಿವೆ. ಪ್ರಧಾನಿ, ಪಕ್ಷದ ಅಧ್ಯಕ್ಷರ ಆಯ್ಕೆ ಮುಂಬರುವ ಚುನಾವಣೆಯ ದೃಷ್ಟಿಯಿಂದ ಮಾಡಲಾಗುತ್ತಿದೆ. ಭ್ರಷ್ಟಚಾರ ಗುಂಪುಗಾರಿಕೆ, ಲಾಬಿ ಮಾಡುವಿಕೆ LDP ಯ ಮುಖ್ಯ ಲಕ್ಷಣಗಳು. ಇಷ್ಟು ತೀವ್ರ ಬಿಕ್ಕಟ್ಟಿನಲ್ಲೂ, ಮತದಾರರ ಸಂದೇಶವನ್ನು ಅರ್ಥಮಾಡಿಕೊಳ್ಳಲು LDP ಯ ನಾಯಕತ್ವಕ್ಕೆ ಆಗಿಲ್ಲ. ಜಗತ್ತಿನ ಎರಡನೇ ದೊಡ್ಡ ಆರ್ಥಿಕ ಸ್ಥಗಿತಗೊಂಡಿದೆ. ಬೆಲೆಗಳು ಏರುತ್ತಿವೆ, ನಿರುದ್ಯೋಗ, ಹಣದುಬ್ಬರ ಹೆಚ್ಚುತ್ತಿವೆ. ದೊಡ್ಡ ಪ್ರಮಾಣದಲ್ಲಿ ಆರ್ಥಿಕ ಬಿಕ್ಕಟ್ಟಿನಿಂದ ಬ್ಯಾಂಕುಗಳು ಕೈಗಾರಿಕೆಗಳು ಮುಚ್ಚುತ್ತಿವೆ. ಈ ಬಗ್ಗೆ LDP ಸರ್ಕಾರ ಏನೂ ಮಾಡಿಲ್ಲ-ಎಂಬ ಕೋಪವನ್ನು ಮತದಾರ ತೋರಿದ್ದಾನೆ. ಈಬಗ್ಗೆ ಏನಾದರೂ ಮಾಡುವ ಬದಲು ಮುಂದಿನ ಚುನಾವಣೆಯಲ್ಲಿ ಗೆಲ್ಲುವುದು ಹೇಗೆಂಬುವುದು LDP ನಾಯಕತ್ವದ ಆತಂಕ.

ಜಪಾನ್ ಸಂಸತ್ತಿನ ಮೇಲ್ಮನೆಯಲ್ಲಿ ಕಮ್ಯುನಿಸ್ಟ್ ಪಕ್ಷಕ್ಕೆ ದೊಡ್ಡ ಮುನ್ನಡೆ

ಜಪಾನೀ ಸಂಸತ್ತಿನ ಮೇಲ್ಸದನವಾದ ಕೌನ್ಸಿಲರ್ ಸದನಕ್ಕೆ ಕಳೆದ ವಾರ ನಡೆದ ಚುನಾವಣೆಗಳಲ್ಲಿ ಜಪಾನೀ ಕಮ್ಯುನಿಸ್ಟ್ ಪಕ್ಷ ಚಾರಿತ್ರಿಕ ಮುನ್ನಡೆ ಸಾಧಿಸಿದೆ. ಕಳೆದ ಬಾರಿ ಅದು ಪಡೆದಿದ್ದ 6 ಸ್ಥಾನಗಳಲ್ಲದೆ ಇನ್ನೂ 9 ಸ್ಥಾನಗಳಲ್ಲಿ ಅದು ಗೆದ್ದಿತು. ಚುನಾವಣೆಯಿಲ್ಲದ ಸ್ಥಾನಗಳಲ್ಲಿ 8 ಸೇರಿ ಈಗ ಮೇಲ್ಮನೆಯ ಒಟ್ಟು 252 ಸದಸ್ಯರಲ್ಲಿ 23 ಸ್ಥಾನ ಜಪಾನೀ ಕಮ್ಯುನಿಸ್ಟ್ ಪಕ್ಷ ಪಡೆದಿದೆ. ಕಳೆದ ಸದನದಲ್ಲಿ ಅದಕ್ಕೆ 14 ಸ್ಥಾನಗಳಿದ್ದವು. ಹಿಂದೆಂದೂ ಜಪಾನೀ ಕಮ್ಯುನಿಸ್ಟ್ ಪಕ್ಷ ಇಷ್ಟೊಂದು ಸ್ಥಾನ ಪಡೆದಿರಲಿಲ್ಲ.

ರಾಷ್ಟ್ರೀಯ ಅನುಪಾತಿತ ಪ್ರಾತಿನಿಧ್ಯದ ಕ್ಷೇತ್ರಗಳಲ್ಲಿ ಜಪಾನೀ ಕಮ್ಯುನಿಸ್ಟ್ ಪಕ್ಷ 82 ಲಕ್ಷ ಮತಗಳಿಸಿದೆ. ಇದು ಒಟ್ಟು ಮತದ 14.6%, ಈ ಮೂಲಕ 8 ಸ್ಥಾನಗಳನ್ನು ಅದು ಪಡೆಯಿತು. ಆಡಳಿತ ಚುನಾವಣಾ ಕ್ಷೇತ್ರಗಳಲ್ಲೂ ಟೋಕ್ಯೋ ಮಹಾನಗರದ ನಾಲ್ಕು ಸ್ಥಾನಗಳ ಕ್ಷೇತ್ರಗಳಲ್ಲಿ ಒಂದನ್ನು ಒಪಾಕಾ ಮತ್ತಿತರ 3 ನಗರಗಳು 3 ಸ್ಥಾನಗಳ ಕ್ಷೇತ್ರದಲ್ಲಿ ತಲಾ ಒಂದನ್ನು, ಎರಡು ಸ್ಥಾನಗಳಲ್ಲಿ ಒಂದೊಂದು ಸ್ಥಾನವನ್ನು ಜಪಾನೀ ಕಮ್ಯುನಿಸ್ಟ್ ಪಕ್ಷ ಗೆದ್ದಿದೆ. ಆಳುವ ಎಲ್.ಡಿ.ಪಿ. ಪಕ್ಷ ನಾಲ್ಕು ಸ್ಥಾನಗಳ ಕ್ಷೇತ್ರಗಳಲ್ಲಿ ಭಾರೀ ಪರಾಭವ ಅನುಭವಿಸಿದೆ. ಗೆಲ್ಲದ ಸ್ಥಾನಗಳಲ್ಲೂ ಜಪಾನೀ ಕಮ್ಯುನಿಸ್ಟ್ ಪಕ್ಷ ಗಮನಾರ್ಹ ಮುನ್ನಡೆ ದಾಖಲಿಸಿದೆ.

ಈ ಚುನಾವಣಾ ಫಲಿತಾಂಶಗಳ ಬಗ್ಗೆ ಪ್ರತಿಕ್ರಿಯಿಸುತ್ತಾ ಜಪಾನೀ ಕಮ್ಯುನಿಸ್ಟ್ ಪಕ್ಷ ಸ್ಥಾಯೀ ಅಧ್ಯಕ್ಷ ಮಂಡಳಿ ಇದು ಜಪಾನೀ ಸಂಸತ್ತು ಟಯುತ್‌ನಲ್ಲಿ ಪಕ್ಷದ ಚಟುವಟಿಕೆಗಳಲ್ಲಿ ಒಂದು ಯುಗಾಂತರ ಕಾರೀ ಮಹತ್ವದ್ದು ಎಂದಿದೆ. ಈ ಮುನ್ನಡೆಯೊಂದಿಗೆ 'ಮಸೂದೆಯನ್ನು ಮಂಡಿಸುವ ಅದಕ್ಕಾಗಿ ಆಯವ್ಯಯ ಮಂಡಿಸುವ' ಹಕ್ಕನ್ನು ಪಕ್ಷ ಪಡೆದಿದೆ.

ಪ್ರಧಾನ ಮಂತ್ರಿ ರ್‍ಯುಟಾರೊ ಹಾಶಿಮೋಟೋ ರಾಜೀನಾಮೆಯ ನಂತರ ಸಂಸತ್ತನ್ನು ವಿಸರ್ಜಿಸಿ ಹೊಸ ಚುನಾವಣೆ ನಡೆಸಬೇಕು ಎಂದು ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ತೆತ್ಸು ಝು ಫುವಾ ಹೇಳಿದ್ದಾರೆ, ತಕ್ಷಣದ ರಾಜಕೀಯ ಪ್ರಶ್ನೆಯೆಂದರೆ ಆಳುವ ಪಕ್ಷದ ಚೌಕಟ್ಟಿನೊಳಗೆ ಹೊಸ ಸರ್ಕಾರಿ ಮುಖಂಡನನ್ನು ಆರಿಸುವುದೋ ಅಥವಾ ಮೇಲ್ಮನೆ ಚುನಾವಣೆಗಳಲ್ಲಿ ಆಳುವ ಪಕ್ಷ ಅನುಭವಿಸಿದ ಹೀನ ಸೋಲಿನಲ್ಲಿ ವ್ಯಕ್ತಗೊಂಡ ಜನತೆಯ ತೀರ್ಪಿನ ಮೇಲೆ ನಿರ್ಣಯ ತಗೊಳ್ಳಬೇಕೋ ಎಂದು ಜಪಾನೀ ಕಮ್ಯುನಿಸ್ಟ್ ಪಕ್ಷ ಕೇಳಿದೆ.

ಆಳುವ ಪಕ್ಷ ಎಲ್.ಡಿ.ಪಿ. ಪ್ರತಿನಿಧಿ ಸಭೆಯಲ್ಲಿ ಬಹುಮತವೇನೋ ಹೊಂದಿದೆ, ಇದು ಬೇರೆ ಪಕ್ಷಗಳಿಂದ ಕಸರತ್ತು ನಡೆಸಿ ಸದಸ್ಯರನ್ನು ಪಡೆದು ಪಡೆದ ಬಹುಮತವಷ್ಟೇ ಅಲ್ಲ, ಇತ್ತೀಚಿನ ಮೇಲ್ಮನೆ ಚುನಾವಣೆಯ ನಂತರ ಇದು ಜನಗಳ ಇಚ್ಛೆಯನ್ನು ಬಿಂಬಿಸುತ್ತಿಲ್ಲ ಎಂದಿರುವ ಜಪಾನೀ ಕಮ್ಯುನಿಸ್ಟ್ ಪಕ್ಷ ಸಂಸತ್ತಿನ ಕೆಳಮನೆ ಪ್ರತಿನಿಧಿ ಸಭೆಯ ವಿಸರ್ಜನೆ ಹಾಗೂ ಹೊಸ ಸಾರ್ವತ್ರಿಕ ಚುನಾವಣೆಗೆ ಕರೆ ನೀಡಿದೆ.

ಬ್ಯಾಂಕುಗಳನ್ನು ಹಾಗೂ ಕಟ್ಟಡ ಕಂಪನಿಗಳನ್ನು ಬೆಂಬಲಿಸುವ ಕ್ರಮಗಳ ಭರದಲ್ಲಿ ಹಾಶಿಮೋಟೋ ಸರಕಾರ ವೈಯಕ್ತಿಕ ಬಳಕೆ ತೆರಿಗೆ ಇತ್ಯಾದಿಗಳ ಮೂಲಕ ಕೈಗಾರಿಕಾ ಹಿಂಜರಿತಕ್ಕೆ ಹಾದಿಮಾಡಿಕೊಟ್ಟರು. ಮಹಾಯುದ್ಧಾನಂತರದ ಅಭೂತಪೂರ್ವ ಹಿಂಜರಿತ ಈಗ ಜಪಾನೀ ಉದ್ದಿಮೆಗಳನ್ನು ತಟ್ಟಿದೆ. ಜನಗಳ ಸಂಕಟಗಳತ್ತ ಗಮನ ನೀಡದ ಇಂತಹ ನೀತಿಗಳ ವಿರುದ್ಧ ಜನತೆ ತೀರ್ಪು ನೀಡಿದ್ದಾರೆ. ಅಷ್ಟೇ ಅಲ್ಲ ಎರಡನೇ ವಿಶ್ವಯುದ್ಧದ ನಂತರ ದೊಡ್ಡ ಕಂಪನಿಗಳ ಹಿತಾಸಕ್ತಿಗಳಿಗೇ ಆದ್ಯತೆ ನೀಡದ, ಅಮೆರಿಕಾಕ್ಕೆ ಜೀಹುಜೂರ್ ಎನ್ನುವ ಎಲ್.ಡಿ.ಪಿ. ಯ 'ತಲೆಕೆಳಗಾದ' ನೀತಿಗಳ ವಿರುದ್ಧ ಜನ ತೀರ್ಪು ನೀಡಿದ್ದಾರೆ. ಈ ಎಲ್.ಡಿ.ಪಿ. ರಾಜಕೀಯದಿಂದ ಅವರು ತಪ್ಪಿಸಿಕೊಳ್ಳಬಯಸುತ್ತಾರೆ. ಸದನದಲ್ಲಿ ಅರ್ಧಕ್ಕಿಂತ ಹೆಚ್ಚು ಸ್ಥಾನಗಳಿದ್ದರೂ, ಅದು ಜನತೆಯ ಬೆಂಬಲ ಕಳಕೊಂಡ 'ಹುಸಿ ಬಹುಮತ' ಎಂದು ಜಪಾನೀ ಕಮ್ಯುನಿಸ್ಟ್ ಪಕ್ಷ ಹೇಳಿದೆ

(ಐ.ಎನ್.ಎನ್)

ವಿಶ್ವಬ್ಯಾಂಕ್‌ನಲ್ಲಿ 'ಲಂಚಾವತಾರ' ಅಥವಾ 'ಖಾಸಗೀಕರಣ'!

ವಿಶ್ವಬ್ಯಾಂಕ್ ಮತ್ತು ಐಎಂಎಫ್ ಗಳು ಸರ್ಕಾರಗಳು ಇತರ ಸರ್ಕಾರಿ ಸಂಘಟನೆಗಳಿಗೆ ಆರ್ಥಿಕ ಶಿಸ್ತು ಬಗ್ಗೆ ಉಪದೇಶ ನೀಡುತ್ತವೆ. ಹಣಪೋಲು, ದುರ್ವ್ಯಯದ ಬಗ್ಗೆ ಭಾಷಣ ಕೊಡುತ್ತವೆ, ಆದರೆ ವಿಶ್ವಾಬ್ಯಾಂಕ್ ಸ್ವತಃ ತನ್ನ ಅಧಿಕರಿಗಳ ಮೇಲೆ ಭ್ರಷ್ಟಾಚಾರದ ತನಿಖೆ ನಡೆಸುತ್ತಿದೆಯಂತೆ. ಮಾಜಿ ಅಧಿಕಾರಿ ಫ್ರಿಟ್ಝ್ ರೊಡ್ರಿಗಸ್ ಮೇಲೆ ವಿಶ್ವ ಬ್ಯಾಂಕ್ ಸಾವಿರಾರು ಡಾಲರುಗಳ ಲಂಚ ತೆಗೆದುಕೊಂಡಿದ್ದಕ್ಕೆ ಸಿವಿಲ್ ಕೇಸು ಹಾಕಿದೆ. ಅಲ್ಜೀರಿಯಾದಲ್ಲಿ ವಿಶ್ವಬ್ಯಾಂಕ್ ನೀರು ಪೂರೈಕೆ ಯೋಜನೆಗೆ ಕೊಟ್ಟ ಕಾಂಟ್ರಾಕ್ಟ್‌ನಲ್ಲಿ ರೊಡ್ರಿಗಸ್ ಕಿಕ್‌ಬ್ಯಾಕ್ ಪಡೆದಿದ್ದಾರೆ ಎಂದು ವಿಶ್ವಬ್ಯಾಂಕ್ ವಾಶಿಂಗ್ಟನ್ ಕೋರ್ಟಿನಲ್ಲಿ ಆಪಾದಿಸಿದೆ. ಈ ಯೋಜನೆಯ ಕಾಂಟ್ರಾಕ್ಟರ್ ರೊಡ್ರಿಗಝ್ ನೆರೆಯವನಾಗಿದ್ದು, ಇತರಿಬ್ಬರ ನಡುವೆ ದುರ್ವ್ಯವಹಾರ ನಡೆದಿದೆ ಎಂದು ಬ್ಯಾಂಕ್ ಆಪಾದಿಸಿದೆ. ರೊಡ್ರಿಗಝ್ ಕೇಸು ಮಾತ್ರವಲ್ಲ, ಇನ್ನೂ ಮೂರು ಇಂತಹ ಕೇಸುಗಳಲ್ಲಿ ತನಿಖೆ ನಡೆಯುತ್ತಿದೆ. ಸಂಬಂದಪಟ್ಟ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಲಾಗಿದೆ. ವಾರ್ಷಿಕ ಸುಮಾರು 20 ಶತಕೋಟಿ ಡಾಲರುಗಳಷ್ಟು ಸಾಲ ಹಂಚುವ ವಿಶ್ವಬ್ಯಾಂಕಿನ ಅಧಿಕಾರಿಗಳಲ್ಲಿ ಭ್ರಷ್ಟಾಚಾರ ಹೆಚ್ಚುತ್ತಿದೆಯಂತೆ. ಇಂತಹ ಕೇಸುಗಳನ್ನು ಹಿಡಿಯಲು ಬ್ಯಾಂಕ್‌ನ ಖಾತೆಗಳ ಮೇಲೆ ನಿಗಾ ಇಡಲು ಬ್ಯಾಂಕ್ ಅಧ್ಯಕ್ಷ ಹೊರಗಿನ ಸಂಸ್ಥೆಯೊಂದನ್ನು ನೇಮಿಸಿದ್ದಾರೆ.

ಇಡೀ ಜಗತ್ತಿನಲ್ಲಿ 'ಖಾಸಗೀಕರಣ' ಪ್ರೋತ್ಸಾಹಿಸುವ ವಿಶ್ವಬ್ಯಾಂಕ್ ಅಧಿಕಾರಿಗಳು ಬ್ಯಾಂಕಿನ ಹಣವನ್ನು ಸ್ವಲ್ಪ ಖಾಸಗೀಕರಣ ಗೊಳಿಸಿದರೆ ಬ್ಯಾಂಕಿನ ಗಂಟೇನು ಹೋಗುತ್ತದೆ ಎಂದಿರಾ?

ದಕ್ಷಿಣ ಕೊರಿಯಾದಲ್ಲಿ ಮುಷ್ಕರಗಳ ಅಲೆ

ದಕ್ಷಿಣ ಕೊರಿಯಾದಲ್ಲಿ ಮುಷ್ಕರಗಳ ಅಲೆ ಆರಂಭವಾಗಿದೆ. ಇಂಜಿನಿಯರಿಂಗ್, ಬ್ಯಾಂಕ್ ಮತ್ತು ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ಮುಷ್ಕರಕ್ಕೆ ಕರೆ ಕೊಟ್ಟಿದ್ದಾರೆ. ಎಲ್ಲಾ ಮುಷ್ಕರಗಳ ಮುಖ್ಯ ಧ್ವನಿ ಒಂದೇ-ಲೇ ಆಫ್ ನಿಲ್ಲಿಸಿ. ಸರ್ಕಾರ ಆರ್ಥಿಕ ಬಿಕ್ಕಟ್ಟು ಎದುರಿಸಲು ಎಲ್ಲಾ ಪ್ರಮುಖ ಕ್ಷೇತ್ರಗಳಲ್ಲಿ 'ಭಾರಿ ಲೇ ಆಫ್ ಗೆ' ಕುಮ್ಮಕ್ಕು ಕೊಡುತ್ತಿದೆ. ಅಂದರೆ ಎಲ್ಲಾ ಆರ್ಥಿಕ ಬಿಕ್ಕಟ್ಟಿನ ಪರಿಣಾಮಗಳನ್ನು ಕಾರ್ಮಿಕರ ಮೇಲೆ ವರ್ಗಾಯಿಸುವ ಹುನ್ನಾರವನ್ನು ಕಾರ್ಮಿಕರು ಪ್ರತಿಭಟಿಸಿದ್ದಾರೆ. ದಕ್ಷಿಣ ಕೊರಿಯಾದ 'ಚಬೇಲಾ' ಎಂದು ಕರೆಯಲಾಗುವ ಗುತ್ತೇದಾರಿ ಕಂಪನಿಗಳ ಆರ್ಥಿಕ ದುರ್ವ್ಯವಹಾರದಿಂದಲೇ ಆರ್ಥಿಕ ಬಿಕ್ಕಟ್ಟು ಬಂದಿದ್ದು, ಆದರೆ ಅದರ ದುಷ್ಪರಿಣಾಮದ ಪಾಲು ಹೊರಲು ಅವು ತಯಾರಿಲ್ಲ. ಆರ್ಥಿಕ ಬಿಕ್ಕಟ್ಟಿನ ಪರಿಹಾರ ಸೂತ್ರಗಳ ಬಗ್ಗೆ ಟ್ರೇಡ್‌ಯೂನಿಯನ್ ಜತೆ ಚರ್ಚಿಸುತ್ತಿಲ್ಲ ಎಂಬುದು ಕಾರ್ಮಿಕರ ದೂರು ಸಹ. ಕೊರಿಯದ ಎರಡು ಅತಿದೊಡ್ಡ ಕೇಂದ್ರೀಯ ಟ್ರೇಡ್‌ಯೂನಿಯನ್ ಮುಷ್ಕರಗಳಿಗೆ ಸಕ್ರಿಯ ಬೆಂಬಲ ನೀಡುತ್ತಿದ್ದು, ಮುಷ್ಕರಗಳು ಪುನಃ ದಕ್ಷಿಣ ಕೊರಿಯಾವನ್ನು ನಡುಗಿಸುವ ಸಾಧ್ಯತೆ ಇದೆ. ಇತ್ತೀಚೆಗೆ ಮುಷ್ಕರದ ಹಿನ್ನೆಲೆಯಲ್ಲಿ ರಾಜಧಾನಿ ಸೋಲ್‌ನಲ್ಲಿ ನಡೆದ ರ್‍ಯಾಲಿಯಲ್ಲಿ ಅರವತ್ತು ಸಾವಿರಕ್ಕೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದರು.

ತಾಲಿಬಾನ್ ಸರ್ಕಾರಕ್ಕೆ ವಿಶ್ವಸಂಸ್ಥೆ ಎಚ್ಚರಿಕೆ

ಅಫ್‌ಘಾನಿಸ್ತಾನದ ಹೆಚ್ಚಿನ ಭಾಗವನ್ನು ನಿಯಂತ್ರಿಸುತ್ತಿರುವ ತಾಲಿಬಾನ್ಸ್ 'ಇಸ್ಲಾಮಿಕ್ ಆಡಳಿತ' ದ ಬಗ್ಗೆ ಎಲ್ಲರಿಗೂ ಗೊತ್ತು. ಹೆಣ್ಣು ಮಕ್ಕಳು ಸ್ಕೂಲು, ಕಾಲೇಜುಗಳಿಗೆ ಹೋಗುವುದು ಕೆಲಸ ಮಾಡುವುದನ್ನು ನಿಷೇಧಿಸಲಾಗಿದೆ. ಜನಕಲ್ಯಾಣ ಯೋಜನೆಗಳು ಯಾವುದಕ್ಕೂ ತಲೆಕೆಡಿಸಿ ಕೊಳ್ಳದ ತಾಲಿಬಾನ್ ಇತ್ತೀಚಿನ ಭಾರಿ ಭೂಕಂಪದ ಸಮಯದಲ್ಲಿ ಸಂತ್ರಸ್ತರಿಗೆ ಪರಿಹಾರ ಒದಗಿಸಲು ಕಿರುಬೆರಳನ್ನೆತ್ತಲಿಲ್ಲ. ಇದು ಮಾತ್ರವಲ್ಲ, ಈ ಸಮಯದಲ್ಲಿ ಮತ್ತು ಅಫ್‌ಘಾನಿಸ್ತಾನದ ಆಂತರಿಕಯುದ್ಧದಲ್ಲಿ ಸಂತ್ರಸ್ತರಿಗೆ ಪರಿಹಾರ ಒದಗಿಸಲು ಕೆಲಸ ಮಾಡುತ್ತಿರುವ ವಿಶ್ವಸಂಸ್ಥೆಯ ಸಂಘಟನೆಗಳು ಹಾಗೂ ಇತರ ಸ್ವಯಂ ಸೇವಾ ಸಂಘಟನೆಗಳಿಗೆ ಕಿರುಕುಳ ಕೊಡುತ್ತಿದೆ.

ಇತ್ತೀಚೆಗೆ ಎಲ್ಲಾ ಇಂತಹ ಸಂಘಟನೆಗಳು ತಮ್ಮ ಸದಸ್ಯರ ವಾಸಿಸುವ ಸ್ಥಳವನ್ನು ಸರಕಾರ ನಿರ್ದೇಶಿಸುವ ಸ್ಥಳಗಳಿಗೆ ಬದಲಾಯಿಸಬೇಕು, ಈ ಆಜ್ಞೆ ಪಾಲಿಸ ದಿದ್ದರೆ ಅಂತಹ ಸಂಘಟನೆಗಳು ದೇಶ ಬಿಟ್ಟು ಹೋಗಬೇಕು ಎಂದು ತಾಲಿಬಾನ್‌ಆಡಳಿತ ಎಚ್ಚರಿಕೆ ನೀಡಿದ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆ ಇಂತಹ ವರ್ತನೆ ಬಗ್ಗೆ ತೀವ್ರ ಎಚ್ಚರಿಕೆ ನೀಡಿದೆ. ಇದನ್ನು ಜಾರಿಗೊಳಿಸಿದರೆ ವಿಶ್ವಸಂಸ್ಥೆ ಎಲ್ಲಾ ಸಂಘಟನೆಗಳು ಅಫ್‌ಘಾನಿಸ್ತಾನದಲ್ಲಿ ಮುಂದೆ ಕೆಲಸಮಾಡುವುದಿಲ್ಲ ಎಂದಿದೆ.

ಭದ್ರತಾ ಸಮಿತಿ ಅಫ್‌ಘಾನಿಸ್ತಾನದಲ್ಲಿ ಆಂತರಿಕ ಯುದ್ಧ ಮುಂದುವರೆಯುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸಿ, ಹೊರಗಿನ ದೇಶಗಳು ಸಂಘಟನೆಗಳು ಯುದ್ಧದಲ್ಲಿ ತೊಡಗಿರುವ ಗುಂಪುಗಳಿಗೆ ಶಸ್ತ್ರಾಸ್ತ್ರ ಸರಬರಾಜು ನಿಲ್ಲಸಬೇಕೆಂದು ಕರೆ ನೀಡಿದೆ. ಮಹಿಳೆಯರ ಮೇಲಿನ ನೀತಿ, ಮಾನವ ಹಕ್ಕುಗಳ ತೀವ್ರ ಉಲ್ಲಂಘನೆಯನ್ನು ಖಂಡಿಸಿದೆ. ಆದರೆ ವಿಶ್ವಸಂಸ್ಥೆಯ ಈ ನೀತಿ ಮೆದು ನೀತಿಯೇ ಎನ್ನಬೇಕು. ಯುಗೋಸ್ಲಾವಿಯಾ, ಇರಾಕ್, ಉತ್ತರ ಕೊರಿಯಾಗಳ ಮೇಲೆ ಮಾತೆತ್ತಿದರೆ ದಿಗ್ಬಂಧನದ ಬಗ್ಗೆ ಮಾತ ನಾಡಿದ ವಿಶ್ವಸಂಸ್ಥೆ ಭದ್ರತಾ ಸಮಿತಿ ಅಫ್‌ಘಾನಿಸ್ಥಾನದ ಬಗ್ಗೆ ಏಕೆ ಸುಮ್ಮನಿದೆ? ತಾಲಿಬಾನ್ ಸರ್ಕಾರ ಅಮೇರಿಕದ ತೈಲ ಕಂಪನಿಗಳ ಮೆಚ್ಚಿನ ರಾಜಕೀಯ ಶಕ್ತಿ ಎಂದೆ? ಅಥವಾ ಮಾನವ ಹಕ್ಕುಗಳ ಉಲ್ಲಂಘನೆ ಎಂದರೆ ಅಮೇರಿಕನ್ ಹಿತಾಸಕ್ತಿ ಗಳಿಗೆ ಧಕ್ಕೆ ಎಂದು ವಿಶ್ವಸಂಸ್ಥೆ ನಿಘಂಟಿನಲ್ಲೂ ಅರ್ಥವೆ?

ಇಟಲಿಯ ಮಾಜಿ ಪ್ರಧಾನಿಗಳು ಜೈಲಿಗೆ

ಇಟಲಿಯ ಇಬ್ಬರು ಮಾಜಿ ಪ್ರಧಾನಿಗಳಿಗೆ ಭ್ರಷ್ಟಾಚಾರದ ಆಪಾದನೆ ಮೇಲೆ ಜೈಲು ಶಿಕ್ಷೆ ಆಗಿದೆ. ಅದೂ ಒಬ್ಬ ಮಾಜಿ ಪ್ರಧಾನಿ ಲಂಚಕೊಟ್ಟ ಅಪರಾಧಕ್ಕೆ ಇನ್ನೊಬ್ಬ ಪ್ರಧಾನಿಗೆ ಲಂಚ ತೆಗೆದುಕೊಂಡ ಅಪರಾಧಕ್ಕೆ. ಸಲ್ವಿಯೊ ಬೆರ್ಲುಸ್ಕೊನಿ ಪ್ರಸ್ತುತ ಸರ್ಕಾರಕ್ಕೆ ಮೊದಲು ಪ್ರಧಾನಿಯಾಗಿದ್ದವರು. ಅವರು 1991ರಲ್ಲಿ ಆಗ ಪ್ರಧಾನಿಯಾಗಿದ್ದ ಬೆಟ್ಟಿನೊ ಕ್ರಾಕ್ಸಿಯವರಿಗೆ 80 ಲಕ್ಷ ಪೌಂಡು ಲಂಚ ಕೊಟ್ಟಿರುವ ಆಪಾದನೆ ಕೋರ್ಟಿನಲ್ಲಿ ರುಜುವಾತಾಗಿದೆ. ಆಗ ಸಿಲ್ವಿಯೊ ಬೆರ್ಲುಸ್ಕೊನಿ ಇನ್ನೂ ರಾಜಕೀಯಕ್ಕೆ ಸೇರಿರಲಿಲ್ಲ. ಹಲವು ರೇಡಿಯೋ ಟಿವಿ ಇತ್ಯಾದಿ ಮಾಧ್ಯಮಗಳನ್ನು ನಿಯಂತ್ರಿಸುವ ಭಾರಿ ಕಂಪನಿಯ ಮಾಲಿಕನಾಗಿದ್ದ. ಲಂಚವನ್ನು ಇಪ್ಪತ್ತು ಕಂತುಗಳಲ್ಲಿ ಎರಡು ಸ್ವಿಸ್ ಬ್ಯಾಂಕ್ ಖಾತೆಗಳಿಗೆ ಪಾವತಿ ಮಾಡಲಾಗಿತ್ತು ಎಂದು ಪ್ರಾಸಿಕ್ಯೂಷನ್ ರುಜುವಾತು ಮಾಡಿದ್ದಾರೆ. ಸಿಲ್ವಿಯೊರಿಗೆ ಎರಡು ವರ್ಷ ನಾಲ್ಕು ತಿಂಗಳ ಜೈಲು ಶಿಕ್ಷೆ ವಿಧಿಸಲಾಗಿದೆ. ಕ್ರಾಕ್ಸಿಯವರಿಗೆ ನಾಲ್ಕು ವರ್ಷ ಜೈಲು ಮತ್ತು 80 ಲಕ್ಷ ಪೌಂಡು ಜುಲ್ಮಾನೆ ವಿಧಿಸಲಾಗಿದೆ.

ಕ್ರಾಕ್ಸಿ ತಲೆತಪ್ಪಿಸಿಕೊಂಡು ಟ್ಯೂನಿಶಿಯಾ ಎಂಬ ದೇಶದಲ್ಲಿ ವಾಸಿಸುತ್ತಿದ್ದಾರೆ. ಅವರ ವಿರುದ್ಧ ಇತರ ಹಲವಾರು ಭ್ರಷ್ಟಾಚಾರದ ಕೇಸುಗಳು ಇವೆ. ಬೆರ್ಲುಸ್ಕೊನಿಗೆ ಕೋರ್ಟು ಶಿಕ್ಷೆ ವಿಧಿಸಿದ್ದರೂ ಸದ್ಯಕ್ಕೆ ಅವರು ಜೈಲಿಗೆ ಹೋಗುವ ಪ್ರಮೇಯ ಇಲ್ಲ-ಎರಡು ಅಪೀಲ್‌ಗಳಲ್ಲದೆ, ಪಾರ್ಲಿಮೆಂಟ್ ಸದಸ್ಯರಾಗಿ ಅವರಿಗೆ ವಿಶೇಷ ಸವಲತ್ತುಗಳಿರುವುದರಿಂದ. ಬೆರ್ಲುಸ್ಕೊನಿಗೆ ಈಗಾಗಲೇ ಇನ್ನೆರಡು ಕೇಸುಗಳಲ್ಲಿ ಶಿಕ್ಷೆಯಾಗಿದೆ. ಕ್ರಾಕ್ಸಿಗೂ ಅಷ್ಟೇ. ಹಲವಾರು ಕೇಸುಗಳಲ್ಲಿ ಶಿಕ್ಷೆ ಆಗಲೇ ಆಗಿದೆ. ಕ್ರಾಕ್ಸಿ ಇಟಲಿಯನ್ ಸೋಶಲಿಸ್ಟ್ ಪಕ್ಷದವರು ಎಂದು ಇಲ್ಲಿ ಜ್ಞಾಪಿಸಿಕೊಳ್ಳಬಹುದು.

ಇಟಲಿಯ ರಾಜಕೀಯದಲ್ಲಿ ಭ್ರಷ್ಟಾಚಾರ ಎಷ್ಟು ವ್ಯಾಪಕವಾಗಿತ್ತು ಎಂದು ಇದರಿಂದ ಅರಿವಾಗುತ್ತದೆ.

ಸಿಐಎ ಬುಡಮೇಲು ಕೃತ್ಯಗಳ ಬಗ್ಗೆ ಹಳೆ ದಾಖಲೆಗಳನ್ನು ಬಹಿರಂಗ ಮಾಡಲು ಹಿಂದೇಟು

ಶೀತಲ ಸಮರದಲ್ಲಿ ಸಿಐಎ ಇತರ ದೇಶಗಳಲ್ಲಿ ಹಸ್ತಕ್ಷೇಪ ಮಾಡುತ್ತಾ ಅಲ್ಲಿನ ಸರಕಾರಗಳ ವಿರುದ್ಧ ಕೈಗೊಂಡ ಬುಡಮೇಲು ಕೃತ್ಯಗಳ ಬಗ್ಗೆ ಹಳೆದಾಖಲೆಗಳನ್ನು ಬಹಿ ರಂಗ ಮಾಡಲು ಹಿಂದೇಟು ಹೊಡೆಯುತ್ತಿದೆ. ಅಮೇರಿಕದ ಕಾನೂನಿನ ಪ್ರಕಾರ ಮೂವತ್ತು ವರ್ಷಗಳ ನಂತರ ಎಲ್ಲಾ ಸರ್ಕಾರಿ ದಾಖಲೆಗಳು (ರಹಸ್ಯ ಎಂದು ಪರಿಗಣಿಸಲ್ಪಟ್ಟದ್ದು ಸೇರಿ) ಸಾರ್ವಜನಿಕ ಅವಗಾಹನೆಗೆ ದೊರೆಯಬೇಕು.

ಶೀತಲ ಸಮರದ ಕಾಲದಲ್ಲಿ ಸಿಐಎ ಕೈಗೊಂಡ ಹನ್ನೊಂದು ಅರೆಮಿಲಿಟರಿ ಮತ್ತು ರಾಜಕೀಯ ಬುಡಮೇಲುಕೃತ್ಯಗಳ ಬಗ್ಗೆ ಸಾವಿರಾರು ಫೈಲುಗಳನ್ನು ಬಹಿರಂಗ ಮಾಡುವುದಾಗಿ 5 ವರ್ಷದ ಹಿಂದೆ ಸಿಐಎ ಕೊಟ್ಟ ಆಶ್ವಾಸನೆ ಈಡೇರಿಸಲು ಹಿಂದೇಟು ಹೊಡೆಯುತ್ತಿದೆ.

ಎರಡು ಕೃತ್ಯಗಳ ಬಗ್ಗೆ ಕೆಲವು ದಾಖಲೆಗಳನ್ನು ಅದು ಬಿಡುಗಡೆ ಮಾಡಿದೆ. ಈಗ ಅದು ಕೆಲವು ದಾಖಲೆಗಳು ಸಿಗುತ್ತಿಲ್ಲ ಎಂದು ನೆವ ಹೇಳುತ್ತಿದೆ. ನಿಜವಾಗಿಯೂ ಈ ದಾಖಲೆಗಳನ್ನು ಸಿಐಎ ನಾಶಮಾಡಿದೆ ಎಂದು ಸ್ವತಂತ್ರ ವೀಕ್ಷಕರ ಅಭಿಪ್ರಾಯ.

ಸಿಐಎ ನಡೆಸಿದ ಆ ಹನ್ನೊಂದು ಬುಡಮೇಲು ಕೃತ್ಯಗಳೆಂದರೆ

1. ಕ್ಯೂಬಾದ ಮೇಲೆ ಬೇ ಆಫ್ ಪಿಗ್ಸ್ ಆಕ್ರಮಣ (1961)

2. ಗ್ವಾಟೆಮಾಲಾದ ಸರ್ಕಾರವನ್ನು ಬುಡಮೇಲು ಮಾಡಿದ್ದು (1954)

3-4 ಫ್ರಾನ್ಸ್‌ನ (ಮತ್ತು ಇಟಲಿಯ) ಸೋಶಲಿಸ್ಟ್ ಪಾರ್ಟಿಯ ಒಳ ಸೇರಿ ನಿಯಂತ್ರಣ ಪಡೆದು ಅದನ್ನು ಕಮ್ಯುನಿಸ್ಟ್ ಪಕ್ಷದ ವಿರುದ್ಧ ಎತ್ತಿ ಹಿಡಿದಿದ್ದು (40/50 ರ ದಶಕದಲ್ಲಿ)

5-6 ಕೊರಿಯನ್ ಯುದ್ಧದ ಸಮಯ ದಲ್ಲಿ ಉತ್ತರ ಮತ್ತು ದಕ್ಷಿಣ ಕೊರಿಯಾದಲ್ಲಿ ಗೆರಿಲ್ಲಾ ಯುದ್ಧಕ್ಕೆ ಕುಮ್ಮಕ್ಕು (50ರ ದಶಕದಲ್ಲಿ). ಇಂಡೋನೇಶ್ಯಾದಲ್ಲಿ ರಾಜಕೀಯ ಪ್ರಚಾರ ಪ್ರಕ್ಷೋಭೆಗೆ ಕುಮ್ಮಕ್ಕು ಹಾಗೂ ಮಿಲಿಟರಿ ಕ್ಷಿಪ್ರ ಕ್ರಾಂತಿಯ ಯೋಜನೆ /50/60ರ ದಶಕದಲ್ಲಿ 8/

9 ಲಾವೋಸ್ ಮತ್ತು ಟಿಬೇಟ್‌ಗಳಲ್ಲಿ ಅರೆ ಮಿಲಿಟರಿ ಚಟುವಟಿಕೆಗಳು ಅಲ್ಲಿನ ಸರ್ಕಾರದ ವಿರುದ್ಧ

10 -11 ಕಾಂಗೋ ಮತ್ತು ಡೊಮಿನಿಕನ್ ಗಣರಾಜ್ಯಗಳಲ್ಲಿ ನಾಯಕರ ಹತ್ಯೆ ಹಾಗೂ ಸರ್ಕಾರವನ್ನು ಬುಡಮೇಲು ಮಾಡಿದ್ದು (60ರ ದಶಕದಲ್ಲಿ)

ಮಹಾ ವಿಶ್ವಾಸಘಾತ

ಮಹಿಳಾ ಮೀಸಲಾತಿ ಕುರಿತಂತೆ ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ

ಸಂಸತ್ತಿನಲ್ಲಿ ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿಯ ಮಸೂದೆಯನ್ನು ಮಂಡಿಸಲು ತಾನು ಬದ್ಧ ಎಂದು ಬಿಜೆಪಿ ದೊಡ್ಡದಾಗಿ ಹೇಳಿಕೊಂಡರೂ ಪ್ರಸಕ್ತ ಅಧಿವೇಶನದಲ್ಲಿ ಸರಕಾರ ಅದನ್ನು ಅದನ್ನು ಮಂಡಿಸುವಲ್ಲಿಯೂ ಸಂಪೂರ್ಣವಾಗಿ ವಿಫಲವಾಗಿವೆ.

ಸಮಾಜವಾದೀ ಪಕ್ಷ ಮತ್ತು ಆರ್.ಜೆ.ಡಿ. ಪಕ್ಷ ಬಳಸಿದ ವಿಧಾನಗಳು, ಸೋಮವಾರ ಜುಲೈ 13 ರಂದು ಈ ಮಸೂದೆಯ ಮಂಡನೆಯ ತಡೆಯುವಲ್ಲಿ ಈ ಪಕ್ಷಗಳ ಎಂ.ಪಿ.ಗಳು ಪ್ರದರ್ಶಿಸಿದ ವರ್ತನೆ ಸಂಪೂರ್ಣ ಖಂಡನೀಯ. ಆದರೆ ಕಾನೂನು ಮಂತ್ರಿಗಳು ಮಂಗಳವಾರ ಮಸೂದೆಯನ್ನು ಮಂಡಿಸಲು ಅನುಮತಿ ಕೋರಲು ಎದ್ದುನಿಂತಾಗ ಸದಸ್ಯರು 'ಆಗಬಹುದು' ಎಂದು ಹೇಳುವ ಮೊದಲೇ ಸಭಾಧ್ಯಕ್ಷ ಶ್ರೀಯುತ ಬಾಲಯೋಗಿಯವರು ಮಧ್ಯಪ್ರವೇಶಿಸಿ ಸದನದ ಒಪ್ಪಿಗೆಯೊಂದಿಗೆ ಮಸೂದೆಯ ಮಂಡನೆಯನ್ನು ಸದ್ಯಕ್ಕೆ ಮುಂದೂಡಿರುವುದಾಗಿ ಹೇಳಿದರು. ಅಂದರೆ ಮಂಗಳವಾರ ಅಧಿವೇಶನ ಆರಂಭವಾಗುವ ಮೊದಲೇ ಈ ಮಸೂದೆಯ ಮೇಲೆ ಒಮ್ಮತವಿಲ್ಲ ಎಂಬ ನೆವದಲ್ಲಿ ಮಸೂದೆ ಮಂಡನೆಯನ್ನು ಮುಂದೂಡಲು ಅವರು ನಿರ್ಧರಿಸಿದ್ದರು ಎಂಬುದು ಸ್ಪಷ್ಟ.

ಸಂಸತ್ತಿನಲ್ಲಿ ಎಂದೂ ಒಂದು ಮಸೂದೆಯನ್ನು ಮೊದಲೇ ರೂಪಿಸಿದ ಒಮ್ಮತದ ಆಧಾರದ ಮೇಲೇನೂ ಮಂಡಿಸುವುದಿಲ್ಲ. ಮಸೂದೆಯನ್ನು ಮಂಡಿಸಲಾಗುತ್ತದೆ, ಚರ್ಚೆ ನಡೆಯುತ್ತದೆ, ಕೊನೆಗೆ ಸದನ ಅದನ್ನು ಸ್ವೀಕರಿಸಲು, ತಿದ್ದುಪಡಿ ಮಾಡಲು ಅಥವಾ ತಿರಸ್ಕರಿಸಲು ನಿರ್ಧರಿಸುತ್ತದೆ. ಮಸೂದೆಯನ್ನು ಮಂಡಿಸಲಿಕ್ಕೇ ಪೂರ್ವಶರತ್ತಾಗಿ ಒಮ್ಮತದ ಬಗ್ಗೆ ಮಾತನಾಡುವ ಮೂಲಕ ಸಭಾಧ್ಯಕ್ಷರು ಸರಕಾರದ ನಿರ್ದೇಶನದ ಮೇರೆಗೆ ತಾನು ಕೆಲಸ ಮಾಡುತ್ತಿದ್ದೇನೆ ಎಂಬುದನ್ನು ಬಹಿರಂಗ ಪಡಿಸಿದ್ದಾರೆ. ಸರಕಾರಕ್ಕೆ ಈ ಹಂತದಲ್ಲಿ ಅದನ್ನು ಮಂಡಿಸುವ ಆಸಕ್ತಿಯಿರಲಿಲ್ಲ.

ಬೇರೆಲ್ಲಾ ವಿಷಯಗಳಂತೆ ಇಲ್ಲೂ ಸರಕಾರದ ಮಾತುಗಳು ಮತ್ತು ಕೃತಿಗಳು ತದ್ವಿರುದ್ಧವಾಗಿವೆ. ಇದು ಉದ್ದೇಶಪೂರ್ವಕ. ಮಾತು ಜನಗಳನ್ನು ತಪ್ಪು ದಾರಿಗೆಳೆದು ರಾಜಕೀಯ ಬೆಂಬಲ ಗಿಟ್ಟಿಸಲು, ಕೃತಿ ಪ್ರತಿಗಾಮಿ ಸೈದ್ಧಾಂತಿಕ ನಿಲುವುಗಳ ತನ್ನ ಸಾಮಾಜಿಕ ನೆಲೆಯ ಹಿತಾಸಕ್ತಿಗಳನ್ನು ಕ್ರೋಢೀಕರಿಸಲು.

ಮಹಿಳೆಯರು 33 ಶೇ. ಮೀಸಲಾತಿಯೊಳಗೆ ಇತರ ಹಿಂದುಳಿದ ವರ್ಗಗಳಿಗೆ ಹಾಗೂ ಮುಸಲ್ಮಾನರಿಗೆ ಮೀಸಲಾತಿಯ ಪ್ರಶ್ನೆ ಹೊಸದೇನಲ್ಲ. ಹಿಂದಿನ ಎಲ್ಲಾ ಸಂದರ್ಭಗಳಲ್ಲಿ ಇದನ್ನು ಎತ್ತಲಾಗಿತ್ತು. ಅದರೂ ಪ್ರಧಾನ ಮಂತ್ರಿಗಳೇ ಸದನದಲ್ಲಿ ಘೋಷಿಸಿದ್ದರು - ಮೀಸಲಾತಿಯ ಪ್ರಮಾಣ ಮತ್ತು ಅಂಶಗಳ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ ಸರ್ವ ಪಕ್ಷ ಸಭೆ ಈ ಮಸೂದೆಯನ್ನು ಮಂಡಿಸಲು ನಿರ್ಧರಿಸಿದೆ, ನಂತರ ಈ ವಿಷಯಗಳನ್ನು ಚರ್ಚಿಸಬಹುದು ಎಂದು. ಈಗ ಮಸೂದೆಯ ಮಂಡನೆಯ ವಿಷಯದಲ್ಲೇ ಸರಕಾರ ಹಿಂದೆ ಸರಿದಿದೆ ಎಂಬ ಸಂಗತಿ ಈ ವಿಷಯದಲ್ಲಿ ಬಿಜೆಪಿಯ ವಂಚನೆಯನ್ನು ತೋರಿಸುತ್ತದೆ. ಮತ್ತು ಇದರಲ್ಲೇನೂ ಆಶ್ಚರ್ಯವಿಲ್ಲ. ಸಂಯುಕ್ತ ರಂಗ ಸರಕಾರದ ಅವಧಿಯಲ್ಲಿ ಈ ಮಸೂದೆಯನ್ನು ಇದೇ ಓ.ಬಿ.ಸಿ. ಮೀಸಲಾತಿಯ ಹೆಸರಲ್ಲಿ ವಿರೋಧಿಸಿದ್ದು ಬಿಜೆಪಿಯ ಉಮಾಭಾರತಿ ಯವರು ತಾನೇ? ಅದೇ ರೀತಿ ಇನ್ನೊಬ್ಬ ಬಿಜೆಪಿ ಎಂ.ಪಿ. ಗಂಗಾಚರಣ್ ರಾಜಪೂತ್ ಇಂತಹುದೇ ಒತ್ತಾಯಕ್ಕೆ 92 ಎಂ.ಪಿ.ಗಳ ಸಹಿ ಸಂಗ್ರಹಣೆ ನಡೆಸಿದರು.

33 ಶೇಕಡದೊಳಗೆ ಓ.ಬಿ.ಸಿ. ಗಳಿಗೆ ಮೀಸಲಾತಿ ಕೇಳುವವರಲ್ಲಿ ಒಂದು ವಿಭಾಗ ವಾಸ್ತವವಾಗಿ ಮಹಿಳಾ ಮೀಸಲಾತಿ ಮಸೂದೆ ಶಾಸನವಾಗುವುದನ್ನು ತಡೆಯಲು ಒಂದುನೆವವಾಗಿ ಬಳಸುತ್ತಿದ್ದಾರೆಂಬುದು ಸ್ಪಷ್ಟ. ಒಂದು ಪುರುಷಪ್ರಾಬಲ್ಯದ ಸಂಪ್ರದಾಯಕರಣ ಸಮಾಜ ತನ್ನ ಪ್ರಜಾಪ್ರಭುತ್ವ ಸಂಸ್ಥೆಗಳಲ್ಲಿ ಮಹಿಳೆಯರ ಸೂಕ್ತ ಪ್ರಾತಿನಿಧ್ಯಕ್ಕೆ ಅವಕಾಶ ಕೊಡುವುದಿಲ್ಲ. ಭಾರತದಲ್ಲಿ ಈಗ ಎಂತಹ ಪರಿಸ್ಥಿತಿಯೆಂದರೆ ಸ್ವಾತಂತ್ರ್ಯದ ಅರ್ಧ ಶತಮಾನದ ನಂತರವೂ ಮಹಿಳೆಯರ ಪ್ರಾತಿನಿಧ್ಯ ಶೋಚನೀಯವೆನಿಸುವಷ್ಟು ಅಸಮರ್ಪಕವಾಗಿದೆ. ಮಾತ್ರವಲ್ಲ, ಪರಿಸ್ಥಿತಿ ಸುಧಾರಿಸಲು ಮೀಸಲಾತಿಯಂತಹ ಬೆಂಬಲ ಕ್ರಮಗಳ ಅಗತ್ಯ ಬಂದಿದೆ. ಈ ಕಾರಣದಿಂದಾಗಿಯೇ ಎಲ್ಲಾ ರಾಜಕೀಯ ಪಕ್ಷಗಳು ಇಂತಹ ಮೀಸಲಾತಿ ನೀಡುವ ಬಗ್ಗೆ ಸಾರ್ವಜನಿಕವಾಗಿ ಮಾತುಕೊಟ್ಟಿವೆ. ಆದರೆ ಎಡಪಕ್ಷಗಳು ಬಿಟ್ಟು ಬೇರೆಲ್ಲಾ ಪಕ್ಷಗಳು, ವಿಶೇಷವಾಗಿ ಬಿಜೆಪಿ ಈ ಮಾತಿಗೆ ಪ್ರಾಮಾಣಿಕವಾಗಿ ಬದ್ಧವಾಗಿವೆಯೇ ಎಂಬ ಬಗ್ಗೆ ಈಗ ಗಂಭೀರವಾದ ಸಂದೇಹವೆದ್ದಿದೆ.

ಓಬಿಸಿಗಳಿಗೆ ಮೀಸಲಾತಿಯ ಪ್ರಶ್ನೆಯನ್ನು ಮಹಿಳಾ ಮೀಸಲಾತಿಯೊಂದಿಗಲ್ಲ, ಪ್ರತ್ಯೇಕವಾಗಿ ಚರ್ಚಿಸಬಹುದು, ಚರ್ಚಿಸಬೇಕು. ಇವೆರಡನ್ನೂ ಸೇರಿಸಿ ಮಹಿಳಾ ಮೀಸಲಾತಿ ಮಸೂದೆಯ ಅಂಗೀಕಾರವನ್ನು ತಡೆಯುವುದು ನಮ್ಮ ಪ್ರಜಾಪ್ರಭುತ್ವ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಸಾಕಷ್ಟು ಪ್ರಾತಿನಿಧ್ಯ ಕೊಡುವ ವಚನಕ್ಕೆ ಬಗೆದ ವಿಶ್ವಾಸಘಾತವೆಂದೇ ಹೇಳಬೇಕಾಗುತ್ತದೆ. ಬಿಜೆಪಿ ಮತ್ತೊಮ್ಮೆ ತಾನು ಪುರುಷ ಪ್ರಾಬಲ್ಯದ ಪ್ರತಿಗಾಮಿ, ಮತಾಂಧ, ಸೈದ್ಧಾಂತಿಕ ನೆಲೆಗೆ ಬದ್ಧವಾದ ಪಕ್ಷ ಎಂದು ತೋರಿಸಿಕೊಂಡಿದೆ. ಅವರಲ್ಲಿ ಕಿಂಚಿತ್ತಾದರೂ ಪ್ರಾಮಾಣಿಕತೆ ಉಳಿದಿದ್ದರೆ ತಕ್ಷಣ ಈ ಮಸೂದೆಯನ್ನು ಮಂಡಿಸಿ ಅದರಲ್ಲಿರುವ ವಿಭಿನ್ನ ವಿವಾದಗ್ರಸ್ತ ಪ್ರಶ್ನೆಗಳ ಮೇಲೆ ಸದಸ್ಯರು ಚರ್ಚೆ ಮಾಡಲು ಬಿಡಬೇಕು.

ಗೋಡ್ಸೆನಾಟಕ ನಿಷೇಧ: ಕೋಮುಶಕ್ತಿಗಳಿಗೆ ಪಾಠ

ಮಹಾತ್ಮಾಗಾಂಧಿಯ ಹಂತಕನನ್ನು ವೈಭವೀಕರಿಸುವ ನಾಟಕವೊಂದರ ವಿರುದ್ಧ ದೇಶಾದ್ಯಂತ ಭುಗಿಲೆದ್ದ ಆಕ್ರೋಶದ ಮುಂದೆ ಸಂಘ ಪರವಾರ ಕೊನೆಗೂ ತಲೆಬಾಗಬೇಕಾಯಿತು. ಸಂಘಪರಿವಾರದ ಸದಸ್ಯ ಪಕ್ಷವಾದ ಬಿಜೆಪಿ ನೇತೃತ್ವದ ಕೇಂದ್ರ ಸರಕಾರವೇ ಈ ನಾಟಕದ ಪ್ರದರ್ಶನವನ್ನು ನಿಷೇಧಿಸುವಂತೆ ಮಹಾರಾಷ್ಟ್ರ ಸರಕಾರಕ್ಕೆ ಸಲಹೆ ಮಾಡಿತ್ತು. ಶಿವಸೇನೆ-ಬಿಜೆಪಿ ಮೈತ್ರಿಕೂಟದ ಸರಕಾರ ನಾಟಕ ಪ್ರದರ್ಶನವನ್ನು ನಿಷೇಧಿಸಿತು.

'ಮೀ ನಾಥೂರಾಮ್ ಗೋಡ್ಸೆ ಬೋಲ್ತಾಯ್' (ನಾನು ನಾಥೂರಾಮ್ ಗೋಡ್ಸೆ ಮಾತಾಡುತ್ತಿದ್ದೇನೆ) ಇದು ವಿವಾದಕ್ಕೆ ಒಳಗಾಗಿರುವ ನಾಟಕ. ಕೋಮು ಸೌಹಾರ್ದಕ್ಕಾಗಿ ಜೀವನ ಪರ್ಯಂತ ದುಡಿದ ಮೋಹನದಾಸ್ ಕರಮಚಂದ ಗಾಂಧಿಯವರನ್ನು ಕೊಂದ ದುರುಳನೇ ನಾಥೂರಾಮ್ ಗೋಡ್ಸೆ

ಈಗಲೂ ದೇಶದೆಲ್ಲೆಡೆ ಕೋಮು ವಿದ್ವೇಷದ ವಿಷ ಬೀಜ ಬಿತ್ತುತ್ತಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರೆಸ್ಸೆಸ್) ಕಾರ್ಯಕರ್ತ ಆಗಿದ್ದವನು.

ಆರೆಸ್ಸೆಸ್ ಹಾಗೂ ಇಡೀ ಸಂಘ ಪರಿವಾರ ತನ್ನ ಅಲ್ಪಸಂಖ್ಯಾತ ವಿರೋಧಿ ಧೋರಣೆಗೆ ಅನುಗುಣವಾಗಿ ಗಾಂಧಿ ಹಂತಕನನ್ನು ವೈಭವೀಕರಿಸುವ, ಅವನ ಕೃತ್ಯವನ್ನು ಸಮರ್ಥಿಸುವ ಕೆಲಸವನ್ನು ಲಾಗಾಯ್ತಿನಿಂದಲೂ ಮಾಡಿಕೊಂಡು ಬಂದಿದೆ.

ಈ ನಾಟಕವೂ ಆ ಪ್ರಕ್ರಿಯೆಯ ಒಂದು ಭಾಗವಾಗಿಯೇ ಇದೆ. ಮುಂಬಯಿಯಲ್ಲಿ ಈ ನಾಟಕ ಪ್ರದರ್ಶನದ ಆರಂಭದ ಜತೆಯಲ್ಲೇ ಇಡೀ ದೇಶದಲ್ಲಿ ಪ್ರತಿಭಟನೆ ಅಲೆ ಎದ್ದಿತು. ಸಂಸತ್ತಿನ ಉಭಯ ಸದನಗಳಲ್ಲಿ ಮಾತ್ರವಲ್ಲದೆ ಅನೇಕ ರಾಜ್ಯಗಳ ವಿಧಾನಸಭೆಗಳಲ್ಲೂ ಸದಸ್ಯರು ಈ ನಾಟಕದ ವಿಷಯವನ್ನು ಪ್ರಸ್ತಾಪಿಸಿ ಅದನ್ನು ನಿಷೇಧಿಸುವಂತೆ ಒತ್ತಾಯಿಸಿದರು. ಕೇರಳ ಬಿಹಾರ ಅಸೆಂಬ್ಲಿಗಳಲ್ಲಿ ಚರ್ಚೆಯೇ ನಡೆಯಿತು. ರಾಜ್ಯಸಭೆಯಲ್ಲಿ, ಬಿಹಾರ ವಿಧಾನಸಭೆಯಲ್ಲಿ ಕಲಾಪಗಳು ಸ್ಥಗಿತ ಗೊಂಡವು.

ಜುಲೈ 17 ರಂದು ನಾಟಕ ಪ್ರದರ್ಶನ ನಡೆಯಲಿದ್ದ ಮುಂಬಯಿಯ ಶಿವಾಜಿ ಮಂದಿರದ ಬಳಿ ನಾಟಕವನ್ನು ಪ್ರತಿಭಟಿಸಿ ಮತ ಪ್ರದರ್ಶನ ನಡೆಸುತ್ತಿದ್ದವರ ಮೇಲೆ ಪೋಲೀಸರು ಲಾಠಿಪ್ರಹಾರ ಮಾಡಿದರು.

ಕೊನೆಗೂ ದೇಶದ ಜಾತ್ಯಾತೀತ ಶಾಂತಿಪ್ರಿಯ ಶಕ್ತಿಗಳ ಒತ್ತಡಕ್ಕೆ ಮಣಿದ ಮಹಾರಾಷ್ಟ್ರ ಸರಕಾರ ಜುಲೈ 18 ರಂದು ಈ ನಾಟಕವನ್ನು ಪ್ರದರ್ಶಿಸುವುದನ್ನು ನೀಷೇಧಿಸಿತು.



ಮುಂಬಯಿಯಲ್ಲಿ ಗೋಡ್ಸೆ ವೈಭವೀಕರಿಸುವ ನಾಟಕ ಪ್ರದರ್ಶನವನ್ನು ಪ್ರತಿಭಟಿಸುತ್ತಿದ್ದವರ ಮೇಲೆ ಸಂಘ ಪರಿವಾರ ಸರಕಾರದ ಪೊಲೀಸರ ದೌರ್ಜನ್ಯ

ಈ ನಾಟಕದ ಮೂಲಕ ದೇಶದ ಜಾತ್ಯತೀತ ಸ್ವರೂಪಕ್ಕೆ ಧಕ್ಕೆ ತರುವ ಕೋಮುವಾದಿ ಶಕ್ತಿಗಳ ಹುನ್ನಾರಕ್ಕೆ ಹಿನ್ನಡೆಯಾಗಿದೆ. ಇದೊಂದು ಒಳ್ಳೆಯ ವಿದ್ಯಮಾನ.

ಒಂದೇ ತಕ್ಕಡಿಯಲ್ಲಿ ತೂಗುವುದು ಸರಿಯಲ್ಲ:

ಈ ನಡುವೆ, ಗೋಡ್ಸೆ ನಾಟಕದ ವಿರುದ್ಧ ನಡೆದ ಚಳುವಳಿಯನ್ನು ಸಿನಿಮಾ ಹಾಗೂ ನಾಟಕರಂಗದ ಕೆಲವು ಪ್ರಮುಖರು ಟೀಕಿಸಿದ್ದಾರೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ವಿರುದ್ಧದ ಕ್ರಮ ಎಂದು ಗಿರೀಶ್ ಕಾರ್ನಾಡ್, ಶ್ಯಾಮ್ ಬೆನಗಲ್ ಗೋವಿಂದ ನಿಹಲಾನಿ, ಅಮೋಲ್ ಪಾಲೇಕರ್ ಮತ್ತು ಶಬಾನಾ ಆಜ್ಮಿ ಹೇಳಿದ್ದಾರೆ.

ಇವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಒಂದಲ್ಲ ಒಂದು ಸಂದರ್ಭದಲ್ಲಿ ಪ್ರಗತಿಪರ ಚಳುವಳಿಯೊಂದಿಗೆ ಗುರುತಿಸಿ ಕೊಂಡವರೇ. ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆಯ ಹೋರಾಟದಲ್ಲಿ ಪಾಲ್ಗೊಂಡವರೇ. ಹಾಗೆಂದ ಮಾತ್ರಕ್ಕೆ ಗೋಡ್ಸೆ ನಾಟಕದ ವಿರುದ್ಧದ ಚಳವಳಿಯನ್ನು ಅವರು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆ ಎಂದು ಪರಿಗಣಿಸುವುದು ಸರಿಯಾಗುತ್ತದೆಯೇ.

ಅದನ್ನೊಂದು ನಾಟಕ ಕೃತಿ ಎನ್ನುವುದಕ್ಕಿಂತ ಅದರ ಸಂದೇಶವೇನು ಅದು ಸಮಾಜಕ್ಕೆ ಮಾಡಲಿರುವ ಹಾನಿ ಏನೆಂಬುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಕೋಮುಸೌಹಾರ್ದದ ಚಳವಳಿಯೊಂದಿಗೂ ತಮ್ಮನ್ನು ಸದಾ ಗುರುತಿಸಿ ಕೊಳ್ಳುತ್ತಿರುವ ಸಾಂಸ್ಕೃತಿಕ ಕ್ಷೇತ್ರದ ಇವರು ಯಾವ ದುಷ್ಟ ಶಕ್ತಿಗಳು ಈ ಗೋಡ್ಸೆ ನಾಟಕದ ಸೂತ್ರಧಾರಿಗಳು ಎನ್ನುವುದನ್ನು ಅರಿತರೆ ಇದನ್ನು ಬೇರೆ ವಿಷಯವನ್ನು ಒಂದೇ ತಕ್ಕಡಿಯಲ್ಲಿ ತೂಗುವ ಗೋಜಿಗೆ ಹೋಗಲಾರರು ಎಂಬ ವಿಶ್ವಾಸ ಜಾತ್ಯಾತೀತ ಶಕ್ತಿಗಳದ್ದು.

– ವಿಶ್ವ

ಲೋಕಸಭಾಧ್ಯಕ್ಷ ಪೀಠದಲ್ಲಿ ಮಹಿಳೆಯಿದ್ದಿದ್ದರೆ.....

"ಒಬಿಸಿ ಮಹಿಳೆಯರ ಬಗ್ಗೆ ವಿಶೇಷ ಆತಂಕ ನೈಜವಾಗಿದ್ದಂತೆ ಕಾಣುವುದಿಲ್ಲ. ಈ ಮಸೂದೆಯನ್ನು ಮಂಡಿಸಬೇಕಾಗಿದ್ದ ದಿನ ಇದು ಕಂಡು ಬಂತು. ಅಷ್ಟೆಲ್ಲಾ ಗದ್ದಲಗಳಿಂದಾಗಿ ಈ ಮಸೂದೆಯನ್ನು ಮಂಡಿಸಲಾಗಲಿಲ್ಲ ಎಂಬುದನ್ನು ನಾನು ನಂಬುವುದಿಲ್ಲ. ಉದಾಹರಣೆಗೆ, ಗಲಭೆ-ಗದ್ದಲ ನಡೆಯುತ್ತಿದ್ದಾಗಲೇ ಕಾಗದ ಪತ್ರಗಳನ್ನು ಮೇಜಿನ ಮೇಲಿಡುವ ಪ್ರಕಟಣೆ ಆಯ್ತು, ಕಾಗದ ಪತ್ರಗಳನ್ನು ಇಡಲಾಯಿತು. ಅದೇ ರೀತಿ ಮಂತ್ರಿಗಳು 'ಮಸೂದೆ ಮಂಡಿಸಲು ಸದನದ ಅನುಮತಿ ಕೋರುತ್ತೇನೆ" ಎಂದು ಹೇಳಿದ್ದರೆ ಅದು ದಾಖಲಾಗುತ್ತಿತ್ತು. ಆಗ ಸಭಾಧ್ಯಕ್ಷರು ಈ ಮಸೂದೆಯ ಮಂಡನೆಗೆ ಯಾರು ಪರವಾಗಿದ್ದಾರೆ, ಯಾರು ವಿರೋಧವಾಗಿದ್ದಾರೆ ಎಂದು ಕೇಳಿ ಧ್ವನಿಮತದ ಮೂಲಕ ಸದನದ ಆಶಯವನ್ನು ನಿರ್ಧರಿಸಿ ಮಸೂದೆಯನ್ನು ಮಂಡಿಸಲು ಅವಕಾಶ ನೀಡಬಹುದಿತ್ತು. ಒಬ್ಬ ಮಹಿಳೆ ಸಭಾಧ್ಯಕ್ಷ ಪೀಠದಲ್ಲಿ ಇದ್ದಿದ್ದರೆ ಈ ಮಸೂದೆಯ ಮಂಡನೆಯಾಗುತ್ತಿತ್ತು.

ಗೀತಾ ಮುಖರ್ಜಿ

- ಸಿಪಿಐ ಸಂಸತ್ ಸದಸ್ಯೆ

ಏನು ರಾಜಕೀಯ ಕಾಣುತ್ತೀರಾ?

ಮಾನ್ಯ ಮಂತ್ರಿಗಳಿಗೆ ಇದರಲ್ಲಿ ರಾಜಕೀಯ ಕಂಡಿರುವುದು ಖೇದದ ಸಂಗತಿ. ಏಕೆಂದರೆ ನಿಜವಾಗಿ ಹೇಳಬೇಕೆಂದರೆ ನನಗೆ ಆಕೆಯ ದಕ್ಷತೆಯ ಬಗ್ಗೆ ಗೌರವವಿದೆ. ಏನೋ ರಾಜಕೀಯವಿದೆ ಎಂದಾಕೆ ತನ್ನ ಹೇಳಿಕೆಯಲ್ಲಿ ಹೇಳಿದ್ದಾರೆ. ಏನು ರಾಜಕೀಯ? ಬಡವರು ಬದುಕ ಬಯಸುತ್ತಾರೆ, ಅದೂ ಒಂದು ಕನಿಷ್ಟ ಶಿಫಾರಸ್ಸಿನೊಂದಿಗೆ. ಅದು ರಾಜಕೀಯವೇ? ಈ ದೇಶದಲ್ಲಿ ಕೂಲಿ ಕೇಳಿದರೆ ಅದು ರಾಜಕೀಯವೇ? ಏಕೆ? ಟಾಟಾ ಏನಾದರೂ ಕೇಳಿದರೆ ಸರಕಾರ ಅವರ ಮನೆಗೇ ಹೋಗಿ ಚರ್ಚೆ ಮಾಡುತ್ತದೆ. ಆರು ಲಕ್ಷ ಕಾರ್ಮಿಕರು ಕೇಳಿದರೆ ಮುಷ್ಕರ ಹಿಂತೆಗೆದುಕೊಳ್ಳಿ ಎನ್ನುತ್ತೀರಾ. ಏಕೆ? ಇದು ನಮ್ಮ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಪಜಾಸತ್ತಾತ್ಮಕ ಸರಕಾರಕ್ಕೆ ತಕ್ಕುದಾದ್ದಲ್ಲ......... ಇದೊಂದು ಕಾರ್ಮಿಕರು ಎತ್ತಿರುವ ಸರಳ ವಿಷಯ. ಸುಪ್ರೀಂ ಕೋರ್ಟ್ ಅದನ್ನು ಬೆಂಬಲಿಸಿದೆ, ತಲ್ವಾರ್ ಸಮಿತಿ ಬೆಂಬಲಿಸಿದೆ. ಭೂಮಿಯ ಮೇಲಿನ ಎಲ್ಲರೂ ಅದನ್ನು ಬೆಂಬಲಿಸಿದ್ದಾರೆ. ನೀವು ಮಾತ್ರ ಹೇಗೆ ವಿರೋಧಿಸಬಲ್ಲಿರಿ? ಆದ್ದರಿಂದ ದಯವಿಟ್ಟು ಕಾರ್ಮಿಕರೊಂದಿಗೆ ಮಾತುಕತೆ ನಡೆಸಿ ಅದನ್ನು ಪರಿಹರಿಸಿ.

- ಸಂಸತ್ತಿನಲ್ಲಿ ಅಂಚೆ ಮುಷ್ಕರದ ಮೇಲೆ ಮಾತನಾಡುತ್ತಾ ಸಿಐಟಿಯು ಅಧ್ಯಕ್ಷರು ಹಾಗೂ ಸಿಪಿಐ(ಎಂ) ಎಂ.ಪಿ. **ಇ.ಬಾಲಾನಂದನ್**

ಇದೆಂತಾ ವೈಪರೀತ್ಯ?

ಈ ಗ್ರಾಚ್ಯುಟಿಯೆಂಬ ಸಾಮಾಜಿಕ ಭದ್ರತೆಯನ್ನು ಬಲಪಡಿಸುವುದು ಸ್ವಾಗತಾರ್ಹವಾದರೂ ಕಾಂಟ್ರಾಕ್ಟ್ ಲೇಬರ್ ಹೆಚ್ಚುತ್ತಿರುವ ರೀತಿ ನೋಡಿದರೆ ಇದು ಅರ್ಥಹೀನವಾಗುವುದಿಲ್ಲವೇ? ಆದ್ದರಿಂದ ದಯವಿಟ್ಟು ಕಾಂಟ್ರಾಕ್ಟ್ ಪದ್ಧತಿಯನ್ನು ನಿಲ್ಲಿಸಿ... ಎನ್.ಟಿ.ಸಿ.ಯಲ್ಲಿ ಹಲವಾರು ನೌಕರರನ್ನು ಸ್ವಯಂನಿವೃತ್ತಿ ಯೋಜನೆಯ ಪ್ರಕಾರ ನಿವೃತ್ತಿಗೊಳಿಸಿದ್ದೀರಾ. ಎಂತಹಾ ವೈರುಧ್ಯ ನಡೆಯುತ್ತಿದೆ! - ಒಂದೆಡೆ ನಿವೃತ್ತಿ ವಯಸ್ಸನ್ನು 58 ರಿಂದ 60 ಕ್ಕೇರಿಸುತ್ತೀರಾ - ಇನ್ನೊಂದೆಡೆ ನೌಕರರು ಸ್ವಯಂ ನಿವೃತ್ತಿ ತಗೊಳ್ಳುವಂತೆ ಒತ್ತಡ ಹಾಕುತ್ತೀರಾ....

-ಗ್ರಾಚ್ಯುಟಿ ಪಾವತಿ ಶಾಸನ ತಿದ್ದುಪಡಿಯ ಮೇಲೆ ಸಂಸತ್ ಚರ್ಚೆಯಲ್ಲಿ ಮಾತನಾಡುತ್ತಾ ಸಿಪಿಐ(ಎಂ) ಸದಸ್ಯ ***ದೀಪಂಕರ್ ಮುಖರ್ಜಿ***

ಪೋಖ್ರಾನ್‌ನ ಧೂಳು ಸರಿದಾಗ ಈಗಿನ ಭಾವೋದ್ರೇಕ ಇಳಿದಾಗ ಒಂದು ವಿಷಯ ನಮಗೆ ಸ್ಪಷ್ಟವಾಗುತ್ತದೆ. ಅದೇನೆಂದರೆ ದೇಶದ ಬೆನ್ನ ಮೇಲೆ ಈಗೊಂದು ನಿರುಪಯುಕ್ತ ಅಸ್ತ್ರವಿದೆ ಎಂದು. ನಿರುಪಯುಕ್ತ ಮತ್ತು ವಿಪರೀತ ಖರ್ಚಿನದ್ದು...... ಪರಮಾಣು ಬಾಂಬು ನಿರರ್ಥಕ ಎಂದು ಬಹಳ ಹಿಂದೇನೇ ಅಂತರ್‍ರಾಷ್ಟ್ರೀಯ ರಂಗದ ಪ್ರಖ್ಯಾತ ವಿಶ್ಲೇಷಕರು ಗುರುತಿಸಿ ಬಿಟ್ಟಿದ್ದಾರೆ. "ನನ್ನ ಪ್ರಕಾರ ಪರಮಾಣು ಬಾಂಬ್ ಮನುಷ್ಯ ಸಂಶೋಧಿಸಿರುವ ಅತ್ಯಂತ ನಿರುಪಯುಕ್ತ ಅಸ್ತ್ರ. ಯಾವುದೇ ರಚನಾತ್ಮಕ ಉದ್ದೇಶಕ್ಕೆ ಅದನ್ನು ಬಳಸಲು ಸಾಧ್ಯವಿಲ್ಲ. ಪರಮಾಣು ಬಾಂಬಿನ ವಿರುದ್ಧ ಪರಿಣಾಮಕಾರಿ ರಕ್ಷಣೆಗಾಗಿಯೂ ಬಳಸುವ ಸಾಧ್ಯವಿಲ್ಲ" ಎಂದು 1981 ರಲ್ಲಿ ಅಮೆರಿಕಾದ ರಾಜತಾಂತ್ರಿಕ ಜಾರ್ಜ್ ಕೆನ್ನನ್ ಹೇಳಿದ್ದರು.

ಪರಮಾಣು ತಡೆಯೆನ್ನುವುದು ಒಂದು ಮಿಥ್ಯ. ಇಸ್ರೇಲ್ ಬಳಿ ಪರಮಾಣು ಬಾಂಬ್ ಇದ್ದರೂ (ವಿಚಿತ್ರವೆಂದರೆ ಈ ಬಗ್ಗೆ ಯಾರೂ ಏನೂ ಹೇಳುವುದಿಲ್ಲ) ಪ್ಯಾಲೆಸ್ತೈನ್ ಹುಡುಗರು ಇಸ್ರೇಲಿ ಸೈನಿಕರ ಮೇಲೆ ಕಲ್ಲು ತೂರುವುದನ್ನು ತಪ್ಪಿಸಲು ಅದಕ್ಕಾಗಿಲ್ಲ. ಯಾವ ತಾಪ ಪರಮಾಣು ಬಾಂಬಿನಿಂದಲೂ ಭಾರತದಾದ್ಯಂತ ನಡೆಯುತ್ತಿರುವ ಹಿಂಸಾಚಾರವನ್ನು ತಡೆಯಲು ಸಾಧ್ಯವಿಲ್ಲ. ಕಾಶ್ಮೀರದಲ್ಲಿ ಬಂಡುಕೋರತನ, ಭಯೋತ್ಪಾದನೆಯನ್ನು ತಡೆಯಲು ಕೂಡಾ ಅದು ಪರಿಣಾಮಕಾರಿ ಅಸ್ತ್ರವಾಗದು.

ಈ ಬಾಂಬು ಭಾರತೀಯ ಜನಗಳಲ್ಲಿ ಸುಭದ್ರತೆಯ ಭಾವನೆ ತರುವ ಬದಲು ಇನ್ನಷ್ಟು ಅಭದ್ರತೆಯ ಭಾವನೆ ತರುತ್ತದೆ. ನೆರೆದೇಶಗಳ ನಡುವೆ ಗಂಭೀರ ಪರಿಸ್ಥಿತಿ ಉಂಟಾದಗಲೆಲ್ಲಾ ಯುದ್ಧಕೋರ ಬಡಾಯಿ ಕೇಳ ಬಂದಾಗಲೆಲ್ಲಾ ಇನ್ನೇನು ಕಾದಿದೆಯೋ ಆತಂಕ ಇನ್ನು ಮುಂದೆ.


ದೇಶಪ್ರೇಮದ, ಮಿಲಿಟರಿ ಸಾಮರ್ಥ್ಯದ ಒಂದು ಖೋಟಾ ಪ್ರದರ್ಶನದ ಮೂಲಕ ನಮ್ಮನ್ನು ವಂಚಿಸಲಾಗುತ್ತಿದೆ. ನಮ್ಮ ಸರಕಾರದ ಮುಖಂಡರು ರಕ್ತ, ಬೆವರು, ಶ್ರಮ ಹಾಗೂ ಕಣ್ಣೀರಿನ ಭರವಸೆ ನೀಡುತ್ತಿದ್ದಾರೆ.

ಬಾಂಬನ್ನು ಹಿಂದುತ್ವದ ಒಂದು ಭಾಗವಾಗಿ ಪರಿವರ್ತಿಸಲಾಗಿದೆ. ಇವೆರಡೂ ಸೇರಿ ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತವನ್ನೇ ನಾಶಮಾಡುವ ಒಂದು ಉದ್ರೇಕಕಾರಿ ಮಿಶ್ರಣವಾಗಬಲ್ಲದು.

- ಪ್ರಖ್ಯಾತ ವ್ಯಂಗ್ಯ ಚಿತ್ರಕಾರ **ಅಬುಅಬ್ರಾಹಂ.**

ವಾರದ ವ್ಯಂಗ್ಯ ಚಿತ್ರ

ಅಮೆರಿಕಾ-ಭಾರತ ರಹಸ್ಯ ಮಾತುಕತೆಗಳ ಬಗ್ಗೆ 'ಟೈಂಸ್ ಆಫ್ ಇಂಡಿಯಾ'ದಲ್ಲಿ ಆರ್.ಕೆ.ಲಕ್ಷ್ಮಣ್



Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27